ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಜೂನ್ 2019 ಬೆಲೆ ರೂ. 5/-





ಶ್ರೀ ವರಾಹಸ್ವಾಮಿಯವರ ಆಲಯ,
ತಿರುಮಲೆ

ತಿರುಮಲೆ ತಿರುಪತಿ ದೇವಸ್ಥಾನಗಳು

## 2019 ಏಪ್ರಿಲ್ 24 ರಿಂದ 27 ರ ವರೆಗೆ ತಿರುಮಲೆ ಶ್ರೀ ವರಾಹ ಸ್ವಾಮಿಯವರ ಆಲಯದಲ್ಲಿ ತಿ.ತಿ.ದೇ ನಿರ್ವಹಿಸಿದ ಬಾಲಾಲಯ, ಅಷ್ಟಬಂಧನ, ಮಹಾಸಂಪ್ರೋಕ್ಷಣ ದೃಶ್ಯಗಳು




ತಿ.ತಿ.ದೇ. ಅರ್ಚಕ ಬೃಂದದೊಂದಿಗೆ ದೇವಸ್ಥಾನದ ಉನ್ನತಾಧಿಕಾರಿಗಳು




ಅಷ್ಟಬಂಧನ ದ್ರವ್ಯವನ್ನು ಒನಕೆಯೊಂದಿಗೆ ಕುಟ್ಟಿ ಸಿದ್ಧಪಡಿಸುತ್ತಿರುವ ದೃಶ್ಯ



ಋತ್ವಿಕರು ವೈದಿಕ ಕಾರ್ಯಕ್ರಮಗಳನ್ನು ನಿರ್ವಹಿಸುವುದಕ್ಕಾಗಿ
ಆಲಯ ಪ್ರವೇಶ ಮಾಡುತ್ತಿರುವ ದೃಶ್ಯ



ತಿರುಮಲೆ ಪುರವೀಧಿಗಳಲ್ಲಿ ಮೆರೆಯುತ್ತಿರುವ ಶ್ರೀ ವರಾಹಸ್ವಾಮಿಯವರು





ಶ್ರೀ ವರಾಹ ಸ್ವಾಮಿಯವರ ಗರ್ಭಾಲಯ ಮಹಾಸಂಪ್ರೋಕ್ಷಣ ಕಾರ್ಯಕ್ರಮ

ಓಂ ಇತ್ಯೇಕಾಕ್ಷರಂ ಬ್ರಹ್ಮ ವ್ಯಾಹರನ್ಮಾಮನುಸ್ಮರನ್
ಯಃ ಪ್ರಯಾತಿ ತ್ಯಜನ್ ದೇಹಂ ಸ ಯಾತಿ ಪರಮಾಂಗತಿಮ್

- (ಶ್ರೀ ಮದ್ಭಗವದ್ಗೀತೆ ಅಧ್ಯಾಯ - 8, ಶ್ಲೋಕ -13)



ಈ ಯೋಗಧಾರಣೆಯ ಸ್ಥಿತಿಯನ್ನು ಸಾಧಿಸಿ ವರ್ಣಗಳ ಪರಮ ಸಂಯೋಜನೆಯಾದ ಓಂ ಎಂಬ ಅಕ್ಷರವನ್ನು ಉಚ್ಚರಿಸುತ್ತ, ದೇವೋತ್ತಮ ಪರಮ ಪುರುಷನನ್ನು ಕುರಿತು ಧ್ಯಾನಿಸುತ್ತ ದೇಹವನ್ನು ಬಿಟ್ಟವನು ನಿಶ್ಚಯವಾಗಿಯೂ ಆಧ್ಯಾತ್ಮಿಕ ಲೋಕಗಳನ್ನು ಹೊಂದುವನು.



ಬಾರಯ್ಯ ಶ್ರೀನಿವಾಸ ಭಕ್ತರ ಮನೆಗೆ
ತೋರಯ್ಯ ನಿನ್ನಪಾದ । ತೋಯ ಜಾಂಬಕನೇ
ದುರುಳರನು ತರಿದಂಥ ವರಚಕ್ರಧಾರಿ
ಪರಮಾತ್ಮ ಪರಬ್ರಹ್ಮ ಪರರಿಗುಪಕಾರಿ
ಅರಣ್ಯದಲಿ ಮೊರೆಯಿಟ್ಟ ಕರಿರಾಜಗೊಲಿದಿ
ತರಳ ಪ್ರಹ್ಲಾದನ್ನ ವೈರಿಯ ಮುರಿದಿ
ವರಶೇಷಗಿರಿಯಲ್ಲಿ ಇರುತ ನೀನಿರುವಿ
ಹರಿದಾಸರು ಕರೆದರೇ ಎಲ್ಲಿದ್ದರು ಬರುವಿ
ಅನಂತ ನಾಮನು ನೀನು ಅನಂತ ಸದ್ಗುಣನೇ
ನೆನೆದವರ ಗೊಲಿವಂತ ಹನುಮಂತಗೀಶ
ಅಜಭವಾದಿಪ ನೀನು ವಿಜಯ ಸಾರಥಿಯೇ
ತ್ರಿ ಜಗವಂದಿತ ಈಶ ವಿಜಯ ವಿಠ್ಠಲನೇ.
ರಮಾರಮಣ ಶ್ರೀ ವೆಂಕಟರಮಣುನಿಕೀ ಜೈ

- ಶ್ರೀ ವಿಜಯದಾಸರು

# ದಯಾ ಶತಕಮ್



- ಎನ್. ನರಸಿಂಹಾಚಾರ್ಯ

ಫಲವಿತರಣದಕ್ಷಂ ಪಕ್ಷಪಾತಾನಭಿಜ್ಞಂ ಪ್ರಗುಣಮನುವಿಧೇಯಂ ಪ್ರಾಪ್ಯ ಪದ್ಮಾ ಸಹಾಯಂ ।
ಮಹತಿ ಗುಣಸಮಾಜೇ ಮಾನಪೂರ್ವಂ ದಯೇ ತ್ವಂ ಪ್ರತಿವದಸಿ ಯಥಾರ್ಹಂ ಪಾಪ್ಮನಾಂ ಮಾಮಕಾನಾಮ್ ॥೩೩॥

ದಯಾದೇವಿಯು ತಮ್ಮ ಪಾಪಗಳನ್ನು ಕುರಿತು ಪ್ರತಿವಾದ ಮಾಡುವ ರೀತಿಯನ್ನು ಈ ಪದ್ಯದಲ್ಲಿ ವರ್ಣಿಸುತ್ತಾರೆ. ಲೋಕದಲ್ಲಿ ಯಾರಾದರೂ ಇಬ್ಬರಿಗೆ ವಿವಾದವುಂಟಾದಾಗ ಯೋಗ್ಯನಾದ ನ್ಯಾಯಾಧಿಪತಿಯನ್ನು ಹೊಂದಿ ತಮ್ಮ ತಮ್ಮ ವಾದಗಳನ್ನು ಮುಂದಿಡುವರು. ಸರ್ವವಿಧಯೋಗ್ಯತೆಯನ್ನೂ ಹೊಂದಿರುವ ಆ ನ್ಯಾಯಾಧಿಪತಿಯು ಇಬ್ಬರ ವಾದಗಳನ್ನು ಕೇಳಿ ನ್ಯಾಯವಾದ ತೀರ್ಪನ್ನು ಕೊಡುವುದು ಪದ್ಧತಿ. ಅದೇ ರೀತಿಯಾಗಿ ಇಲ್ಲಿಯೂ ಒಂದು ವಿಚಾರಣೆಯು ನಡೆಯುವುದೆಂದು ಕವಿಯು ಚಿತ್ರಿಸಿರುತ್ತಾರೆ.

ನ್ಯಾಯಾಧಿಪತಿಯು ಆಯಾಯ ಕೆಲಸಗಳಿಗೆ ಸರಿಯಾದ ಫಲಗಳನ್ನು ಕೊಡುವುದರಲ್ಲಿ ಸಮರ್ಥನಾಗಿರಬೇಕು; ಯಾವನಾದರೊಬ್ಬ ಕಕ್ಷಿಯಲ್ಲಿ ಅಭಿಮಾನದಿಂದ ಪಕ್ಷಪಾತಮಾಡಿ ತೀರ್ಪನ್ನು ಕೊಡದಂಥವನಾಗಿರಬೇಕು; ಉತ್ತಮವಾದ ಗುಣಗಳುಳ್ಳವನಾಗಿರಬೇಕು; ಎಲ್ಲರೂ ತಮ್ಮ ತಮ್ಮ ವಾದಗಳನ್ನು ಆತನಲ್ಲಿ ನಿರ್ಭಯವಾಗಿ ಹೇಳಿಕೊಳ್ಳುವಂತೆ ಸುಲಭನಾಗಿರಬೇಕು. ನ್ಯಾಯಸ್ಥಾನದಲ್ಲಿ ಪಕ್ಷಪಾತವನ್ನರಿಯದವರೂ ಮೇಧಾವಿಗಳೂ ಆದ ಹಲವಾರು ಹಿರಿಯರು ಇರಬೇಕು; ಇಂತಹ ಸಭೆಯಲ್ಲಿ ವಾದಿ ಪ್ರತಿವಾದಿಗಳು ತಮ್ಮ ತಮ್ಮ ವಾದಗಳನ್ನು ಮುಂದಿಟ್ಟರೆ ಸಭೆಯಲ್ಲಿರುವ ಹಿರಿಯರ ಅಭಿಪ್ರಾಯಗಳನ್ನು ಅನುಸರಿಸಿ ನ್ಯಾಯಾಧಿಪತಿಯು ತೀರ್ಪನ್ನೀಯುವನು. ಅದೇ ರೀತಿಯಾಗಿ ಇಲ್ಲಿಯೂ ಜೀವನ (ಕವಿಯ) ಪಾಪಗಳು ವಾದಿಗಳು; ದಯಾದೇವಿ ಪ್ರತಿವಾದಿ; ಸಭೆಯಲ್ಲಿರುವ ಹಿರಿಯರೆಂದರೆ ಭಗವಂತನ ಜ್ಞಾನ, ಬಲವೇ ಮೊದಲಾದ ಕಲ್ಯಾಣಗುಣಗಳು ನ್ಯಾಯಾಧಿಪತಿಯು ಲಕ್ಷ್ಮಿಯೊಡನೆ ಕೂಡಿದ ಪರಮಪುರುಷನಾದ ಶ್ರೀನಿವಾಸನು. ಇಂತಹ ಸಭೆಯಲ್ಲಿ ವಾದಿಗಳಾದ ಪಾಪಗಳು "ನಾಭುಕ್ತಂ ಕ್ಷೀಯತೇ ಕರ್ಮ ಕಲ್ಪಕೋಟಿಶತೈರಪಿ" ಅಂದರೆ, ಕಲ್ಪಕೋಟಿಕಾಲವಾದರೂ ಮಾಡಿದ ಕರ್ಮಗಳ ಫಲವನ್ನು ಅನುಭವಿಸದಿದ್ದರೆ ಆ ಕರ್ಮವು ನಾಶವಾಗದು ಎಂಬಿವೇ ಮೊದಲಾದ ಪ್ರಮಾಣಗಳಿಂದ ಈ ಸಂಸಾರಿಯಾದ ಚೇತನನು ತಾನು ಮಾಡಿದ ಕರ್ಮಗಳ ಫಲವನ್ನು ಅನುಭವಿಸಿಯೇ ತೀರಬೇಕು. ಆ ಕರ್ಮಗಳು ನಾಶವಾಗಲು ಬೇರೆ ಮಾರ್ಗವಿಲ್ಲ. ಆದ್ದರಿಂದ, ಇವನು ಮಾಡಿದ ಪಾಪಗಳಿಗೆ ಸರಿಯಾದ ದಂಡನೆಯನ್ನು ವಿಧಿಸಬೇಕೆಂದು ವಾದಿಸುವುವು. ಈ ವಾದಕ್ಕೆ ಪ್ರತಿವಾದವನ್ನು ದಯಾದೇವಿಯು ಮುಂದಿನ ಪದ್ಯದಲ್ಲಿ ಮಾಡುವಳೆಂದು ಕೆಲವರು ಹೇಳುತ್ತಾರೆ. ಮತ್ತೆ ಕೆಲವರು ಹಿರಿಯರ ಅಭಿಪ್ರಾಯದಂತೆ ಈ ಪದ್ಯದಲ್ಲಿಯೇ ಪ್ರತಿವಾದದ ರೀತಿಯನ್ನು ಪ್ರತಿಪಾದಿಸಬಹುದು. ಹೇಗೆಂದರೆ - ಈ ಜೀವನು ಅನೇಕ ಪಾಪಗಳನ್ನು ಮಾಡಿರುವನೆಂಬುದೇನೋ ವಾಸ್ತವ. ಆದರೆ, ಶಾಸ್ತ್ರಗಳಲ್ಲಿ ಹೇಳಿರುವ 'ನಾಭುಕ್ತಂ' (ಕರ್ಮಗಳನ್ನು ಅವುಗಳ ಫಲಗಳನ್ನು ಅನುಭವಿಸಿಯೇ ತೊಲಗಿಸಬೇಕು) ಎಂಬ ಪ್ರಮಾಣವು ಪ್ರಪನ್ನನ ವಿಷಯದಲ್ಲಲ್ಲ. ಪ್ರಪತ್ತಿಯೇ ಮೊದಲಾದ ಬ್ರಹ್ಮವಿದ್ಯೆಯಲ್ಲಿ ನಿರತನಾದವನಿಗೆ ಆ ವಿದ್ಯೆಯ ಮಹಿಮೆಯಿಂದ ಅಭ್ಯುಪಗತ ಪ್ರಾರಬ್ಧವೆಂಬ - ಅನುಭವಿಸುವುದಾಗಿ ಒಪ್ಪಿಕೊಂಡಿರುವ ಕರ್ಮವು ಹೊರತಾಗಿ ಉಳಿದ ಎಲ್ಲ ಕರ್ಮಗಳೂ - "ಪಾರಬ್ಧೇತರಪೂರ್ವಪಾಪ ಮಖಿಲಂ ಪ್ರಾಮಾದಿಕಂ ಚೋತ್ತರಂ" ಎಂಬಂತೆ ಇವನನ್ನು ಬಂಧಿಸಲಾರವು - ಎಂದು ಶಾಸ್ತ್ರಗಳೂ, ಭಗವಂತನೂ ಹೇಳಿರುವುದರಿಂದ ಆ ರೀತಿಯಾದ ಕರ್ಮಗಳಿಗೆ ಫಲವನ್ನು ಕೊಡದಿರುವುದು ಮಾತ್ರವಲ್ಲ, ಮೋಕ್ಷವೆಂಬ ಉತ್ತಮ ಪುರುಷಾರ್ಥವನ್ನು ಕರುಣಿಸಿ ಇವನನ್ನು ಕಾಪಾಡಬೇಕೆಂಬುದೇ ದಯಾದೇವಿಯ ಪ್ರತಿವಾದ. ಹೀಗೆ ದಯಾದೇವಿಯ ಪ್ರತಿವಾದವನ್ನು ಕೇಳಿದ ಜ್ಞಾನವೇ ಮೊದಲಾದ ಮಹಾಗುಣಗಳು ಇವಳ ವಾದವು ಸರಿಯಾದುದೆಂದು ಹೇಳುತ್ತಿರಲು, ಪಕ್ಕದಲ್ಲಿರುವ ಲಕ್ಷ್ಮಿಯೂ ಕೂಡ ಅನುಮೋದಿಸುತ್ತಿರಲು, ನ್ಯಾಯಾಧಿಪತಿಯಾದ ಪರಮ ಪುರುಷನು ಈ ದಯಾದೇವಿಯ ಪರವಾಗಿಯೇ ತೀರ್ಪನ್ನಿತ್ತು ಈ ಜೀವನನ್ನು ಕರ್ಮ ಬಂಧದಿಂದ ಬಿಡಿಸುವನೆಂಬ ಶಾಸ್ತ್ರಾರ್ಥವು ಇಲ್ಲಿ ವಿವಕ್ಷಿತವಾದುದು.

ವೇಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ
ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ
ಸಂಪುಟ - 50 ಸಂಚಿಕೆ -1

ಶ್ರೀ ವಿಕಾರಿನಾಮ ಸಂವತ್ಸರ
ವೈಶಾಖ - ಜ್ಯೇಷ್ಠಮಾಸ
ಸಂಚಿಕೆ



## ಜೂನ್ 2019

## ವಿಷಯಸೂಚಿಕೆ

ಸಂಪಾದಕೀಯ 6
ತಿರುಮಲೆ ಸ್ವಾಮಿಯ ಜ್ಯೇಷ್ಠಾಭಿಷೇಕ ಮಹೋತ್ಸವ 7
- ಕೆ. ನರಸಿಂಹಮೂರ್ತಿ
ತಾಮ್ರ ಪರ್ಣಿ ಪುಷ್ಕರ ಪರ್ವಕಾಲ 11
- ಶ್ರೀಮತಿ. ಸುಮನ ಬದರಿನಾಥ್
ಯಶೋದಾ ಮಾತೆಯ ವಾತ್ಸಲ್ಯ 15
- ಶ್ರೀಮತಿ.ಎಸ್. ಕಲ್ಯಾಣಿ
ಸಂಸ್ಕಾರ ಸಮನ್ವಿತ ಜೀವನವೃತ್ತಿ 17
- ಆರ್.ಎನ್.ಎನ್. ಮೂರ್ತಿ
ಮುಂಡಕೋಪನಿಷತ್ 20
- ಶ್ರೀಮತಿ. ಎ. ಗೀತ ವೀರರಾಘವನ್
ಆಚಾರ್ಯಮಧ್ವರು ಸಂದರ್ಶಿಸಿದ ತಾಣಗಳು 23
- ವಿದ್ವಾನ್. ಬಿ. ಗೋಪಾಲಾಚಾರ್
ಹಸಿರುತೋರಣ
ಜಲಜ ನಿವಾಸಿನಿಯ ಜಲ ವಿಹಾರೋತ್ಸವಗಳು! 31
-ಶ್ರೀಮತಿ. ಗೀತಾ
ಶ್ರೀ ಪ್ರಸನ್ನ ವೆಂಕಟೇಶ್ವರ ಸ್ವಾಮಿಯವರ ಆಲಯ 35
- ಶ್ರೀಮತಿ. ಎಸ್. ಸುರೇಖ
ತಿರುಪತಿ ಶ್ರೀವೆಂಕಟೇಶ್ವರ 39
- ದಿ|| ಬಿ. ಎನ್. ಶ್ರೀನಿವಾಸನ್
ಭಕ್ತ ಧ್ರುವ ಚರಿತ್ರೆ 42
- ಡಿ. ಎಸ್. ಬದ್ರಿನಾಥ್
ಹಿಮಾಲಯ ಮತ್ತು ಆಧ್ಯಾತ್ಮ - ಒಂದು ಚಿಂತನೆ 46
- ಶ್ರೀಮತಿ. ನಂ. ನಾಗಲಕ್ಷ್ಮೀ
ಭಗವದ್ಗೀತೆ ಕೊಡುವ ಅವಿಸ್ಮರಣೀಯ ಜ್ಞಾನ 49
- ಡಿ. ಎಸ್. ಭೂಮಿಕ
ಔಷಧೀಯ ಗುಣಗಳ ನಿಧಿ ಇಂಗು 52
- ಶ್ರೀಮತಿ.

ಮುಖಚಿತ್ರ - ಸ್ವಾಮಿಯವರ ಜ್ಯೇಷ್ಠಾಭಿಷೇಕ ಮಹೋತ್ಸವ, ತಿರುಮಲೆ
ಹಿಂಬದಿಚಿತ್ರ - ಶ್ರೀ ಪದ್ಮಾವತಿ ಅಮ್ಮನವರ ತೆಪ್ಪೋತ್ಸವ, ತಿರುಚಾನೂರು

**ಗೌರವ ಸಂಪಾದಕರು**
ಶ್ರೀ ಅನಿಲ್‌ಕುಮಾರ್ ಸಿಂಘಾಲ್, ಐ.ಎ.ಎಸ್
ಕಾರ್ಯನಿರ್ವಹಣಾಧಿಕಾರಿ,ತಿ.ತಿ.ದೇ.,ತಿರುಪತಿ.
**ಪ್ರಧಾನ-ಸಂಪಾದಕರು**
ಡಾ||ಕೆ.ರಾಧಾರಮಣ,ಎಮ್.ಎ.ಎಮ್.ಫಿಲ್.ಪಿಎಚ್.ಡಿ.
**ಸಂಪಾದಕರು**
ಡಾ|| ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.
**ಮುದ್ರಣ**
ಶ್ರೀ ಆರ್.ವಿ. ವಿಜಯಕುಮಾರ್, ಐ.ಎ.ಐ.ಇಡಿ.,
ಉಪಕಾರ್ಯನಿರ್ವಹಣಾಧಿಕಾರಿ,
(ಪ್ರಕಾಶನ ಮತ್ತು ಮುದ್ರಣಾಲಯ),
ತಿ.ತಿ.ದೇ.,ಮುದ್ರಣಾಲಯ,ತಿರುಪತಿ.
ಶ್ರೀ ಪಿ.ಶಿವಪ್ರಸಾದ್ ತಿ.ತಿ.ದೇ., ತಿರುಪತಿ.
**ವಿಶ್ರಾಂತಿ ಚಿತ್ರಕಾರರು**
ಡಿ.ಟಿ.ಪಿ.
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ.ತಿರುಪತಿ.
**ಛಾಯಗ್ರಹಣ:**
ಶ್ರೀ ಪಿ.ಎನ್.ಶೇಖರ್,
ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.

| | |
|---|---|
| ಬಿಡಿ ಪ್ರತಿ | ರೂ. 05/- |
| ವಾರ್ಷಿಕ ಚಂದಾ | ರೂ. 60/- |
| ಆಜೀವ ಚಂದಾ | ರೂ. 500/- |
| ವಿದೇಶಿ ವಾರ್ಷಿಕ ಚಂದಾ | ರೂ. 850/- |

ಇತರ ವಿವರಗಳಿಗೆ
ಕಾರ್ಯಾಲಯ : 0877 - 2264543
ಡಿ.ಟಿ.ಪಿ. ವಿಭಾಗ: 0877 - 2264359
ಸಂಪಾದಕರು : 0877 - 2264360

24x7 ಕೆಲಸ ಮಾಡುವ
ದೂರವಾಣಿ ಸಂಖ್ಯೆ
0877 - 2277777,
2233333
ಸಲಹೆ/ದೂರುಗಳಿಗೆ ಟೋಲ್‌ಫ್ರೀ ಸಂಖ್ಯೆ:
1800 - 425 - 4141

ಲೇಖನ / ಚಂದಾ ಮಿಕ್ಕ ವಿವರಗಳಿಗೆ
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ-517507
ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org ಮೂಲಕ
ವೀಕ್ಷಿಸಬಹುದು.

ಸಪ್ತಗಿರಿಯಲ್ಲಿ ಪ್ರಕಟವಾಗುವ
ಲೇಖನಗಳಲ್ಲಿನ ಅಭಿಪ್ರಾಯಗಳು
ಸಂಪಾದಕವರ್ಗದ, ಪತ್ರಿಕೆಯ,
ಅಭಿಪ್ರಾಯಗಳೇ ಆಗಿರಬೇಕು
ಎಂದಿಲ್ಲ. - ಸಂಪಾದಕ

ಸಲಹೆ/ಸೂಚನೆ/ದೂರುಗಳಿಗಾಗಿ
sapthagiri_helpdesk@
tirumala.org

ಸಂಪಾದಕೀಯ

# ಶ್ರೀ ಹರಿಯ  ಅಕ್ಷರ ಸಿರಿ

# "ಸಪ್ತಗಿರಿ"

ಪ್ರಜೆಗಳಲ್ಲಿ ಭಕ್ತಿ, ಸತ್ಪ್ರವರ್ತನೆ, ಸದಾಚಾರ, ಧರ್ಮಾಚರಣೆಯಂತಹಾ ಸಾತ್ವಿಕ ಗುಣಗಳನ್ನು ಹುಟ್ಟುಹಾಕಿ, ಅವರನ್ನು ಸನ್ಮಾರ್ಗದಲ್ಲಿ ಮುನ್ನಡೆಯಸುವ ವಿಷಯದಲ್ಲಿ ಧಾರ್ಮಿಕ ಪತ್ರಿಕೆಗಳ ಪಾತ್ರ ವಿಶೇಷವಾದುದು. ಅದರಲ್ಲೂ ತಿ.ತಿ.ದೇ ಪ್ರಕಾಶನದಡಿಯಲ್ಲಿ ಮುದ್ರಿತವಾಗುತ್ತಿರುವ **"ಸಪ್ತಗಿರಿ"** ಧಾರ್ಮಿಕ ಮಾಸಪತ್ರಿಕೆಯ ಸ್ಥಾನ ಮತ್ತಷ್ಟು ಪ್ರತ್ಯೇಕವಾದದ್ದು. ಪ್ರಾಚೀನ ಕಾಲದಲ್ಲಿ ಪ್ರಜೆಗಳಿಗೆ ಯಾವುದಾದರೂ ಸಂದೇಹ ಬಂದರೆ, ಅನುಮಾನಗಳು ಉಂಟಾದರೆ ಯಾವುದಾದರೂ ಪುರಾಣ ಅಥವಾ ಇತಿಹಾಸದ ಬಗೆಗೆ ಚೆನ್ನಾಗಿ ತಿಳಿದಿರುವಂತಹಾ ಮಹರ್ಷಿಗಳ ಬಳಿಗೋ, ಆಶ್ರಮಗಳಿಗೋ, ಧರ್ಮಪೀಠಗಳಿಗೋ ಹೋಗಿ ಅಲ್ಲಿ ತಮ್ಮ ಪ್ರಶ್ನೆಗಳಿಗೆ ಉತ್ತರವನ್ನು ಹುಡಿಕಿಕೊಳ್ಳುತ್ತಿದ್ದರು. ಈಗಿನ ಯಾಂತ್ರಿಕಯುಗದಲ್ಲಿ ಶರವೇಗದಲ್ಲಿ ಉರುಳುತ್ತಿರುವ ಜೀವನಕಾಲದಲ್ಲಿ ಕುಡಿದ ನೀರು ಅಲುಗಾಡದಂತೆ ಧರ್ಮ ಸಂದೇಹಗಳನ್ನು, ಆಧ್ಯಾತ್ಮಿಕ ವಿಷಯಗಳನ್ನು ತಿಳಿಯಪಡಿಸುತ್ತಾ, ಜಿಜ್ಞಾಸೆಯುಳ್ಳ ಓದುಗರ ಮನೆಯಂಗಳದಲ್ಲಿ ಸಾಕ್ಷಾತ್ತು ಶ್ರೀ ಸಪ್ತಗಿರೀಶನ ವರಪ್ರಸಾದದಂತೆ ಈ **"ಸಪ್ತಗಿರಿ"** ಆಧ್ಯಾತ್ಮಿಕ ಮಾಸ ಪತ್ರಿಕೆ ಪ್ರತ್ಯಕ್ಷವಾಗುತ್ತದೆ.

ಭಕ್ತರಿಗೆ, ಓದುಗರಿಗೆ ತಿರುಮಲೇಶನ ದಿವ್ಯ ಚರಿತ್ರೆ, ಶ್ರೀ ಶ್ರೀನಿವಾಸನ ದರ್ಶನದ ವೇಳೆಗಳು ಉತ್ಸವಗಳು, ವಸತಿ ಸೌಕರ್ಯಗಳು, ಮುಂತಾದ ಮುಖ್ಯ ವಿಷಯಗಳ ಬಗೆಗೆ ತಿಳಿಸಬೇಕೆಂಬ ಉದ್ಧೇಶದಿಂದ, ಆ ಅತ್ಯುತ್ತಮ ಸಂಕಲ್ಪದೊಂದಿಗೆ **ತೆಲುಗು, ತಮಿಳು, ಹಿಂದಿ, ಕನ್ನಡ, ಸಂಸ್ಕೃತ, ಇಂಗ್ಲೀಷ್** ಭಾಷೆಗಳಲ್ಲಿ ಹೊಮ್ಮುತ್ತಿರುವ ಈ ಧಾರ್ಮಿಕ ಮಾಸಪತ್ರಿಕೆ ತನ್ನ ಪರಿಧಿಯನ್ನು ವಿಸ್ತರಿಸಿಕೊಳ್ಳುತ್ತಾ ಭಕ್ತರಿಗೆ ಆಧ್ಯಾತ್ಮಿಕ ಸೇವೆಯನ್ನು ಸಲ್ಲಿಸುತ್ತಿದೆ.

ತಿರುಮಲೆಯ ಶ್ರೀನಿವಾಸನ ದೇವಸ್ಥಾನದೊಂದಿಗೆ , ತಿ.ತಿ.ದೇ ಅನುಬಂಧದ ದೇವಾಲಯಗಳ ಬಗೆಗೆ, ವೇದಗಳು, ಉಪನಿಷತ್ತುಗಳು ಇತರ ಕ್ಷೇತ್ರಗಳು, ಇನ್ನಿತರ ದೇವಾಲಯಗಳು, ಭಾರತ, ಭಾಗವತ, ರಾಮಾಯಣದಂತಹಾ ಇತಿಹಾಸಗಳು, ಭಗವದ್ಗೀತೆಗೆ ಸಂಬಂಧಿಸಿದ ಅನೇಕ ವಿಷಯಗಳು, ಮತ್ತಷ್ಟು ವಿಶೇಷಗಳನ್ನು **"ಸಪ್ತಗಿರಿ"** ಯ ಓದುಗರಿಗೆ ತಿಳಿಸುತ್ತಿದೆ. ಅಷ್ಟೇ ಅಲ್ಲದೇ ವ್ರತಗಳು, ಹಬ್ಬಗಳ ಪ್ರಾಮುಖ್ಯತೆಯೊಂದಿಗೆ ಸಂಗೀತ, ಚಿತ್ರಲೇಖನ, ಶಿಲ್ಪಕಲೆಯಂತಹಾ ಲಲಿತ ಕಲೆಗಳ ಬಗೆಗೆ ಉತ್ತಮವಾದ ಮಾಹಿತಿಯನ್ನು ನೀಡುತ್ತಿದೆ.

ಈ ರೀತಿ ಆಧ್ಯಾತ್ಮಿಕ, ಸಾಂಸ್ಕೃತಿಕ ರಂಗಗಳಲ್ಲಿ ಮಾರ್ಗದರ್ಶನವನ್ನು ನೀಡುತ್ತಿರುವ ಈ ಪತ್ರಿಕೆ ಈ ಸಂಚಿಕೆಯೊಂದಿಗೆ ತನ್ನ 50 ನೆಯ ವಸಂತಕ್ಕೆ ಕಾಲಿರಿಸಿದೆ. ಇಲ್ಲಿ ಒಮ್ಮೆ ನಿಂತು ಸಿಂಹಾವಲೋಕನ ಮಾಡಿದ ಬಳಿಕ, ಭಕ್ತ ಲೋಕಕ್ಕೆ ಇನ್ನೂ ಹೆಚ್ಚು ಸಮಾಚಾರವನ್ನು ನೀಡುವ ಜವಾಬ್ದಾರಿ ಇದೆ ಎಂದು ಸವಿನಯದಿಂದ ವಿನಂತಿಸಿಕೊಳ್ಳುತ್ತಿದ್ದೇವೆ. ಪತ್ರಿಕೆಯ ಪ್ರಕಾಶನದ ವಿಷಯದಲ್ಲಿ ವಿವಿಧ ಶೀರ್ಷಿಕೆಗಳು ಮುಖಪುಟ ಚಿತ್ರಗಳು, ಇಂತಹಾ ಅನೇಕ ಅಂಶಗಳೊಂದಿಗೆ "ಸಪ್ತಗಿರಿ"ಯನ್ನು ಸರ್ವಾಂಗ ಸುಂದರವಾಗಿ ತಿದ್ದಬೇಕೆಂದು , ತನ್ಮೂಲಕ ಪಾಠಕರಿಗೆ ಭಕ್ತರಿಗೆ ಮತ್ತಷ್ಟು ಸೇವೆ ಸಲ್ಲಿಸಬೇಕೆಂಬ ಮಹದಾಸೆಯಿಂದ ತಿ.ತಿ.ದೇ ಯಾಜಮಾನ್ಯದವರು ನಿರಂತರವಾಗಿ ಶ್ರಮಿಸುತ್ತಿದ್ದಾರೆ. ಪ್ರತೀ ತಿಂಗಳೂ ತಮ್ಮ ತಮ್ಮ ಮನೆ ಬಾಗಿಲಿಗೆ ಬಂದು ಸೇರುತ್ತಿರುವ "ಸಪ್ತಗಿರಿ" ಧಾರ್ಮಿಕ ಮಾಸಪತ್ರಿಕೆಯನ್ನು, ಸಪ್ತಗಿರೀಶನ ಪ್ರತಿರೂಪವಾಗಿ, ಪ್ರಸಾದವೆಂದು ಭಾವಿಸುತ್ತಿರುವ ಭಕ್ತ ಜನರ ವಿಶ್ವಾಸವನ್ನು ಮತ್ತಷ್ಟು ಧೃಢಗೊಳಿಸುತ್ತೇವೆಂದು ತ್ರಿಕರಣ ಶುದ್ಧಿಯಿಂದ ವಿನಯ ವಿಧೇಯತೆಗಳಿಂದ ತಿಳಿಸುತ್ತಿದ್ದೇವೆ. ಆದ್ದರಿಂದ "ಸಪ್ತಗಿರಿ" ಪತ್ರಿಕೆಯ ಅಭಿವೃದ್ಧಿಗಾಗಿ ಸಹೃದಯರಾದ ಓದುಗರು ತಮ್ಮ ಸಹಕಾರವನ್ನು ಅಮೂಲ್ಯವಾದ ಸಲಹೆಗಳನ್ನು ಸೂಚನೆಯನ್ನು ಅಭಿಪ್ರಾಯಗಳನ್ನು ಆಗಿಂದಾಗ್ಗೆ ನೀಡುತ್ತಿರಬೇಕೆಂದು ಓದುಗ ಬಾಂಧವರಲ್ಲಿ ವಿನಂತಿಸಿಕೊಳ್ಳುತ್ತಿದ್ದೇವೆ. ಅವುಗಳನ್ನು ಅತ್ಯಂತ ಆದರದಿಂದ ಸ್ವೀಕರಿಸಿ ಪಾಲಿಸುತ್ತೇವೆಂದು ವಿಧೇಯತೆಯಿಂದ ತಿಳಿಸುತ್ತಿದ್ದೇವೆ.

ಆ ಆಪದ್ಬಾಂಧವನಾದ ತಿಮ್ಮಪ್ಪನ ಸಂಪೂರ್ಣ ಅನುಗ್ರಹದೊಂದಿಗೆ "ಸಪ್ತಗಿರಿ" ಐವತ್ತರ ವಸಂತಕ್ಕೆ ಅಡಿಯಿರಿಸುತ್ತಿರುವ ಶುಭ ಸಂದರ್ಭದಲ್ಲಿ ನಿಮ್ಮೊಂದಿಗೆ ನಿಮ್ಮ ಬಂಧು ಮಿತ್ರರಿಗೂ **"ಚಂದಾ"** ಕಟ್ಟಿ ಶ್ರೀನಿವಾಸನ ಪ್ರಸಾದವೆಂದು **"ಸಪ್ತಗಿರಿ"**ಯನ್ನು ನೀಡಿ. ಇತರರನ್ನೂ ಚಂದಾದಾರರನ್ನಾಗಿ ಸೇರಿಸಿ.

ಶ್ರೀ ವೇಂಕಟೇಶ್ವರನ ಭಕ್ತಿಯೊಂದಿಗೆ ಸನಾತನ ಹಿಂದೂ ಧರ್ಮಪ್ರಚಾರವನ್ನೇ ಉಸಿರಾಗಿ ಮುಂದಕ್ಕೆ ನಡೆಯುತ್ತಿರುವ ನಮ್ಮ (ನಿಮ್ಮ) **"ಸಪ್ತಗಿರಿ"** ಪ್ರತಿಕೆಯ ಅಭಿವೃದ್ಧಿಯಲ್ಲಿ ಓದುಗ ಬಾಂಧವರೆಲ್ಲಾ ಪಾಲ್ಗೊಳ್ಳಬೇಕೆಂದು, ಮೊದಲಿಗಿಂತಲೂ ಉತ್ಸಾಹದಿಂದ ಮತ್ತಷ್ಟು ಪ್ರೋತ್ಸಾಹವನ್ನು ನೀಡಬೇಕೆಂದು ಕೇಳಿಕೊಳ್ಳುತ್ತಾ, ಏಳೇಳು ಲೋಕದಲ್ಲೂ ಸರಿಸಾಟಿಯಿಲ್ಲದ ಸಪ್ತಗಿರೀಶನು ನಮ್ಮೆಲ್ಲರಿಗೂ ಇಹಪರ ಸುಖಗಳನ್ನು ಯಥೇಚ್ಛವಾಗಿ ಪ್ರಸಾದಿಸಬೇಕೆಂದು ಪ್ರಾರ್ಥಿಸುತ್ತಿದ್ದೇವೆ. ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ.





# ತಿರುಮಲೆ ಸ್ವಾಮಿಯ ಜ್ಯೇಷ್ಠಾಭಿಷೇಕ ಮಹೋತ್ಸವ

- ಮೂಲ. ಶ್ರೀಮತಿ.ಎಂ. ಉತ್ತರ ಫಲ್ಗುಣಿ

- ಅನುವಾದ. ಕೆ.ನರಸಿಂಹಮೂರ್ತಿ

ಭಗವಂತನ ವಿಗ್ರಹವನ್ನು ಪ್ರತಿಷ್ಠಾಪಿಸಿ, ಅರ್ಚನಾದಿಗಳಿಂದ ಪೂಜಿಸಿ ಅದರ ಮುಖೇನ ಸರ್ವಸುಖಗಳನ್ನು ಹೊಂದುವುದು ವೈದಿಕ ಮಾರ್ಗದಲ್ಲಿ ಎಷ್ಟೋ ಶ್ರೇಯದಾಯವಾದುದು. ಇದು ಉತ್ಕೃಷ್ಟವಾದುದೂ ಹೌದು.ಸರ್ವ ಕಾಲಕ್ಕು ಆಚರಣೀಯವಾದುದು. ಈ ವಿಗ್ರಹ ಬಿಂಬವನ್ನು ಪರಿಶೀಲಿಸಿದಲ್ಲಿ ಅದೊಂದು ಚಿತ್ರವೂ, ಚಿತ್ರಾರ್ಥವೂ, ಚಿತ್ರಾಭಾಸವೂ ಎಂಬ ಮೂರು ವಿಧಗಳಿಂದ ಕೂಡಿದುದು. ಇದರಲ್ಲಿ ಸರ್ವಾಂಗಗಳಿಂದ ಕೂಡಿದ್ದರೆ ಅದು ಚಿತ್ರವು. ಸರ್ವಾಂಗಗಳು ಸಂಪೂರ್ಣವಾಗಿ ಕಂಡು ಬಂದರೆ ಚಿತ್ರಾರ್ಥಕವೂ ಮತ್ತು ಸರ್ವಾಂಗಗಳು ಅತಿಶಯೋಕ್ತಿಗಳಿಂದ ಕೂಡಿದರೆ ಅದು ಚಿತ್ರಾಭಾಸವು. (ಸಮೂರ್ತ 18, 11-3). ಈ ಮೂರು ಸಹ ಪ್ರಾಣಪ್ರತಿಷ್ಠಾಪನೆಗೆ ಸಮಾನವಾದ ಅರ್ಹತೆಯನ್ನು ಪಡೆದಿರುತ್ತವೆ.

ಇದರಲ್ಲಿ ಚಿತ್ರವೆಂಬ ಮೊದಲನೆಯದರಲ್ಲಿ ಮಹಾಂಗ, ಅಂಗ, ಉಪಾಂಗ, ಪ್ರತ್ಯಂಗಗಳನ್ನು ಅವಯವ ವಿಭಾಗವೆಂದು ಕರೆಯಲಾಗಿದೆ. ಅವು

**ಮಹಾಂಗಗಳು:** ಕಂಠ, ಉದರ, ಶಿರ, ದಕ್ಷ, ಬಾಹು, ಕೋಷ್ಠ, ಊರು, ಪಾಣಿ, ಕಟಿ, ಜಂಘಗಳು ಮಹಾಂಗಗಳು.

**ಅಂಗಗಳು:** ನೇತ್ರ, ನಾಸ, ಓಷ್ಠ, ಕಾಲು, ಕರ್ಣ, ಅಂಗುಲಿಗಳು.

**ಉಪಾಂಗಗಳು:** ಕೇಶ, ರೋಮ, ನಖಗಳು ಮೊದಲಾದವು.

**ಪ್ರತ್ಯಂಗಗಳು:** ಮುಕುಟ, ಭೂಷಣಗಳು, ಅಂಬರ, ಶಂಖಚಕ್ರಗಳು, ಶಿರಛ್ಛತ್ರಮವು, ಪಾದ ಪದ್ಮಾಯುಧಗಳು, ಪೀಠ, ಪ್ರಭಾವಳಿ, ಛತ್ರಿಕೆಗಳು (ಕ್ರಿಯಾ 23, 80-2)

ಮೇಲೆ ಹೇಳಿದ ಅಂಗ, ಉಪಾಂಗ, ಪ್ರತ್ಯಂಗಗಳಿಂದ ಕೂಡಿದ ಪ್ರತಿಮೆಯನ್ನು ತಯಾರಿಸಿ ಗುಡಿಯಲ್ಲಿ ಪ್ರತಿಷ್ಠಾಪಿಸಿ ನಿತ್ಯವೂ ಸ್ನಾನಾದಿ ಉಪಚಾರಗಳಿಂದ ಪೂಜೆಗಳನ್ನು ಮಾಡಬೇಕು. ಹಾಗೆ ನಿತ್ಯವೂ ಜರುಗಿಸುವ ಸ್ನಾನಾದಿ ಪ್ರಕ್ರಿಯೆಗಳನ್ನು ಮಾಡುವಾಗ ಅಂಗ, ಉಪಾಂಗ, ಪ್ರತ್ಯಂಗಗಳು ಛಿನ್ನವಾದರೆ, ಅಂತಹುಗಳನ್ನು ಶಾಂತಿ ಮಂತ್ರಗಳಿಂದ ಪ್ರಾಯಶ್ಚಿತರೀತ್ಯಾ ತುಲ್ಯ ಹೋಮಗಳಿಂದ ಅಂಗ ಸವೋತ್ಪತ್ತಿ (ಸಂಧಾನ) ಮಾಡಿ ಪುನಃ ಪ್ರತಿಷ್ಠಾಪಿಸಬೇಕು.

ಮಹಾಂಗ ಛಿನ್ನವಾದರೆ ಸಂಧಾನ ಕಾರ್ಯಕ್ಕೆ ಯೋಗ್ಯವಾದರೂ ಪ್ರತಿಮೆ ತುಂಡಾದಲ್ಲಿ ಆ ತುಂಡಾದ ಭಾಗವನ್ನು ಭೂಮಿಯಲ್ಲಿ ಹುದುಗಿಸಿ ಅದರ ಮೇಲೆ ಅಗ್ನಿ ಕುಂಡವನ್ನು ನಿರ್ಮಿಸಿ, ಅಂಗ ಹೋಮಾದಿ ಕಾರ್ಯವನ್ನು ಮಾಡಿ ತದ್ರವ್ಯದಿಂದಲೇ ಮೊದಲಿನ ಹಾಗೆಯೇ ಪ್ರತಿಮೆಯನ್ನು ತಯಾರುಮಾಡಿ ಪುನಃ ಪ್ರತಿಷ್ಠಾಪನೆ ಮಾಡಬೇಕು.

ಅಂಗ - ಉಪಾಂಗ - ಮಹಾಂಗ - ಪ್ರತ್ಯಂಗಗಳಿಂದ ಕೂಡಿದ ಪ್ರತಿಮೆಯನ್ನು ಸ್ನಾನಾದಿ ವಿಧಿಗಳಿಂದ ಪೂಜಿಸುತ್ತಿರುವಾಗ ಭೃಗುಮುನಿ 'ಕ್ರಿಯಾಧಿಕಾರ'ದಲ್ಲಿ ಹೇಳಿದಂತೆ ಆ ಪ್ರತಿಮೆಯನ್ನು ಸರ್ವಸಾಧ್ಯವಾದಷ್ಟು ರಕ್ಷಿಸುವ ಹೊಣೆ ಅವಶ್ಯಕತೆಗಿಂತ ಹೆಚ್ಚಾಗಿಯೇ ಇರುತ್ತದೆ. ಅದಕ್ಕೆಂದೇ ಪ್ರತಿಮಾರಕ್ಷಣೆಯ ಸಲುವಾಗಿಯೇ ಒಂದು ಉತ್ಸವ ಪ್ರಕ್ರಿಯೆಯನ್ನು ವಿಧಿಸಲಾಗಿದೆ.ಅದೇ ಜ್ಯೇಷ್ಠಾಭಿಷೇಕವೆಂದೂ ಸುಗಂಧ ತೈಲ ಸಮರ್ಪ



ಹೋತ್ಸವವೆಂದೂ ಅದರ ನಾಮಧೇಯಗಳು ಈಗ ಪ್ರಧಾನ ಪ್ರಕ್ರಿಯೆಯಾದ ಪ್ರತಿಮೆಗೆ ಕವಚ ಧಾರಣೆಯ ಬಗ್ಗೆ ಸ್ವಲ್ಪ ತಿಳಿದುಕೊಳ್ಳೋಣ.

ಜ್ಯೇಷ್ಠಮಾಸದ ಜ್ಯೇಷ್ಠಾನಕ್ಷತ್ರದ ದಿನದಂದು ಈ ಪ್ರಕ್ರಿಯೆಯನ್ನು ಜರುಗಿಸ-ಬೇಕು. ಯಗ್ನ ಶಾಲೆಯಲ್ಲಿ ಪೌಂಡಿಲಿಕ ಯಜ್ಞ ಕುಂಡದಲ್ಲಿ ಸಭ್ಯಾಗ್ನಿಯನ್ನು ಪ್ರತ್ಯೇಕವಾಗಿ ನಿರ್ಮಿಸಬೇಕು. ಪುರೋಹಿತರು ಕೂರ್ಮಪೀಠದಲ್ಲಿ ಆಸೀನರಾಗಿ ಈ ಎಲ್ಲಾ ಕ್ರಿಯಾವಿಧಿಗಳನ್ನು ಆಚರಿಸಬೇಕು. ಮಹಾವ್ಯಹೃತಿಯಿಂದೊಡಗೂಡಿ ವೈಷ್ಣವ ವಿಷ್ಣುಸೂಕ್ತ-ಸರ್ವದೇವತ್ಯಾ ಪಾರಮಾರ್ಥಿಕಗಳಾದಿಗಳ ಹೋಮವನ್ನು ಮಾಡಿ, ಅಖಹೋಮವನ್ನಾಚರಿಸಬೇಕು. ಪುಂಡರಾಗ್ನಿ ಹೋಮ ಕುಂಡಕ್ಕೆ ತರಲು ಮಹಾಶಾಂತಿ ಹೋಮವನ್ನು ಮಾಡಬೇಕು. ಪೂರ್ಣಾಹುತಿಯಿಂದೊಡಗೂಡಿದ ಅಸ್ತ್ರ ಹೋಮಕ್ರಿಯೆಯನ್ನು ಆಚರಿಸಬೇಕು. ಯಥೋಚಿತವಾಗಿ ಕವಚವಿಧಿಯನ್ನು ಮಾಡಲು ಮೇಲೆ ಹೇಳಿದ ಪ್ರಕ್ರಿಯೆಯನ್ನು ಎಲ್ಲದಕ್ಕು ಮಾಡತಕ್ಕದ್ದು. ನಿತ್ಯಪೂಜಾ ಕೈಂಕರ್ಯದೊಂದಿಗೆ ದೇವದೇವನನ್ನು ಅರ್ಚಿಸಬೇಕು. ಪಾಯಸಾದಿ ಮಹಾ ಹವಿಸ್ಸನ್ನು ನಿವೇದನೆ ಮಾಡಬೇಕು. ಕ್ಷಮಾ ಮಂತ್ರಗಳಿಂದ ದೇವದೇವನನ್ನು ಪ್ರಾರ್ಥಿಸಬೇಕು. ಬ್ರಹ್ಮಘೋಷಯುಕ್ತವಾಗಿ ಶಾಂತಿವಾಕ್ಯಗಳನ್ನು ಪಠಿಸಿ ಈ ಕಾರ್ಯಕ್ರಮವನ್ನು ಪರಿಸಮಾಪ್ತಿಗೊಳಿಸಬೇಕು. ಸಾಧುಜನ ಸಂರಕ್ಷಕನೂ, ದುಷ್ಟಜನ ಶಿಕ್ಷಕನೂ, ವೇಂಕಟಾದ್ರಿನಿವಾಸ ವೇಂಕಟೇಶನಾದ ಶ್ರೀ ಶ್ರೀನಿವಾಸನಿಗೆ ದಿವ್ಯ ವೈಖಾನಸವಾಗಿ ಆಗಮರೀತ್ಯಾ ವಜ್ರ, ಮುತ್ತು ಸ್ವರ್ಣದ ಕವಚ ಸಮರ್ಪಣೆಯೊಂದಿಗೆ ತ್ರಯಾಹ್ನಿಕವಾಗಿ ಜರಗಿಸುವ ಈ ಜ್ಯೇಷ್ಠಾಭಿಷೇಕವು ಭಕ್ತರ ಪಾಲಿಗೆ ಕಾಮಧೇನುವಾಗಿ ನೆಲೆಸಿ ಸರ್ವ - ಸುಖ ಪ್ರಾಪ್ತಿಗೆ ಹೇತುಭೂತವಾಗುತ್ತದೆ. ಈ ನಿಟ್ಟಿನಲ್ಲಿ ತಿರುಮಲೇಶನಿಗೆ ಜರಗುವ ಜ್ಯೇಷ್ಠಾಭಿಷೇಕ ಮಹೋತ್ಸವವನ್ನು ಕುರಿತು ಸವಿವರವಾಗಿ ತಿಳಿದುಕೊಳ್ಳೋಣ.

ಸ್ವಾಮಿಯ ಮೂಲವಿರಾಟರೂಪದಲ್ಲಿ ದಿವ್ಯವಾದ ಸಾನಿಧ್ಯ ಶಕ್ತಿಯನ್ನು ಕೌತುಕೋಪೇತವಾದ ವಿಗ್ರಹದಲ್ಲಿ ನಿತ್ಯವೂ ಆವಾಹನ ಮಾಡಿ, ವಿಧಿ ಪೂರ್ವಕವಾಗಿ ನಿತ್ಯವೂ ಆರಾಧನೆ ಮಾಡಬೇಕು. ಇದೊಂದು ಐಹಿಕ, ಆಮುಷ್ಮಿಕ ಫಲ ಪ್ರದವಾಗಿ ಹೇಳಲ್ಪಟ್ಟಿದೆ. ಅಂದರೆ ಎಂತಹ ಭೌತಿಕ ಆಸೆಗಳೂ ಇಲ್ಲದೇ, ಮೋಕ್ಷವನ್ನೇ ಬಯಸುತ್ತಾ ಸ್ವಾಮಿಯನ್ನು ಸೇವಿಸುವವರಿಗೆ, ಹಾಗೆಯೇ ತಮ್ಮ ಇಷ್ಟಾ ಕಾಮಾರ್ಥ ಸಿದ್ಧಿ ಗೋಸುಗ ಸ್ವಾಮಿಯನ್ನು ಸಂದರ್ಶಿಸುವವರಿಗೆ ಹೀಗೆ ಎರಡೂ ವರ್ಗದವರಿಗೂ ತಪ್ಪದೇ ಕೌತುಕಮೂರ್ತಿ ಆರಾಧನೆ ಮಾಡಬೇಕೆಂದು ವೈಖಾನಸ ಆಗಮವು ಹೇಳುತ್ತದೆ.

ಈ ಪ್ರಕಾರವಾಗಿ, ತಿರುಮಲೆಯಲ್ಲಿ 614 ನೇ ಸಂವತ್ಸರದಲ್ಲಿ ಪಲ್ಲವ ರಾಣಿಯಾದ ಸಾಮವೈ ಪೇರುಂದೇವಿ ಬೆಳ್ಳಿವಿಗ್ರಹ ಮೂರ್ತಿಯಾದ ಶ್ರೀ ಭೋಗಾ ಶ್ರೀನಿವಾಸ ಮೂರ್ತಿಯನ್ನು ಕೊಡುಗೆಯಾಗಿ ನೀಡಿದ್ದಾಳೆ. ಅದು ಕೌತುಕೋಪೇತವಾಗಿ ಪ್ರತಿಷ್ಠಾಪನೆಗೊಂಡಿದೆ. ಕ್ರಮೇಣ ದೇವಾಲಯದಲ್ಲಿ ಉತ್ಸವಗಳ ಸಂದರ್ಭಗಳಲ್ಲಿ ಜನರಂಜನೆಯ ಸಲುವಾಗಿ 1339 ನೇ ಸಂವತ್ಸರದಲ್ಲಿ ಶ್ರೀದೇವಿ- ಭೂದೇವಿ ಸಮೇತನಾದ ಶ್ರೀ ಮಲೆಯಪ್ಪ ಸ್ವಾಮಿಯನ್ನು ಪಂಚಲೋಹದಲ್ಲಿ ಮಾಡಿಸಿ ಪ್ರತಿಷ್ಠಾಪಿಸಲಾಗಿದೆ.

ಉಭಯದೇವತೆಗಳ ಸಮೇತವಾಗಿ ಶ್ರೀ ಉಗ್ರ ಶ್ರೀನಿವಾಸನ ಮೂರ್ತಿಗೆ, ಬಲಿಬೇರವಾಗಿ ಶ್ರೀ ಕೊಲುವು ಶ್ರೀನಿವಾಸ ಮೂರ್ತಿಗೆ ನಿತ್ಯ ಪೂಜೆಗಳನ್ನು ಸಲ್ಲಿಸಲಾಗುತ್ತದೆ. ಸ್ವಾಮಿಯ ದೇವಾಲಯದಲ್ಲಿ 'ನಿತ್ಯ ಕಲ್ಯಾಣ - ಹಸಿರು ತೋರಣ', ಅಂದಚಂದವಾಗಿ ವರ್ಷದ 365 ದಿನಗಳೂ ಸುಮಾರು 47 ಉತ್ಸವಗಳನ್ನು ಅತ್ಯಂತ ವೈಭವೋಪೇತವಾಗಿ, ನಯನ ಮನೋಹರವಾಗಿ ನಿರ್ವಹಿಸಲಾಗುತ್ತದೆ. ವೈಖಾನಸಯುಕ್ತವಾಗಿ ಆಚರಿಸುವ ಈ ಉತ್ಸವಗಳ ಅಂಗವಾಗಿ ಶ್ರೀ ಮಲೆಯಪ್ಪ ಸ್ವಾಮಿಗೆ ಅಭಿಷೇಕಗಳು, ಸ್ನಪನ ತಿರುಮಂಜನಗಳು ಜರಗುತ್ತವೆ.



ಆದರೆ ಈ ರೀತಿಯಾಗಿ ಅಭಿಷೇಕಗಳು ಜರುಗುವುದರಿಂದ ಪ್ರತಿಮೆಗಳ ಮೂಲಸ್ವರೂಪದಲ್ಲಿ ಮಾರ್ಪಾಡುಗಳು. ಬಿರುಕುಗಳು ಉಂಟಾಗುವ ಸಂಭವವಿರುತ್ತದೆ. ಈ ಸಮಸ್ಯೆಗೆ ಪರಿಷ್ಕಾರವಾಗಿ 90 ರ ದಶಕದಲ್ಲಿ ಸ್ವಾಮಿಯ ಆಲಯದಲ್ಲಿ ಸಂವತ್ಸರೋತ್ಸವಾಗಿ ‘ಜ್ಯೇಷ್ಠಾಭಿಷೇಕ’ವೆಂಬ ಉತ್ಸವ ಮೊದಲುಗೊಂಡು ಶಾಸ್ತ್ರೋಕ್ತವಾಗಿ ಇಂದಿಗೂ ಆಚರಣೆಯಲ್ಲಿದೆ. ಜ್ಯೇಷ್ಠಮಾಸದಲ್ಲಿ ಚಂದ್ರನು ಜ್ಯೇಷ್ಠಾನಕ್ಷತ್ರದಲ್ಲಿ ಬರುವ ಹುಣ್ಣಿಮೆಯಂದು ದೇವದೇವನಾದ ವಿಷ್ಣುವಿನ ವಿಗ್ರಹಕ್ಕೆ ಸುಗಂಧತೈಲವನ್ನು ಸಮರ್ಪಿಸಲೆಂದು ಭೃಗು ಮುನಿಯು ಪ್ರಕೀರ್ಣಾಧಿಕಾರದಲ್ಲಿ ಹೇಳಿದ್ದಾರೆ ಅದನ್ನು “ಸುಗಂಧತೈಲ ಸಮರ್ಪಣೋತ್ಸವ”ವಾಗಿ ಆಚರಿಸಬೇಕೆಂದು ಕ್ರಿಯಾಧಿಕಾರದಲ್ಲಿ ಹೇಳಲಾಗಿದೆ. ಈ ಉತ್ಸವವನ್ನು ವೈಖಾನಸಾಗಮಯುಕ್ತವಾಗಿ ನಿರ್ವಹಿಸುವುದರಿಂದ ವಿಷ್ಣುವಿನ ದಿವ್ಯಾವತಾರದ ಮೂರ್ತಿ ಅಮಿತವಾದ ತೇಜಸ್ಸಿನಿಂದ ಪ್ರಕಾಶಿಸುತ್ತದೆಂದು ಕ್ರಿಯಾಧಿಕಾರವು ತಿಳಿಸುತ್ತದೆ. ತಿರುಮಲೆಯಲ್ಲಿ ಜ್ಯೇಷ್ಠಾಭಿಷೇಕವನ್ನು ಜ್ಯೇಷ್ಠಶುಕ್ಲ ತ್ರಯೋದಶಿಯಂದು ಆರಂಭಿಸಿ ಜ್ಯೇಷ್ಠಶುಕ್ಲ ಚತುರ್ದಶಿ ಹಾಗೂ ಹುಣ್ಣಿಮೆಯವರೆಗೂ ಆಚರಿಸಿ ಅಂತ್ಯಗೊಳಿಸಿ, ಸತತವಾಗಿ ಮೂರು ದಿನಗಳು ವೈಭವೋಪೇತವಾಗಿ ನಿರ್ವಹಿಸಲಾಗುತ್ತದೆ. ಜ್ಯೇಷ್ಠಾಭಿಷೇಕದ 15 ದಿನಗಳ ಮೊದಲೇ ಶ್ರೀ ಶ್ರೀನಿವಾಸನ ಉತ್ಸವ ಮೂರ್ತಿಯಾದ ಶ್ರೀದೇವಿ ಭೂದೇವಿ ಸಮೇತವಾಗಿ ಶ್ರೀಮಲೆಯಪ್ಪಸ್ವಾಮಿಗೆ ಕಳೆದ ಸಂವತ್ಸರ ಸಮರ್ಪಿಸಲಾದ ಸ್ವರ್ಣಕವಚವನ್ನು ಬಿಚ್ಚಲಾಗುತ್ತದೆ.

ಈ ಉತ್ಸವ ನಿರ್ವಹಣೆಗಾಗಿ ಪ್ರತ್ಯೇಕವಾಗಿ “ಕಂಕಣ ಭಟ್ಟರ” - ರೆಂದು ಕರೆಯಲ್ಪಡುವ ವೈಖಾನಸ ಅರ್ಚಕರನ್ನು ಪ್ರಧಾನಾಚಾರ್ಯರರನ್ನಾಗಿ ಮಾಡಿ ಜವಾಬ್ದಾರಿಯನ್ನು ಕೊಡಲಾಗುತ್ತದೆ. ಪ್ರಕೀರ್ಣಾಧಿಕಾರದಲ್ಲಿ ಹೇಳಿದಂತೆ ಆಚಾರ್ಯರು ಸ್ವಾಮಿಯ ಉತ್ಸವ ಮೂರ್ತಿಯ ಮೇಲಿರುವ ಸ್ವರ್ಣ ಕವಚವನ್ನು ‘ಪರಿಲಿಖಿತ’ ಎಂಬ ಮಂತ್ರದಿಂದ ವಿಶೇಷವಾಗಿ ಪರಿವಶೋಧನೆ ಮಾಡಬೇಕು. ಅನಂತರ ಈ ಸ್ವರ್ಣಕವಚದಲ್ಲೇನೀದ್ದರೂ ಲೋಪಗಳಿದ್ದಲ್ಲಿ ಅವನ್ನು ಗುರುತಿಸಿ ಸುಶಿಕ್ಷಿತನಾದ ಶಿಲ್ಪಿಯೊಂದಿಗೆ ಅವುಗಳನ್ನು ಸರಿಪಡಿಸಿ, ಅದನ್ನು ಸಿದ್ಧವಾಗಿರಿಸಿ ಕೊಳ್ಳಬೇಕೆಂದು ಶಾಸ್ತ್ರವಚನ ಸಾರುತ್ತದೆ.

ಜ್ಯೇಷ್ಠಾಭಿಷೇಕದ ಮೊದಲದಿನ ಸ್ವಾಮಿಯ ಮಧ್ಯಾಹ್ನದ ಆರಾಧನೆಯ ನಂತರ ಶ್ರೀಮಲೆಯಪ್ಪಸ್ವಾಮಿಗೆ ಉಭಯ ದೇವತೆಗಳ ಸಮೇತವಾಗಿ ವಿಮಾನ ಪ್ರಕಾರ ಪ್ರದಕ್ಷಿಣೆಗೈದು, ಸಂಪಂಗಿ ಪ್ರಾಕಾರದ ಯಾಗ ಶಾಲೆಯಲ್ಲಿ‘ಅಷ್ಟೋತ್ತರ ಶತ ಕಲಶ ಸ್ನಪನ ತಿರುಮಂಜನ’ವೆಂಬ ವೈದಿಕಪ್ರಕ್ರಿಯೆಯನ್ನು 108 ಕಲಶಗಳಿಂದ ನಿರ್ವಹಿಸಲಾಗುತ್ತದೆ. ನಂತರ ಕಲ್ಯಾಣ ಮಂಟಪದ ಯಾಗಶಾಲೆಗೆ ಬಂದು ಬಿಡುತ್ತಾರೆ. ಅಲ್ಲಿ ವೈಖಾನಸ ಭಗವಚ್ಛಾಸ್ತ್ರ ವಿಧಿಯುಕ್ತವಾಗಿ ದೇವತಾ ಪ್ರಾರ್ಥನೆ, ವಿಷ್ವಕ್ಸೇನ ಆರಾಧನೆ, ಸ್ವಸ್ತಿ ಪುಣ್ಯಾಹವಚನ, ಅಂಕುರಾರ್ಪಣ, ರಕ್ಷಾಬಂಧನ, ಅಗ್ನಿಪ್ರಣಯನ, ಮೊದಲಾದ ಪ್ರಕ್ರಿಯೆಗಳನ್ನು ಶಾಸ್ತ್ರೋಕ್ತವಾಗಿ ವೇದಪರಸ್ಪರವಾಗಿ ನಿರ್ವಹಿಸುತ್ತಾರೆ. ಇದಕ್ಕಾಗಿಯೇ ಈ ಉತ್ಸವಕ್ಕೆ ತಿ.ತಿ.ದೇ ಕುಟುಂಬದ ಕಾರ್ಯನಿರ್ವಹಣಾಧಿಕಾರಿ ದಂಪತಿಗಳನ್ನು ನೇಮಿಸಿ ಸಂಕಲ್ಪ ಮಾಡಿಸಲಾಗುತ್ತದೆ. ಯಾಗ ಶಾಲೆಯಲ್ಲಿ 108 ಕಲಶಗಳನ್ನು, 9 ಕಲಶಗಳನ್ನು ಒಂದು ವರಸೆಯಂತೆ 4 ಸಾಲು

**ಜ್ಯೇಷ್ಠಮಾಸದ ಜ್ಯೇಷ್ಠಾನಕ್ಷತ್ರದ ದಿನದಂದು ಈ ಪ್ರಕ್ರಿಯೆಯನ್ನು ಜರುಗಿಸಬೇಕು. ಯಗ್ನ ಶಾಲೆಯಲ್ಲಿ ಪೌಂಡಿರಿಕ ಯಜ್ಞ ಕುಂಡದಲ್ಲಿ ಸಭ್ಯಾಗ್ನಿ ಯನ್ನು ಪ್ರತ್ಯೇಕವಾಗಿ ನಿರ್ಮಿಸಬೇಕು. ಪುರೋಹಿತರು ಕೂರ್ಮಪೀಠದಲ್ಲಿ ಆಸೀನರಾಗಿ ಈ ಎಲ್ಲಾ ಕ್ರಿಯಾವಿಧಿ ಗಳನ್ನು ಆಚರಿಸಬೇಕು.**

ಗಳಲ್ಲಿ ಹಂಚುತ್ತಾರೆ. ಇಂತಹ ವರಸೆಗಳು ಮೂರಿರುತ್ತದೆ. ಮಧ್ಯೆದಲ್ಲಿರುವ ಪ್ರಧಾನ ಕಲಶದಲ್ಲಿ ವರುಣ ದೇವನನ್ನು ಆಹ್ವಾನಿಸಿ ಉಪಚಾರಸಮರ್ಪಣೆ ಆಚರಿಸಲಾಗುತ್ತದೆ. ಪ್ರಧಾನ ಹೋಮ, ಪ್ರಾಯಶ್ಚಿತ್ತಹೋಮ, ಎಲ್ಲಾ ಹೋಮಗಳಲ್ಲೂ ಪೂರ್ಣಾಹುತಿ ನಿರ್ವಹಿಸಿ ಅಗ್ನಿಯ ಉಪಸ್ಥಾನದೊಂದಿಗೆ ಹೋಮ ಕೈಂಕರ್ಯ ಪರಿಸಮಾಪ್ತಿಗೊಳ್ಳುತ್ತದೆ. ಅನಂತರ ಸ್ವಾಮಿಯ ಉತ್ಸವ ಮೂರ್ತಿಗೆ 12 ಬಗೆಯ ದ್ರವ್ಯಗಳಿಂದ, ಹಾಲು, ಮೊಸರು, ಜೇನುತುಪ್ಪ, ಎಳನೀರು, ಅರಶಿನ, ಚಂದನಗಳಿಂದ ವಿಶೇಷ ಸ್ನಪನ ತಿರುಮಜ್ಜನಗಳನ್ನು ಜರುಗಿಸಲಾಗುತ್ತದೆ. ಸಾಯಂಕಾಲ ಶ್ರೀದೇವಿ ಭೂದೇವಿ ಸಹಿತನಾದ ಶ್ರೀಮಲೆಯಪ್ಪಸ್ವಾಮಿಗೆ ಅತಿ ಸುಂದರವಾದ ಮುಗ್ಧ ಮನೋಹರವಾದ, ವಜ್ರ ಕವಚದಿಂದ ಅಲಂಕರಿಸಿ ನಾಲ್ಕು ಮಾಢ ಬೀದಿಗಳಲ್ಲಿ ಉತ್ಸವವನ್ನು ಜರುಗಿಸುತ್ತಾರೆ. ಹೀಗೆಯೇ ಉಳಿದೆರಡು ದಿನಗಳಲ್ಲಿಯೂ ಉದಯಕಾಲದಲ್ಲಿ ಅಷ್ಟೋತ್ತರ ಕಲಶಸ್ನಪನ ಮತ್ತು ಎರಡನೇ ದಿನ ಸಂಜೆ ಮುತ್ತಿನ ಕವಚ, ಮೂರನೇ ದಿನ ಸಂಜೆ ಸ್ವರ್ಣಕವಚದಿಂದ ತಿರುಬೀದಿ ಉತ್ಸವವು ಜರಗುತ್ತದೆ. ಮೂರನೇ ದಿನ ಮುಂಜಾನೆ ಸ್ನಪನದ ನಂತರ ಕವಚ ಪ್ರತಿಷ್ಠೆಯು ಜರಗುತ್ತದೆ.

ಮೂರನೇ ದಿನ ಬೆಳಗ್ಗೆ ಅಷ್ಟೋತ್ತರಕಲಶ ಸ್ನಪನದ ಅಂಗವಾಗಿ ಹೋಮಾದಿ ವೈದಿಕ ಕ್ರಿಯೆಗಳು ಪೂರ್ಣಗೊಂಡ ನಂತರ ಪಂಚಗವ್ಯಗಳಲ್ಲಿ (ಗೋಕ್ಷೀರ, ಗೋದಧಿ, ಗೋಘೃತ, ಗೋಮೂತ್ರ, ಗೋಮಯ) ಆದಿದೇವತೆಗಳನ್ನು ಆಹ್ವಾನಿಸಿ ಉಪಚಾರ ಸಮರ್ಪಣೆ ನಡೆಸಲಾಗುತ್ತದೆ. ಅನಂತರ ಕವಚಕ್ಕೆ ವಾಸ್ತುಹೋಮ ಮಾಡಲಾಗುತ್ತದೆ. ಪಂಚಗವ್ಯಗಳಿಂದ ಕವಚಕ್ಕೆ ಪ್ರೋಕ್ಷಿಸಿ, ವಾಸ್ತು ಶುದ್ಧಿ ಮಾಡಿ, ಕವಚವನ್ನು ಸ್ವಾಮಿಗೆ ಸಮರ್ಪಿಸುವ ಯೋಗ್ಯತೆಯನ್ನು ತುಂಬಲಾಗುತ್ತದೆ. ಪಂಚದಶ ಸೂಕ್ತಗಳಿಂದ ಅಭಿಮರ್ಶನ ಕ್ರಿಯೆಗಳನ್ನು ಕವಚಕ್ಕೆ ನಿರ್ವಹಿಸಿ ಬಳಿಕ 'ವಿಷ್ಣೋಮ್ನಕ...' ಎಂಬ ಮಂತ್ರದಿಂದ ಸ್ವರ್ಣ ಕವಚವನ್ನು ಶ್ರೀದೇವಿ ಭೂದೇವಿ ಸಮೇತ ಶ್ರೀಮಲೆಯಪ್ಪ ಸ್ವಾಮಿಗೆ ದೃಢವಾಗಿ, ಸ್ಥಿರವಾಗಿ ಮೊದಲಿದ್ದಂತೆ ಸಮರ್ಪಿಸಲಾಗುತ್ತದೆ.


ವರ್ಷಪೂರ್ತಿ ಶ್ರೀದೇವೇಶನ ಉತ್ಸವಮೂರ್ತಿ ದಿವ್ಯ ಪ್ರಾಕಾಶಮಾನವಾದ ಸ್ವರ್ಣಕವಚದಿಂದ ಸುಶೋಭಿತವಾಗಿರುತ್ತದೆ. ಆದರೆ ಜ್ಯೇಷ್ಠಾಭಿಷೇಕ ಮಹೋತ್ಸವ ಕಾಲದಲ್ಲಿ ಮಾತ್ರವೇ ಸ್ವಾಮಿಯ ನಿಜವಾದ ಮೂಲ ಅರ್ಚಾರೂಪ ದರ್ಶನ ಭಕ್ತರಿಗೆ ಲಭಿಸುತ್ತದೆ. ಹಾಗೆಯೇ ಸಾಧಾರಣವಾಗಿ ಅಭಿಷೇಕದ್ರವ್ಯವಾದ ಹಾಲು, ಮೊಸರು ಮೊದಲಾದವುಗಳನ್ನು ಸ್ವಾಮಿಯ ಪಾದಕ್ಕೆ ಅಭಿಷೇಕ ಮಾಡುತ್ತಾರೆ ಏಕೆಂದರೆ ಎಲ್ಲಾ ಉತ್ಸವಮೂರ್ತಿಗಳು ಸ್ವರ್ಣಕವಚಧಾರಣದಲ್ಲಿರುವುದರಿಂದ ಅಭಿಷೇಕ ಆಮಸ್ತಕವಾಗಿ ಜರುಗದು. ಆದರೆ ಈ ಜ್ಯೇಷ್ಠಾಭಿಷೇಕ ಮಹೋತ್ಸವ ಸಮಯದಲ್ಲಿ ಮಾತ್ರವೇ ಶ್ರೀ ಮಲೆಯಪ್ಪ ಸ್ವಾಮಿಗೆ ಅಪಾದಮಸ್ತಕವಾಗಿ ಎಲ್ಲಾ ದ್ರವ್ಯಗಳಿಂದ ಅಭಿಷೇಕ ಜರುಗಿಸುತ್ತಾರೆ.

ಆಯಾ ರೂಪದ ಮೂರ್ತಿಗಳಿಗೆ ತಕ್ಕಂತೆ ಯಥೋಚಿತವಾಗಿ ಸರಿಹೊಂದುವಂತೆ ಕವಚಗಳನ್ನು ಸರ್ವ ಪ್ರಯತ್ನದಿಂದ ಕೂರಿಸಿ ಪ್ರತಿಮೆಗಳನ್ನು ರಕ್ಷಿಸಿಕೊಳ್ಳಬೇಕೆಂದೂ, ಇದುವೇ ಜ್ಯೇಷ್ಠಾಭಿಷೇಕವೆಂದೂ ಪಾರಮಾರ್ಥಿಕ ಉತ್ಸವವೆಂದೂ ಭೃಗು 'ಪ್ರಕ್ರಿಯರಣಾರ್ಥ'ದಲ್ಲಿ ಹೇಳಿದ್ದಾರೆ. ಹಾಗೆಯೇ ಮೂರನೇದಿನ ಸ್ವರ್ಣಕವಚ ಸಮರ್ಪಣೆಯ ಮೊದಲು ಸ್ವಾಮಿಯ ಮೂರ್ತಿಗಳಿಗೆ ಸುಗಂಧ ದ್ರವ್ಯಗಳನ್ನು ಸಮರ್ಪಿಸಿ ಮೂಲರೂಪದ ಮೇಲೆ ಚಂದನ, ಅದರ ಮೇಲೆ ಧವಳ ಶ್ವೇತವಸ್ತ್ರವನ್ನು ತೊಡಿಸಿ ಕವಚ ಧಾರಣೆಯನ್ನು ಮಾಡುತ್ತಾರೆ. ಇಂತಹ ಮಹತ್ತರವಾದ ಜ್ಯೇಷ್ಠಾಭಿಷೇಕ ಮಹೋತ್ಸವನ್ನು ತಿರುಮಲೆಯಲ್ಲಿ ಅಂಗರಂಗ ವೈಭವೋಪೇತವಾಗಿ, ನಯನ ಮನೋಹರವಾಗಿ ಮೂರು ದಿನಗಳವರೆಗೆ ನಿರ್ವಹಿಸಲಾಗುತ್ತದೆ.

ಈ ಉತ್ಸವದಲ್ಲಿ ಪಾಲ್ಗೊಳ್ಳುವ ಎಲ್ಲಾ ಭಕ್ತರಿಗೆ ಶ್ರೀ ವೇಂಕಟೇಶ್ವರಸ್ವಾಮಿಯ ದಿವ್ಯಾಶೀರ್ವಾದದಿಂದ ಸರ್ವ ಕಾರ್ಯಗಳು ನಿರ್ವಿಘ್ನವಾಗಿ ನೆರವೇರುತ್ತವೆ. ನಾವೂ ಈ ಉತ್ಸವದಲ್ಲಿ ಪಾಲ್ಗೊಂಡು ಸ್ವಾಮಿಯ ಕೃಪೆಗೆ ಪಾತ್ರರಾಗೋಣ.

**ವೃಕ್ಷೋ ರಕ್ಷತಿ ರಕ್ಷಿತಃ**

**ಗಿಡವೊಂದ ನೆಡುವವನು**
**ದೇವರಾ ಸೇವಕನು**
**ನೆನೆವರವನನು ಜನರು**
**ಅವನೆಂದು ನೋಡದರು**



# ತಾಮ್ರ ಪರ್ಣಿ ಪುಷ್ಕರ ಪರ್ವಕಾಲ

- ಶ್ರೀಮತಿ. ಸುಮನ ಬದರಿನಾಥ್

ತಾಮ್ರ ಪರ್ಣೀ ಸರಿತ್ತೋಯಂ ಸೇವನೀಯಂ ಮುಮುಕ್ಷುಭಿಃ
ಮುಕ್ತೀ ಕರೋತಿ ಯತ್ರತ್ಯಾ ಶುಕ್ತಿಶ್ಚಿ ಪತಿತಂ ಜಲಂ॥

ಶ್ರೀ ವಾದಿರಾಜ ತೀರ್ಥರು ತಮ್ಮ ತೀರ್ಥ ಪ್ರಬಂಧ ಗ್ರಂಥದಲ್ಲಿ ತಾಮ್ರಪರ್ಣಿ ನದಿಯನ್ನು ಇಂತು ಸ್ತುತಿಸಿರುತ್ತಾರೆ. ತಾಮ್ರಪರ್ಣಿ ತಮಿಳುನಾಡಿನ ಪ್ರಮುಖ ನದಿಗಳಲ್ಲೊಂದು. ಪರಮ ಪಾವನ ಸ್ವರೂಪಳು. ಅವಳ ಪವಿತ್ರ ಜಲದಲ್ಲಿ ಸ್ನಾನ, ಪೂಜಾದಿಗಳು ಎಂದು ಪ್ರಶಸ್ತವೇ.ಆದರೂ ಈ ವರುಷ ಅದಕ್ಕೆ ಇನ್ನೂ ಹೆಚ್ಚಿನ ಮಹತ್ವ. ಇದು 12 ವರ್ಷಗಳಿಗೊಮ್ಮೆ ಬರುವ ತಾಮ್ರಪರ್ಣಿ ಪುಷ್ಕರ ಪರ್ವಕಾಲ.

ಈ ಪುಷ್ಕರ ಕಾಲ ಅತ್ಯಂತ ವೈಶಿಷ್ಟ್ಯ ಪೂರ್ಣವಾದುದು. ಅದರ ಹಿಂದಿನ ಐತಿಹ್ಯ ಹೀಗಿದೆ. ಬ್ರಹ್ಮನು ಸೃಷ್ಟಿಕಾರ್ಯದಲ್ಲಿ ತೊಡಗಿದಾಗ ಜಲದೇವತೆ ಎನಿಸಿದ ಪುಷ್ಕರ ಹಾಗೂ ದೇವತೆಗಳ ಆಚಾರ್ಯ ಬೃಹಸ್ಪತಿ (ಗುರು) ಇಬ್ಬರೂ ಅವನಿಗೆ ತುಂಬ ನೆರವನ್ನಿತ್ತರು.ಇದರಿಂದ ಸುಪ್ರೀತನಾದ ಬ್ರಹ್ಮ ಅವರಿಬ್ಬರಿಗೂ, ಪುಷ್ಕರ ಮತ್ತು ಬೃಹಸ್ಪತಿ ಇಬ್ಬರೂ ರಾಶಿಚಕ್ರದ ಒಂದೊಂದು ರಾಶಿಯನ್ನು ಪ್ರವೇಶಿಸಿದಾಗಲೂ (ಇಬ್ಬರೂ ಒಟ್ಟಿಗೆ ಪ್ರವೇಶಿಸುತ್ತಾರೆ.) ಭಾರತದ ಹನ್ನೆರಡು ಸುಪ್ರಸಿದ್ಧ ಪುಣ್ಯ ನದಿಗಳಲ್ಲಿ ಒಂದೊಂದಕ್ಕೂ ಆಯಾ ವರುಷ ಪುಷ್ಕರ ಪರ್ವಕಾಲ ಉಂಟಾಗುವುದೆಂದು ವರವನ್ನಿತ್ತ. ಆ ಕಾಲದಲ್ಲಿ ಬ್ರಹ್ಮನೂ ಒಡಗೂಡಿ 33 ಕೋಟಿ ದೇವತೆಗಳೂ,ಸಕಲ ತೀರ್ಥಗಳೂ ಆ ನದಿಯಲ್ಲಿ ನೆಲಸಿರುವರೆಂದು ವರ ಕೊಟ್ಟ. ಇದೇ ಪುಷ್ಕರ ಪರ್ವಕಾಲ ಇದರ ಮೊದಲ 12 ದಿನಗಳು ಮತ್ತು ಕಡೆಯ 12 ದಿನಗಳು ಸ್ನಾನ, ದಾನ, ಪಿತೃಕಾರ್ಯಗಳಿಗೆ ಹೆಚ್ಚು ಶ್ರೇಷ್ಠ. ಇದಕ್ಕೆ ಆದಿ ಪುಷ್ಕರ ಮತ್ತು ಅಂತ್ಯ ಪುಷ್ಕರ ಎನ್ನುವರು. ಮಿಕ್ಕ ದಿನಗಳಲ್ಲಿ ಮಧ್ಯಾಹ್ನ ಸ್ವಲ್ಪ ಹೊತ್ತು ಮಾತ್ರ ಈ ಪುಣ್ಯ ಕಾಲವಿರುತ್ತದೆ. 12 ವರ್ಷಗಳಿಗೊಮ್ಮೆ ಅದೇ ನದಿಗೆ ಪುಷ್ಕರ ಕಾಲ ಬರುತ್ತದೆ. ಈ ವರ್ಷ ತಾಮ್ರಪರ್ಣಿ ಪುಷ್ಕರ ಕಾಲ.ಗುರು ಮತ್ತು ಪುಷ್ಕರ ಕಾಲ.ಗುರು ಮತ್ತು ಪುಷ್ಕರರು ಅಕ್ಟೋಬರ್ 11 ನೇ ತಾರೀಖಿನಂದು ವೃಶ್ಚಿಕ ರಾಶಿಯನ್ನು ಪ್ರವೇಶಿಸಿದರೆ ಸೂರ್ಯ ನವೆಂಬರ್ 16 ರಂದು ಪ್ರವೇಶಿಸುತ್ತಾನೆ. ಸೂರ್ಯನು ವೃಶ್ಚಿಕರಾಶಿಯಲ್ಲಿರುವಾಗ ತಾಮ್ರ ಪರ್ಣಿ

ನದಿಯಲ್ಲಿ ಸ್ನಾನ ಬಹು ಶ್ರೇಷ್ಠ. ಈ ವರುಷ ಪುಷ್ಕರ, ಬೃಹಸ್ಪತಿ, ಸೂರ್ಯ ಮೂವರೂ ವೃಶ್ಚಿಕರಾಶಿಯಲ್ಲಿ ಒಂದು ತಿಂಗಳು ಒಟ್ಟಿಗೆ ಸನ್ನಿಹಿತರಾಗಿರುತ್ತಾರೆ.

ಬೃಹಸ್ಪತಿ ಸಹಿತ ಪುಷ್ಕರನು ಮೇಷರಾಶಿಯನ್ನು ಪ್ರವೇಶಿಸಿದಾಗ ಗಂಗಾನದಿಗೆ ಪುಷ್ಕರಕಾಲ. ವೃಷಭರಾಶಿಯಲ್ಲಿ ನರ್ಮದೆಗೆ, ಮಿಥುನದಲ್ಲಿ ಸರಸ್ವತಿಗೆ, ಕರ್ಕಾಟಕದಲ್ಲಿ ಯಮುನೆಗೆ, ಸಿಂಹದಲ್ಲಿ ಗೋದಾವರಿಗೆ, ಕನ್ಯಾದಲ್ಲಿ ಕೃಷ್ಣಾ ನದಿಗೆ ತುಲಾರಾಶಿಯಲ್ಲಿ ಕಾವೇರಿಗೆ, ವೃಶ್ಚಿಕದಲ್ಲಿ ತಾಮ್ರ ಪರ್ಣಿಗೆ ಧನುಸ್ಸಿನಲ್ಲಿ ವಾಹಿನೀ ನದಿಗೆ (ಬ್ರಹ್ಮಪುತ್ರಾ) ಮಕರದಲ್ಲಿ ತುಂಗಭದ್ರೆಗೆ, ಕುಂಭದಲ್ಲಿ ಸಿಂಧೂ ನದಿಗೆ, ಮೀನದಲ್ಲಿ ಪ್ರಣಿತಾ ನದಿಗೆ ಪುಷ್ಕರಕಾಲ ಬರುತ್ತದೆ ಎಂದು ಪ್ರಾಚೀನ ಗ್ರಂಥಗಳಲ್ಲಿ ಹೇಳಲ್ಪಟ್ಟಿದೆ.

ತಾಮ್ರ ಪರ್ಣಿ ನದಿ ತಮಿಳುನಾಡಿನ ಪ್ರಮುಖನದಿಗಳಲ್ಲೊಂದು. ಗೋದಾವರಿ, ಕೃಷ್ಣಾ ಕಾವೇರಿಗಳಿಗೆ ಹೋಲಿಸಿದರೆ ಇದರ ಉದ್ದಕಿರಿದಾದುದಾದರೂ ಮಹಾತ್ಮೆ, ಮಹಿಮೆಗಳಲ್ಲಿ ಹಿರಿದಾಗಿಯೆ ಇದೆ. ಇನ್ನೊಂದು ವಿಶೇಷವೆಂದರೆ ಈ ನದಿ ಸಂಪೂರ್ಣವಾಗಿ ತಮಿಳು ನಾಡೀನಲ್ಲಿಯೇ ಹರಿಯುತ್ತದೆ. ತಮಿಳುನಾಡಿನಲ್ಲಿ ಹರಡಿರುವ ಪಶ್ಚಿಮ ಘಟ್ಟ ಪ್ರದೇಶವನ್ನು ಮಲಯಪರ್ವತ ಎಂದು ಕರೆಯುತ್ತಾರೆ. ಪೋತಿಗೈ, ಅಗಸ್ತ್ಯ ಕೂಡಮ್, ಎಂದೆಲ್ಲಾ ಹೆಸರುಗಳಿರುವ ಅಗಸ್ತ್ಯ ಮಲೈ ಎಂಬ ಬೆಟ್ಟದಿಂದ ಉಗಮಗೊಳ್ಳುತ್ತದೆ. ನದಿ ಉಗಮದಿಂದ ಸಮುದ್ರ ಸಂಗಮದವರೆಗೆ ಸುಮಾರು 130 ಕಿ.ಮೀ. ಪ್ರವಹಿಸುವಾಗ ಪಾಪನಾಶನತೀರ್ಥ, ಅಂಬಾ ಸಮುದ್ರ, ತಿರುನೆಲ್ವೇಲಿ,ಶ್ರೀ ವೈಕುಂಠಮ್ ಊರುಗಳ ಮೂಲಕ ಹರಿದು ತೂತ್ತು ಕೊಡಿ ಅಥವಾ ಟೂಟಿಕೋರಿನ್ ಸೇರಿ ಪೂರ್ವ ಕರಾವಳಿಯ ಮನ್ನಾರ್ ಕೊಲ್ಲಿಯ ಬಳಿ ಸಮುದ್ರದೊಡನೆ ಸಂಗಮಿಸುತ್ತದೆ. ಹಿಂಗಾರು ಮತ್ತು ಮುಂಗಾರು ಎರಡೂ ಬಗೆಯ ಮಳೆಗಳಿಂದ ಸಮೃದ್ಧಗೊಳ್ಳುವ ಈ ನದಿ ಸದಾ ನೀರಿನಿಂದ ಕೂಡಿದ್ದು ತಮಿಳುನಾಡಿನ ಆ ಭಾಗದ ಜೀವನದಿಯಾಗಿದೆ. ಅನೇಕ ಉಪನದಿಗಳು ಇದಕ್ಕೆ ತಮ್ಮ ಜಲಧಾರೆಯನ್ನು ಎರೆಯುತ್ತವೆ. ಮುಖ್ಯ ಉಪನದಿ ಚಿತ್ತರ್ ಅಥವಾ ಚಿತ್ರಾ.ಬಹು ಹಿಂದಿನಿಂದಲೂ ಈ ನದಿಗೆ ಅನೇಕ ಅಣೆಕಟ್ಟುಗಳು ಕಟ್ಟಲ್ಪಟ್ಟಿದ್ದು ಜನೋಪಕಾರಿಯಾಗಿ 'ಭುಕ್ತಿ ಮುಕ್ತಿಕಂ' ಎನಿಸಿದೆ. ತಾಮ್ರವರ್ಣಿ ಎಂದೂ ಈ ನದಿ ಕರೆಯಲ್ಪಟ್ಟಿದೆ. ತಾಮ್ರ ವರ್ಣದ ಮರಳಿನ ಮೇಲೆ ಹರಿಯುವುದರಿಂದ ತಾಮ್ರವರ್ಣವಾಗಿ ಕಾಣುವ ನದಿಯೆಂದೂ, ನದಿಯ ದಡದಲ್ಲಿ ತಾಮ್ರವರ್ಣದ ಎಲೆಗಳಿರುವ ವೃಕ್ಷಗಳು ಬೆಳೆಯುವುದರಿಂದ ತಾಮ್ರಪರ್ಣಿ ಎಂದೂ ಅರ್ಥೈಸಬಹುದು.

ತಾಮ್ರ ಪರ್ಣಿ ಬಹು ಹಿಂದಿನಿಂದಲೂ ಪಾವನಕರವೆಂದೂ ಪವಿತ್ರವೆಂದು ಭಾವಿಸಲ್ಪಟ್ಟಿದೆ. ರಾಮಾಯಣ, ಮಹಾಭಾರತಾದಿ ಇತಿಹಾಸಗಳಲ್ಲೂ, ಭಾಗವತ, ಕೂರ್ಮ ಶಿವ ಪುರಾಣಗಳಲ್ಲೂ, ಶಿವಲೀಲಾ ಮುಂತಾದ ಕಾವ್ಯಗಳಲ್ಲೂ ಈ ನದಿಯ ಪ್ರಸ್ತಾಪವಿದೆ. ರಾಮಾಯಣದಲ್ಲಿ ಹನುಮಂತನ ನಾಯಕತ್ವದಲ್ಲಿ ಹೊರಟ ವಾನರ ಸೈನ್ಯವು ತಾಮ್ರಪರ್ಣಿ ದಾಟಿದರೆಂದು ಹೇಳಲಾಗಿದೆ. ಭಾಗವತದ ದಶಮಸ್ಕಂಧದ 79 ನೇ ಅಧ್ಯಾಯದಲ್ಲಿ ಬಲರಾಮನ ತೀರ್ಥಯಾತ್ರಾ ಪ್ರಸಂಗದಲ್ಲಿ ಈ ನದಿ ಹೆಸರಿಸಲ್ಪಟ್ಟಿದೆ. ಈ ನದಿಯ ಉಗಮದ ಬಗ್ಗೆ ಪುರಾಣಗಳಲ್ಲಿ ಐತಿಹ್ಯವೊಂದು ಹೇಳಲ್ಪಟ್ಟಿದೆ. ಶಿವ ಪಾರ್ವತಿಯರ ಕಲ್ಯಾಣವಾದಾಗ ದೇವಾನುದೇವತೆಗಳೆಲ್ಲ ಅಲ್ಲಿ ನೆರೆದಿದ್ದರು. ದೇವತೆಗಳ ಪ್ರಾರ್ಥನೆಯಂತೆ ಅಗಸ್ತ್ಯಮುನಿ ಕಲ್ಯಾಣನಂತರ ದಕ್ಷಿಣ ಭಾರತಕ್ಕೆ ಹೊರಟು ಬಂದ. ಹಾಗೆ ಬರುವಾಗ ವಿವಾಹ ಸಂದರ್ಭದಲ್ಲಿ ಉಪಯೋಗಿಸಲ್ಪಟ್ಟಿದ್ದ ಕಮಲಪುಷ್ಪಗಳ ಮಾಲೆಯೊಂದನ್ನು ತನ್ನೊಡನೆ ತಂದ. ಸಂಚರಿಸುತ್ತಾ ಈಗ ಅಗಸ್ತ್ಯಮಲೈ ಎಂದು ಹೆಸರಾಗಿ ತಾಮ್ರ ಪರ್ಣಿಯ ಉಗಮಸ್ಥಾನವಾಗಿರುವ ಸ್ಥಳದೆಡೆಗೆ ಬಂದಾಗ ಆ ಮಾಲೆ ಕಮಲದಂತೆ ಕೆಂಪು ಬಣ್ಣದಿಂದ ಶೋಭಿಸುವ ಸುಂದರ ತರುಣಿಯಾಗಿ ಮಾರ್ಪಟ್ಟಿತು. ಅಗಸ್ತ್ಯಮುನಿ ಆ ತರುಣಿಯನ್ನು ನದಿಯಾಗಿ ಹರಿಯಲು ಪ್ರಾರ್ಥಿಸಿದ. ಅವನ ಕೋರಿಕೆ ಮನ್ನಿಸಿದ ಆ ತರುಣಿ ನದಿಯಾಗಿ ಹರಿಯಲಾರಂಭಿಸಿದಳು. ಅಗಸ್ತ್ಯಮುನಿ ಅವಳ ಪಥವನ್ನೇ ಅನುಸರಿಸುತ್ತಾ ನದಿಯ ದಡದ ಇಕ್ಕೆಲಗಳಲ್ಲಿ ನೂರಾರು ಪವಿತ್ರ ಕ್ಷೇತ್ರಗಳನ್ನು, ಶಿವ, ವಿಷ್ಣು ದೇವಾಲಯಗಳನ್ನು ಸ್ಥಾಪಿಸಿದ. ಇದೇ ತಾಮ್ರಪರ್ಣಿ ನದಿಯ ಉಗಮದ ಕತೆ.

ನದಿ ಉಗಮಗೊಂಡ ನಂತರ ಕೆಲವು ಮೈಲಿಗಳು ಪ್ರವಹಿಸಿ ಅಂಬಾ ಸಮುದ್ರಂ ಎಂಬ ಊರಿಗೆ 5 ಮೈಲಿ ದೂರದಲ್ಲಿರುವ ಪಾಪನಾಶನ ತೀರ್ಥಕ್ಕೆ ಬರುತ್ತದೆ. ಶಿವ ಪುರಾಣ ಮತ್ತು ಕೂರ್ಮ ಪುರಾಣಗಳಲ್ಲಿ ಈ ಕ್ಷೇತ್ರ ಮಹಿಮೆ ವರ್ಣಿತಗೊಂಡಿದೆ. ಇಲ್ಲಿ ಒಂದು ಸಣ್ಣ ಜಲಪಾತವೂ. ನೀರಿನ ಕುಂಡವೂ ಇದೆ. ಇದನ್ನು ಕಲ್ಯಾಣ ತೀರ್ಥ ಎಂದೂ ಕರೆಯುತ್ತಾರೆ. ಇಲ್ಲಿ ನದಿಸ್ನಾನ ಪಾವನಕರವೆಂದು ಪರಿಗಣಿತ 'ವಾಗಿದೆ. ಮುಂದೆ ತಾಮ್ರಪರ್ಣಿ ಅಂಬಾ ಸಮುದ್ರಗೆ ಬರುತ್ತದೆ. ಅಂಬಾ ಸಮುದ್ರಂ ತಿರುನಲ್ವೇಲಿಯಿಂದ 35 ಕಿ.ಮೀ. ದೂರದಲ್ಲಿದೆ. ಅಂಬಾ ಮತ್ತು ಸಮುಂದರ್ ಎಂಬ ಎರಡು ಪದಗಳಿಂದ ಈ ಹೆಸರು ಮಾಡಿ ಬಂದಿದೆ. ನೀರು ಮತ್ತು ದೇಗುಲಗಳಿರುವ ಜಾಗವೆಂದರ್ಥ. ಇಲ್ಲಿ ಹಲವಾರು ಪುರಾತನ ದೇವಾಲಯಗಳಿವೆ. ಅವುಗಳಲ್ಲಿ ಕಾಶೀನಾಥರ್ ಮತ್ತು

ಕೈಲಾಸನಾಥರ್ ದೇವಾಲಯಗಳು ಪ್ರಸಿದ್ಧವಾದವು. ಇಲ್ಲಿಯೂ ನದಿ ಸ್ನಾನ ಮಾಡಬಹುದು.

ನದಿ ಮುಂದೆ ಹರಿದು ತಿರುನಲ್ವೇಲಿ ಪಟ್ಟಣವನ್ನು ಪ್ರವೇಶಿಸುತ್ತದೆ. ತಿರುನಲ್ವೇಲಿಗೆ ಸುಮಾರು 2000 ವರ್ಷಗಳ ಸುಧೀರ್ಘ ಇತಿಹಾಸವಿದೆ. ಪೌರಾಣಿಕವಾಗಿಯೂ ಐತಿಹಾಸಿಕವಾಗಿಯೂ, ಆರ್ಥಿಕವಾಗಿಯೂ ಪ್ರಸಿದ್ಧವಾದ ಸ್ಥಳ. ಅನೇಕ ದೇವಾಲಯ ಗಳಿಂದಲೂ ಪರಿಶೋಭಿತ. ಈ ನಗರದಲ್ಲಿ ವರದರಾಜಸ್ವಾಮಿ, ಶಿವ ಮತ್ತು ಸುಬ್ರಹ್ಮಣ್ಯರ ದೇಗುಲಗಳಿವೆ. ಪ್ರಮುಖ ದೇವಾಲಯ ಸಾಲಿವತೇಶ್ವರ ಎಂದು ಹೆಸರಾದ ಶಿವನದು. ನೆಲ್ಲೈಯೆಪ್ಪರ್ ಎಂದೂ ಕರೆಯುತ್ತಾರೆ. ಇದೊಂದು ಸ್ವಯಂಭು ಲಿಂಗ. ಇವನ ಪತ್ನಿ ಕಾಂತಿ ಮತಿ ದೇವಿಯ ಆಲಯವೂ ಇದೆ. ವಿಶೇಷವೆಂದರೆ ಈ ದೇಗುಲದ ಪ್ರದಕ್ಷಿಣ ಪಥದಲ್ಲಿ ರಾವಣನದೊಂದು ವಿಗ್ರಹವಿರುವುದು. ಈ ದೇವಾಲಯದಲ್ಲಿ ಸುಂದರವಾದ ತಾವರೆಯ ಕೊಳ, ಸಾವಿರ ಕಂಭದ ಮಂಟಪ,ಸಂಗೀತದ ಕಂಭಗಳು, ಅಪೂರ್ವವಾದ ಶಿಲ್ಪಕಲೆ ಕಂಡು ಬರುತ್ತದೆ.

ಈ ಊರಿಗೆ ತಿರುನಲ್ವೇಲಿ ಎಂಬ ಹೆಸರು ಬರಲು ಪುರಾಣಗಳಲ್ಲಿ ಐತಿಹ್ಯವೊಂದಿದೆ. ಹಿಂದೆ ವೇದಶರ್ಮನೆಂಬ ಮಹಾ ಶಿವ ಭಕ್ತನಿದ್ದ. ಅವನು ಶೈವ ಕ್ಷೇತ್ರ ಯಾತ್ರೆ ಮಾಡುತ್ತಿರುವಾಗ ಒಮ್ಮೆ ಅವನ ಕನಸಿನಲ್ಲಿ ಶಿವ ದರ್ಶನ ಕೊಟ್ಟು ತಾಮ್ರಪರ್ಣಿ ನದಿ ದಡದಲ್ಲಿರುವ ತನ್ನ ಆಲಯಕ್ಕೆ ಬರಲು ಸೂಚಿಸಿದ. ಆಗ ವೇದಶರ್ಮ ಸಿಂಧು ಪೂಂದುರೈ ಎಂದು ಹೆಸರಾಗಿದ್ದ ಈ ಸ್ಥಳಕ್ಕೆ ಬಂದು ವಾಸಿಸುತ್ತಾ ಅಲ್ಲಿದ್ದ ಶಿವಲಿಂಗವನ್ನು ಆರಾಧಿಸುತ್ತಿದ್ದ. ಒಮ್ಮೆ ಅಲ್ಲಿ ಕ್ಷಾಮ ಉಂಟಾಗಲು ವೇದಶರ್ಮ ಭತ್ತವನ್ನು ಭಿಕ್ಷೆ ಬೇಡಿ ತಂದು ಜೀವಿಸುತ್ತಿದ್ದ ಹೀಗಿರಲು ಒಂದು ದಿನ ತಂದ ಭತ್ತವನ್ನು ಒಣಗಲು ಬಿಸಿಲಿನಲ್ಲಿ ಹರಡಿ ನದಿಗೆ ಸ್ನಾನಕ್ಕೆಂದು ಹೋದ. ಜನರ ಬವಣೆಯನ್ನು ನೋಡಲಾಗದೆ ಶಿವನನ್ನು ಮಳೆಗಾಗಿ ಪ್ರಾರ್ಥಿಸಲು ಅವನ ಪ್ರಾರ್ಥನೆಗೆ ಓ ಗೊಟ್ಟು ಜೋರಾಗಿ ಮಳೆ ಸುರಿಯಿತು. ವೇದಶರ್ಮನಿಗೆ ತಾನು ಒಣ ಹಾಕಿದ ಭತ್ತನೆನೆಯಿತೆಂಬ ಚಿಂತೆ ಉಂಟಾಗಿ ಧಾವಿಸಿ ಬಂದು ನೋಡಲು ಅಲ್ಲೊಂದು ಅದ್ಭುತ ಪವಾಡ



ಕಾದಿತ್ತು. ಸುತ್ತಲೂ ಮಳೆ ಸುರಿದಿದ್ದರೂ ವೇದಶರ್ಮ ಒಣಹಾಕಿದ್ದ ಭತ್ತದ ಮೇಲೆ ಒಂದು ಹನಿ ನೀರೂ ಬಿದ್ದಿರಲಿಲ್ಲ. ಅಂದಿನಿಂದ ಈ ಊರಿಗೆ ತಿರು-ನೆಲ್-ವೇಲಿ ತಿರುನಲ್ವೇಲಿ ಎಂದು ಹೆಸರಾಯಿತು.

ತಿರುನಲ್ವೇಲಿಯಿಂದ ಹರಿದ ನದಿ ಮುಂದೆ ಶ್ರೀ ವೈಕುಂಠಂ ಪ್ರವೇಶಿಸುತ್ತದೆ. ಈ ಸ್ಥಳವನ್ನು ತಿರುವೈಕುಂಠಂ ಎಂದೂ ಕರೆಯುತ್ತಾರೆ. ಇದು ತಿರುನಲ್ವೇಲಿಯಿಂದ 22 ಕಿ.ಮೀ.ದೂರದಲ್ಲಿ ತೂತುಕೂಡಿ ಜಿಲ್ಲೆಯಲ್ಲಿದೆ. ಶ್ರೀ ವೈಕುಂಠಂ ಶ್ರೀ ವೈಷ್ಣವರ 108 ದಿವ್ಯ ದೇಶಗಳಲ್ಲೊಂದು. ಪ್ರಸಿದ್ಧವಾದ ಯಾತ್ರಾಸ್ಥಳ. ದೇವಸ್ಥಾನ ತಾಮ್ರಪರ್ಣಿ ನದಿಯ ದಡದಲ್ಲಿದೆ. ವಿಶಾಲವಾಗಿದ್ದು, ಭವ್ಯ ಶಿಲ್ಪ ಕಲೆಯಿಂದ ಕೂಡಿದೆ. ಶ್ರೀದೇವಿ ಭೂದೇವಿ ಸಹಿತನಾದ ವಿಷ್ಣುಮೂರ್ತಿ ಇಲ್ಲಿಯ ಆದಿ ದೈವ. ಮೂಲ ದೇವರು ಶ್ರೀ ವೈಕುಂಠವಲ್ಲಿ ತಾಯಾರ್ ನಿಂತಿರುವ ಭಂಗಿಯಲ್ಲಿರುವ ಮೂರ್ತಿ. ವಿಮಾನದ ಹೆಸರು ಚಂದ್ರ ವಿಮಾನ. ಇಲ್ಲಿನ ವಿಶೇಷವೆಂದರೆ ಮೂಲದೇವರಿಗೆ ನಿತ್ಯವೂ ಹಾಲಿನಿಂದ ಅಭಿಷೇಕವಾಗುತ್ತದೆ. ಈ ಸ್ವಾಮಿ ಇಂದ್ರನಿಗೂ ಪೃಥು ಚಕ್ರವರ್ತಿಗೂ ಪ್ರತ್ಯಕ್ಷ ಎಂದು ಹೇಳಲ್ಪಟ್ಟಿದೆ. ನಮ್ಮಾಳ್ವಾರ್ ಈ ದೇವರನ್ನು ಸ್ತುತಿಸಿದ್ದಾರೆ. ಆ ವೈಕುಂಠಂ ನವ ತಿರುಪತಿಗಳಲ್ಲಿ ಒಂದೆಂದೂ, ಸೂರ್ಯ ಗ್ರಹ ಕ್ಷೇತ್ರವೆಂದೂ ಹೇಳುತ್ತಾರೆ. ಈ ದೇಗುಲದ ತಿರುವೇಂಗಡ ಮುಡೈಯಾರ್ ಮಂಟಪದ ಏಕಾದಶಿ ಮಂಟಪ ಮುಂತಾದ ಎಡೆಗಳಲ್ಲಿ ಭವ್ಯ ಸುಂದರ ಮನೋಹರ ಶಿಲ್ಪ ಕಲೆಯಿದೆ. ಈ ದೇಗುಲದಲ್ಲಿ ತಮಿಳು ನಾಡಿನ ದೇವಾಲಯಗಳಲ್ಲಿ ಮೂರನೆಯ ಅತಿ ದೊಡ್ಡ ರಥವಿದೆ. ಇಲ್ಲಿಯ ಚಿತ್ತರೈ ರಥೋತ್ಸವ ಪ್ರಸಿದ್ಧವಾದುದು. ಶ್ರೀ ವೈಕುಂಠಂ ವಿಷ್ಣು ಭಕ್ತರೆಲ್ಲರೂ ಒಮ್ಮೆ ಸಂದರ್ಶಿಸಲೇ ಬೇಕಾದ ಪವಿತ್ರ ಯಾತ್ರಾ ಸ್ಥಳ.

ತಾಮ್ರಪರ್ಣಿ ನದಿ ತೂತ್ತುಕುಡಿ ಜಿಲ್ಲೆಯಲ್ಲಿ ಹರಿದು ಸಮುದ್ರದೊಡನೆ ಸಂಗಮಿಸುತ್ತದೆ. ಪ್ರಾಚೀನ ಕಾಲದಿಂದಲೂ ಇಲ್ಲಿ ದೊರೆಯುವ ಮುತ್ತುಗಳಿಂದಾಗಿ ಮುತ್ತಿನ ನಗರಿ ಎಂದೇ ಪ್ರಖ್ಯಾತವಾಗಿತ್ತು. ಮುತ್ತು ಕುಜೀತುರೈ

ಎಂದೇ ಕರೆಯಲ್ಪಡುತ್ತಿತ್ತು.ಇದೀಗ ಒಂದು ದೊಡ್ಡ ಬಂದ ರಾಗಿದೆ, ಮತ್ತು ಪ್ರಸಿದ್ಧ ಪ್ರವಾಸಿ ತಾಣವಾಗಿದೆ.

ತಾಮ್ರಪರ್ಣಿ ನದಿ ಅದರಲ್ಲಿ ದೊರೆಯುವ ಮುತ್ತು ಗಳಿಗಾಗಿ ಪ್ರಸಿದ್ಧವಾಗಿದೆ.ಇತಿಹಾಸ ಪುರಾಣಗಳಲ್ಲೇ ಈ ವಿಷಯ ಪ್ರಸ್ತಾಪಗೊಂಡಿದೆಯೆಂದರೆ ನದಿಯ ಪ್ರಖ್ಯಾತಿಗೂ, ಮುತ್ತುಗಳು ಈ ನದಿಯಲ್ಲಿ ಪ್ರಾಚೀನ ಕಾಲದಿಂದಲೂ ದೊರೆಯುತ್ತಿದ್ದುವೆಂಬುದಕ್ಕೂ ಸಾಕ್ಷಿಯಾಗಿದೆ.ವಾಯು ಪುರಾಣದ 77 ನೇ ಅಧ್ಯಾಯ 24-27 ಪದ್ಯಗಳಲ್ಲಿ ಈ ವಿಷಯ ಪ್ರಸ್ತಾಪಗೊಂಡಿದೆ ಕಾಳಿದಾಸನ ರಘುವಂಶ ಕಾವ್ಯದ 4 ನೇ ಅಧ್ಯಾಯದ 49-50 ಪದ್ಯಗಳಲ್ಲಿ ತಾಮ್ರ ಪರ್ಣಿ ನದಿಯಲ್ಲಿ ಮುತ್ತುಗಳು ದೊರೆಯುವುವೆಂದು ಹೇಳ ಲಾಗಿದೆ. ನೀಲಕಂಠ ದೀಕ್ಷಿತರ ಶಿವಲೀಲಾರ್ಣವ ಕಾವ್ಯದಲ್ಲಿ 5 ಪದ್ಯಗಳಲ್ಲಿ ತಾಮ್ರಪರ್ಣಿ ನದಿ ವರ್ಣಿತಗೊಂಡಿದೆ.ತಾಮ್ರ ಪರ್ಣಿ ಅಗಸ್ತ್ಯರ ಮಗಳೆಂದೂ ಅವಳು ಪತಿ ಗೃಹಕ್ಕೆ ಅಂದರೆ ಸಾಗರದೊಡನೆ ಸಂಗಮಿಸಲು ತೆರಳಿದಾಗ ಅವಳಿಗೆ ಮುತ್ತು ರತ್ನಗಳನ್ನಿತ್ತರೆಂದೂ, ಅವು ಇಂದಿಗೂ ನದಿಯಲ್ಲಿ ದೊರೆಯು ವವೆಂದೂ ಅದರಿಂದ ಸಾಗರಕ್ಕೆ ರತ್ನಾಕರ ಎಂಬ ಹೆಸರು ಬಂದಿತೆಂದೂ ವರ್ಣಿಸಿದ್ದಾರೆ. ಸ್ವಾದೀ ಮಠದ ಪರಂಪರೆ ಯಲ್ಲಿ ಬಂದ ಶ್ರೀ ವಾದಿರಾಜಗುರುಸಾರ್ವ ಭೌಮರೂ ತಮ್ಮ ತೀರ್ಥ ಪ್ರಬಂಧ ಗ್ರಂಥದಲ್ಲಿ "ತಾಮ್ರಪರ್ಣಿ ನದಿಯಲ್ಲಿರುವ ಜಡವಾದ ಮುತ್ತಿನ ಚಿಪ್ಪು ಕೂಡ ಮಳೆಯ ಮೂಲಕ ತನ್ನಲ್ಲಿ ಬಿದ್ದ ಜಲವನ್ನು ಮುಕ್ತೀಕೃತವಾಗಿ ಮಾಡುತ್ತದೆ. (ಮುತ್ತನ್ನಾಗಿ ಮಾಡುತ್ತದೆ.)ಅಂತಹ ತಾಮ್ರ ಪರ್ಣಿಯ ಜಲವನ್ನು ಮುಕ್ತೀ ಕೃತರಾಗಲು (ಮುಕ್ತರಾಗಲು) ಬಯಸುವರೆಲ್ಲರೂ ಸೇವಿಸ ಬೇಕು"ಎಂದು ಅಲಂಕಾರ ಧ್ವನಿ ಗರ್ಭಿತವಾಗಿ ತಾಮ್ರ ಪರ್ಣದ ನದಿಯನ್ನು ಪ್ರಶಂಶಿಸಿದ್ದಾರೆ.

ಪ್ರಸಿದ್ಧ ಹರಿದಾಸವರೇಣ್ಯರಾದ ವಿಜಯದಾಸರು ತೀರ್ಥಕ್ಷೇತ್ರಯಾತ್ರೆಯಲ್ಲೂ, ಆ ಕ್ಷೇತ್ರಗಳ ವರ್ಣನೆಯಲ್ಲೂ ಅಪರಿಮಿತ ಸಿದ್ಧಹಸ್ತರು. ಅವರು 101 ಕ್ಷೇತ್ರದರ್ಶನ ಸುಳಾದಿ ಗಳ ಗುಚ್ಛವನ್ನು ರಚಿಸಿದ್ದು. ಆ ಸಂಚಯದಲ್ಲಿ 3 ಸುಳಾದಿ ಗಳಲ್ಲಿ ತಾಮ್ರ ಪರ್ಣಿ ನದಿಯ ಉಗಮದ ಕತೆ, ಮತ್ತು ಮಹಿಮೆ ಗಳನ್ನು ವರ್ಣಿಸಿ ಸ್ತುತಿಸಿದ್ದಾರೆ.

ಈ ತಾಮ್ರ ಪರ್ಣಿಯ ಸ್ನಾನ ಮಾಡಿದ ನರನ
ಪಾತಕ ಓಡಿ ಪೋಳಿಡುತ ಪೋಗುವುದು
ಭೂತಳದೊಳಗಿದರ ಸರಿಸಮಾನವಿಲ್ಲ
ಅನಂತ ಜನುಮದ ಪುಣ್ಯ ಫಲಿಸಿದರೆ
ಈ ನದಿಯಲ್ಲಿ ಒಂದು ಸ್ನಾನ ದೊರಕುವುದು
ಈ ನಿಧಿಗಳಾದ ನವ ತಿರುಪತಿದರು
ಶನವಾಗುವುದು ಒಂದೆ ವಾಸರದಲ್ಲಿ

ವೈಕುಂಠಾದಿ ಧ್ಯಾನಾ ತಾಮ್ರ ಪರ್ಣಿಯ ಸ್ನಾನ
ಏಕಚಿತ್ತದಿ ಮಾಡಲು ಒಲಿವ ವಿಜಯ ವಿಠಲ

ವೈಕುಂಠಪುರದ ಬಯಕೆ ಉಳ್ಳವರು ಶ್ರೀ ವೈಕುಂಠ ಯಾತ್ರೆಯ ಮಾಡಿರೆಂದು ನಮ್ಮ ವಿಜಯವಿಠಲ ನಿಜ ವೈಕುಂಠ ಪುರದಿಂದ ಇಲ್ಲಿ ಮೆರೆದ.

ತಾಮ್ರ ಪರ್ಣಿಯ ಸ್ನಾನವ ತಿರುಪತಿಯಾತ್ರೆ
ಸಂಭ್ರಮದಲಿ ಮಾಡೆ ವಿಜಯವಿಠಲ ಒಲಿವ

ಎಂದು ತಾಮ್ರಪರ್ಣಿ ನದೀ ಸ್ನಾನ ಮಹಿಮೆಯನ್ನೂ, ಶ್ರೀ ವೈಕುಂಠಂ ಕ್ಷೇತ್ರವನ್ನೂ ವರ್ಣಿಸಿ ಸ್ತುತಿಸಿದ್ದಾರೆ.

ಹರಿಕಥಾಮೃತಸಾರ ಮಹಾಗ್ರಂಥದ ಕರ್ತೃಗಳಾದ ಜಗನ್ನಾಥ ದಾಸರು ಹಲವಾರು ನದೀ ಸ್ತೋತ್ರಗಳನ್ನೂ ರಚಿಸಿ ದ್ದಾರೆ."ಅಹಿರಾಜ ಶಯನಾನಂತ ತಾಮ್ರ ಪರ್ಣಿಯೊಳಗೆ ವಿರಾಜಿಪ"ಎನ್ನುತ್ತಾ ತಾಮ್ರಪರ್ಣಿ ನದಿಯಲ್ಲಿ ಅನಂತ ಶಯನನ ಸನ್ನಿಧಾನವಿದೆ ಎಂದು ಹೇಳಿದ್ದಾರೆ.

ತಾಮ್ರಪರ್ಣಿಯಲ್ಲಿ ಸ್ನಾನ ಮಾಡುವಾಗ ಅನಂತ ಶಯನವನ್ನು ಸ್ಮರಿಸಬೇಕು ಎಂದು ಪುರಾಣಗಳಲ್ಲಿ ಹೇಳಿದ್ದಾರೆ. ತಾಮ್ರ ಪರ್ಣಿ ಪುಷ್ಕರ ಕಾಲದಲ್ಲಿ ತಾಮ್ರಪರ್ಣಿಯಲ್ಲಿ ಸ್ನಾನ ಮಾಡಿದ ನಂತರ

ಬೃಹಸ್ಪತಿ ಸುರಾಧ್ಯಕ್ಷ ಸರ್ವದೇವ ನಮಸ್ಕೃತ
ಗೃಹಾಣಾರ್ಘ್ಯಂ ಮಯಾದತ್ತಂ ವೃಶ್ಚಿಕಸ್ಥೋ ಭಾರ್ಯಯಾ ಸಹ

ಎಂದು ಅರ್ಘ್ಯ ಪ್ರಧಾನ ಮಾಡಬೇಕು ಎಂದು ಹೇಳಲಾಗಿದೆ. ಸಂಕಲ್ಪ ಪೂರ್ವಕವಾಗಿ ನದಿ ಸ್ನಾನ ಮಾಡಿದ ನಂತರ ಅರಿಶಿನ, ಕುಂಕುಮ, ಹೂ, ಗೆಜ್ಜೆ, ವಸ್ತ್ರ ಮುಂತಾದ ಮಂಗಳ ದ್ರವ್ಯಗಳಿಂದ ನದಿಯನ್ನು ಪೂಜಿಸುವ ಸಂಪ್ರದಾಯ ವಿದೆ.ಕೆಲವರು ದೀಪಗಳನ್ನು ಹಚ್ಚಿ ನದಿಯಲ್ಲಿ ತೇಲಿಬಿಡು ತ್ತಾರೆ. ಮೊರದ ಬಾಗಿನಗಳನ್ನು ಅರ್ಪಿಸುವುದೂ ಉಂಟು. ಅನೇಕ ವಿಧವಾದ ಇತರ ದಾನಗಳನ್ನು ಮಾಡುತ್ತಾರೆ. ಈ ಸಮಯದಲ್ಲಿ ತಾಮ್ರ ಪರ್ಣಿ ತೀರದಲ್ಲಿ ನಡೆಸುವ ಪಿತೃ ಕಾರ್ಯಗಳಿಂದ ಏಳು ತಲೆಮಾರುಗಳ ಪಿತೃ ಪಂಕ್ತಿ ಸದ್ಗತಿ ಪಡೆಯುವರೆಂದು ಹೇಳಲಾಗಿದೆ. ಸ್ಕತ್ರುರ್ಥ ಸಾಗರ ಗ್ರಂಥದಲ್ಲಿ ಅರವತ್ತು ಸಾವಿರ ವರ್ಷ ಗಂಗಾನದಿಯಲ್ಲಿ ಸ್ನಾನ ಮಾಡಿದ ಪುಣ್ಯಕ್ಕೆ ಸಮಾನವಾದ ಪುಣ್ಯವು ವೃಶ್ಚಿಕರಾಶಿಯಲ್ಲಿ ಬೃಹ ಸ್ಪತಿಯಿರುವಾಗ ತಾಮ್ರ ಪರ್ಣಿ ನದಿಯಲ್ಲಿ ಸ್ನಾನ ಮಾಡುವು ದರಿಂದ ಬರುತ್ತದೆ ಎಂದು ಹೇಳಲಾಗಿದೆ. ಈ ಪರ್ವ ಕಾಲದಲ್ಲಿ ತಾಮ್ರ ಪರ್ಣಿ ನದೀ ತೀರದ ಪುಣ್ಯಕ್ಷೇತ್ರಗಳು ಭಕ್ತರನ್ನು ಸಾಧಕರನ್ನು ಸ್ನಾನ ಮಾಡಿ ಪುನೀತರಾಗಲು ಕೈಬೀಸಿ ಕರೆ ಯುತ್ತಿವೆ.

# ಯಶೋದಾ ಮಾತೆಯ ವಾತ್ಸಲ್ಯ

-ಶ್ರೀಮತಿ. ಎಸ್. ಕಲ್ಯಾಣಿ




ಅಙ್ಕಾದಿ ರೂಢಂ ಶಿಶುಗೋಪಗೂಢಂ
ಸ್ತನಂ ಧಯಂತಂ ಕಮಲೈ ಕ ಕಾಂತಮ್।
ಸಂಭೋದಯಾಮಾಸ ಮುದಾ ಯಶೋದಾ
ಗೋವಿಂದ ದಾಮೋದರ ಮಾಧವೇತಿ"

(ತನ್ನ ಮಡಿಲಿನಲ್ಲಿ ಕುಳಿತು ಹಾಲು ಕುಡಿಯುತ್ತಾ ಬಾಲ ಗೋಪಾಲ ರೂಪದ ಭಗವಾನ ಲಕ್ಷ್ಮೀಕಾಂತನನ್ನು ಗಮನಿಸುತ್ತಾ ಪ್ರೇಮಾನಂದದಲ್ಲಿ ಮಗ್ನಳಾಗಿದ್ದ ಮಾತೆ ಯಶೋದೆ ಈ ರೀತಿ ಕರೆಯುತ್ತಿದ್ದಳು-ಮೇರೆ ಗೋವಿಂದ! ನನ್ನ ದಾಮೋದರ! ನನ್ನ ಮಾಧವ... ಇತ್ಯಾದಿ).

ಮಹಾನ್ ಭಾಗ್ಯಶಾಲಿಯಾದ ಯಶೋದಾಮಾತೆಯ ಅದೃಷ್ಟವನ್ನು ಯಾರು ತಾನೆ ವರ್ಣಿಸಲು ಸಾಧ್ಯ? ಆಕೆಯ ಸ್ತನ್ಯಪಾನವನ್ನು ಸಾಕ್ಷಾತ್ ಬ್ರಹ್ಮಾಂಡನಾಯಕನೇ ಮಾಡಿದ್ದಾನೆ. ಜಗತ್ತಿನ ಅನೇಕ ರೀತಿಯ ಭಕ್ತರಿದ್ದಾರೆ. ಅವರ ಬಯಕೆಯಂತೆ ಭಗವಂತ ಅನೇಕ ರೂಪವನ್ನು ಧರಿಸಿದ. ತೀರ ಕೆಳಹಂತದ ಕೆಲಸಮಾಡಿದ, ಚಿಕ್ಕದಕ್ಕಿಂತಲೂ ಚಿಕ್ಕ ಸೇವೆ ಮಾಡಿದ.ಹಲವು ಕಡೆ ಹಲವು ಅವತಾರವೆತ್ತಿದ. ಧರ್ಮರಾಜನ ಯಜ್ಞದಲ್ಲಿ ಎಲ್ಲರ ಕಾಲುಗಳನ್ನು ತೊಳೆದ. ಆದರೆ ಅವನನ್ನು ಯಾರೂ ಕಟ್ಟಿ ಹಾಕಲಿಲ್ಲ ಬೆತ್ತವನ್ನು ಕೈ ಯಲ್ಲಿ ಹಿಡಿದು ಹೊಡೆಯುವ ಅವಕಾಶ ಸೌಭಾಗ್ಯರತಿ ಯಶೋದೆಗೆಸಿಕ್ಕಿತು.ಇಂತಹ ಸುಖ, ವಾತ್ಸಲ್ಯ - ಆನಂದ ಜಗತ್ತಿನಲ್ಲಿ ಯಾರಿಗೂ ದೊರಕಲಿಲ್ಲ.ಹಾಗಾಗಿಯೇ ಮಹಾ ರಾಜ ಪರೀಕ್ಷಿತ್ ಕೇಳಿದ್ದು ಮಹಾಭಾಗ್ಯಶೀಲಳಾದ ಯಶೋದೆ ಅದೆಷ್ಟು ಸುಕೃತ ಮಾಡಿದ್ದಳು.ಹಾಗಾಗಿಯೇ ಶ್ರೀ ಹರಿಯೇ ಅವಳ ಸ್ತನ್ಯಪಾನ ಮಾಡಿದನಲ್ಲವೇ?"

ನಂದಬಾಬಾನ ರಾಣಿ ಯಶೋದಾಳಿಗೆ ಯಾವುದೇ ಸಂತಾನವಿರಲಿಲ್ಲ. ವೃದ್ಧಾವಸ್ಥೆಯಲ್ಲಿ ಬಂದ ಶ್ಯಾಮಸುಂದರ ಅವಳ ಪ್ರೀತಿಯ ಕಂದನಾದ. ತಾಯಿಯ ಹರ್ಷಕ್ಕೆ ಪಾರವೇ ಇಲ್ಲ. ಕಣ್ಣುಗಳನ್ನು (ಅವಳು) ಬೊಂಬೆಯಂತೆ ಆಕೆ ತನ್ನ ಶ್ಯಾಮಸುಂದರನ ಪಾಲನೆ - ಪೋಷಣೆ ಮಾಡುತ್ತಿದ್ದಳು. ಹೊರಗೆ ಕಾಟಾಚಾರಕ್ಕೆ ಕೆಲಸಕ್ಕೆ ತೊಡಗುತ್ತಿದ್ದಳೇ ಹೊರತು ಮನಸ್ಸು ಸದಾ ಶ್ಯಾಮಸುಂದರನತ್ತ ಆಕರ್ಷಿತಗೊಳ್ಳುತ್ತಿತ್ತು. ಶ್ಯಾಮಸುಂದರ ಅವಳ ಕಣ್ಣುಗಳಿಂದ ಮಾಯವಾಗದೆ, ಸದಾ ಆ ಮನಮೋಹನ ತನ್ನ ಹೃದಯ ಮಂದಿರದ ಅಂಗಳದಲ್ಲಿ ಆಡುತ್ತಿರಬೇಕೆಂಬಾಸೆ,ಚರ್ಮ ಚಕ್ಷುವೂ ಸಹ ಅನಿಮೋಷ ಭಾವದಿಂದ ಅವನನ್ನು ನೋಡುತ್ತಿರಬೇಕು.ಆದರೆ ಈ ಬಾಲಕ ಅದ್ಭುತವಾಗಿದ್ದ. ಹುಟ್ಟಿದ ಸ್ವಲ್ಪ ದಿನಗಳಲ್ಲಿಯೇ ಪೂತನಿ ಬಂದು ಇವನನ್ನು ಕೊಲ್ಲಲಿಚ್ಛಿಸಿದಳು. ಆದರೆ ಅವಳು ತಾನೇ ಸ್ವತಃ ಕೊಲ್ಲಲ್ಪಟ್ಟಳು. ಶಠಾಸುರ ಮಾಯೆಯನ್ನು ಹರಡಿದ. ಅವನ ಅಂತ್ಯವೂ ಆಯಿತು. ವ್ಯೋಮಾಸುರನು ಬಲೆಬೀಸಿದ,ಅವನೂ ಸಹ ಯಮಲೋಕ ಪ್ರವೇಶಿಸಿದ. ಹೀಗೆ ಪ್ರತಿನಿತ್ಯ ಹೊಸ ಉತ್ಪಾತಗಳು ನಡೆಯುತ್ತಿದ್ದವು. ಮಗು ಬಹಳ ಚಂಚಲವೆಂದು ತಾಯಿಗೆ ಅನುಮಾನ ಕಾಡಿತು.

ಇವನ ಚಂಚಲತೆ ನಿತ್ಯ ಹೆಚ್ಚುತ್ತಲೆ ಹೋಯಿತು. ಅದೇನು ಘಟಿಸುತ್ತೋ ಎನ್ನುವುದೇ ತಿಳಿಯಲಿಲ್ಲ.



ಒಂದು ದಿನ ತಾಯಿ ಹಾಲು ಕುಡಿಸುತ್ತಿದ್ದಳು. ಅತ್ತ ಹಾಲು ಉಕ್ಕಿತು. ಮಗುವನ್ನು ನೆಲದ ಮೇಲೆ ಕೂರಿಸಿ ಹಾಲು ನೋಡಲು ಹೋದಳು. ಭಗವಾನ್ ಚಂಚಲನಲ್ಲವೇ! ಮೊಸರಿನ ಗಡಿಗೆ ಒಡೆದು, ಬೆಣ್ಣೆ ಬಿಸಾಕಿದ. ಮಂಗಗಳನ್ನು ಕರೆದ. ಇದು ಮಹಾನ್ ಅನರ್ಥವೆಂದು ತಾಯಿಗನಿಸಿತು. ನೋಡುತ್ತಲೇ ಓಡಿ ಹೋಗುತ್ತಿದ್ದ, ಅದೆಲ್ಲ ಹೋಗುತ್ತಿದ್ದನೋ ತಿಳಿಯದು? ! ನಿಧಾನವಾಗಿ ಹಿಡಿದು :- 'ಈಗ ಹೇಳು, ನೀನು ಬಹಳ ಚೇಷ್ಟೆಮಾಡಿತೀಯೇ!? ಮನೆಯಲ್ಲಿ ಸುಮ್ಮಿರೋದೇ ಇಲ್ಲ, ನಾನು ನಿನ್ನನ್ನು ಕಟ್ಟಿಹಾಕ್ತೀನಿ ಅಂದಳು. ಹೀಗೆಂದವಳೇ ಅವನನ್ನು ಒರಳು ಕಲ್ಲಿಗೆ ಕಟ್ಟಿದಳು. ಎಂದೂ ಕಟ್ಟಲ್ಪಟ್ಟಿರಲಿಲ್ಲ, ಇಂದು ಕಟ್ಟಿ ಹಾಕಲ್ಪಟ್ಟಿದ್ದ. ಆದರೆ ಅವನ ಬಂಧನವೂ ಸಹ ಬೇರೆಯವರ ಬಿಡುಗಡೆಗಾಗಿಯೇ ಆಗಿತ್ತು.ಒರಳು ಕಲ್ಲನ್ನೇ ಎಳೆದಾಡಿಕೊಂಡು ಯಮಳಾರ್ಜುನ ವೃಕ್ಷಗಳ ನಡುವೆ ಸೇರಿದ್ದರು. ಅವುಗಳನ್ನು ತನ್ನ ಸ್ಪರ್ಶದಿಂದ ಶಾಪಮುಕ್ತಗೊಳಿಸಿದ. ಉತ್ಪಾತ ಹೆಚ್ಚುತ್ತಿರುವುದನ್ನು ನಂದಜಿ ಕಂಡು ತನ್ನ ಬಂಡಿಗಳನ್ನು ಹೂಡಿಕೊಂಡು ಜ್ಞಾತಿ ಬಂಧುಗಳನ್ನು ಮತ್ತು ಹಸುಗಳೊಂದಿಗೆ ಶ್ರೀಬೃಂದಾವನಕ್ಕೆ ಹೊರಟು ಹೋದರು.

ಬೃಂದಾವನದಲ್ಲಾದರೋ ಈ ಬೃಂದಾವನ ವಿಹಾರಿಯು ಅನಂತಲೀಲೆಗಳನ್ನು ಮಾಡಿದ. ಅವುಗಳ ವರ್ಣನೆಯನ್ನು ಯಾರು ತಾನೆ ವರ್ಣಿಸಲು ಸಾಧ್ಯ? ಆದರೆ ಯಶೋದಾ ಮಾತೆಗೆ ಆಶ್ಚರ್ಯವಾಗಿದ್ದು ಒಂದೇ ಘಟನೆ. ಕಾಳಿಯ ಹೃದಯದಲ್ಲಿ ಒಂದು ವಿಷಧರ ಸರ್ಪವಿತ್ತು. ಅದು ಸಮಸ್ತ ಯಮುನೆಯ ನೀರನ್ನು ವಿಷವನ್ನಾಗಿ ಮಾಡಿತ್ತು. ಆಟವಾಡುತ್ತಿದ್ದಾಗ ಚೆಂಡು ಆ ನದಿಯ ಮಧ್ಯಭಾಗಕ್ಕೆ ಬಿದ್ದಿತು. ಅದರ ಆಧಾರದಿಂದಲೇ ಮುರಾರಿ ಕದಂಬ ವೃಕ್ಷದ ಕೊಂಬೆಯನ್ನು ಹಿಡಿದು ಕಾಳಿ ನದಿಯ ಹೃದಯಕ್ಕೆ ನೆಗೆದ.ಎಲ್ಲೆಡೆಯೂ ಹಾಹಾಕಾರ ಉಂಟಾಯಿತು. ವ್ರಜವಾಸಿಗಳು ಓಡಿ ಬಂದರು. ತಾಯಿ ಯಶೋದೆಗೂ ಸುದ್ಧಿ ಹೋಯಿತು. ಅವಳ ದುಃಖ ಅಷ್ಟಿಷ್ಟಲ್ಲ. ತನ್ನ ಪ್ರೀತಿಯ ಮಗ ಕಾಣದುದಕ್ಕೆ ಪರಿತಪಿಸಿದಳು. ಬಹಳ ದುಃಖಿತಳಾಗಿ:- ಯಾರಾದರೂ ನನ್ನ ಮಗನನ್ನು ಉಳಿಸಿ ನನ್ನ ಮುದ್ದು ಕಂದನನ್ನು ನನಗೆ ತೋರಿಸಿ"ಎಂದು ಅಳುತ್ತಲೇ ತಾನೇ ಸ್ವತಃ ಆ ಕುಂಡಕ್ಕೆ ಧುಮುಕ ತೊಡಗಿದಳು. ಅಷ್ಟರಲ್ಲಿ ಗೋಪಿಯರು ಅವಳನ್ನು ಹಿಡಿದರು.ಇದೀಗ ನಾಗವನ್ನು ಹಿಮ್ಮೆಟ್ಟಿಸಿ ಸೀಳಿ ನಂದನಂದನ ಹೊರಗೆ ಬಂದ.ಮಾತೆ ಯಶೋದಾ ಹೋಗಿ ಮಗುವನ್ನು ಅಪ್ಪಿ ಕೊಂಡಳು. ಪ್ರೇಮಾಶ್ರುವಿನಲ್ಲಿ ಅವನನ್ನು ತೊಯ್ಯಿಸಿದಳು.

ಕಾಲಬದಲಾಯಿತು, ಆ ಲೀಲೆಗಳ ನೆನಪಿನ ಸಮಯ ಬಂದಿತು. ಅಕ್ರೂರನೊಂದಿಗೆ ಘನಶ್ಯಾಮ ಮಥುರೆಗೆ ಹೋದ. ಬೇಗ ಬರುತ್ತಾನೆಂದು ಮಾತೆಗೆ ಭರವಸೆ ಇತ್ತು. ಆದರೆ ಆತ ಬೇಗ ಬರಲಿಲ್ಲ. ಅವನ ಬದಲು ಉದ್ಧವ ಸಂದೇಶವನ್ನು ಹೊತ್ತು ತಂದ. ಅವನನ್ನು ಕಾಣುತ್ತಲೇ ನಂದ ಪ್ರಶ್ನೆಗಳ ಮಳೆ ಸುರಿಸಿದ. ಹತ್ತಿರದಲ್ಲೇ ಕುಳಿತ್ತಿದ್ದ ವಿಯೋಗಿನೀ ಮಾತೆ ತನ್ನ ಮಗನ ಮಾತೆಲ್ಲವನ್ನು ಕೇಳಿಸಿ ಕೊಳ್ಳುತ್ತಿದ್ದಳು. ಅವಳ ಹೃದಯದಲ್ಲಿ ವೇದನೆ ಉಂಟಾಗುತ್ತಿತ್ತು. ಆ ನೆನಪುಗಳು ಬರುತ್ತಲೇ ಮಾತಾ ಯಶೋದೆಯ ಸ್ಥಿತಿಯೇ ವಿಚಿತ್ರವಾಯಿತು.

ಯಶೋದಾ ವರ್ಣ್ಯಮಾನಾನಿ ಪುತ್ರಸ್ಯ ಚರಿತಾನಿ ಚ ।
ಶೃಣ್ವಂತ್ಯ ಶ್ರೂಣ್ಯವಾಸ್ರಾಕ್ಷೀತ್ ಸ್ನೇಹಸ್ನುತ ಪಯೋಧರಾ॥

- ಅವಳ ಕಣ್ಣುಗಳಿಂದ ಪ್ರೇಮಾಶ್ರು ಹರಿಯುತ್ತಿತ್ತು. ಸ್ತನಗಳಿಂದ ಹಾಲು ಉಕ್ಕುತ್ತಿತ್ತು. ಅವನ ನೆನಪುಗಳೆಲ್ಲವೂ ಅವಳನ್ನು ಎಡೆಬಿಡದೆ ಅಳಿಸುತ್ತಿತ್ತು.

'ತೇ ಹಿ ನೋ ದಿವಸಾ ಗತಾಃ'

ಯಶೋದೆ ಧನ್ಯೆ, ಆಕೆ ಭಗವಾನ್ ಶ್ರೀ ಕೃಷ್ಣನ ಮಧುರ, ಬಾಲಲೀಲೆಗಳ ಆನಂದವನ್ನು ಅನುಭವಿಸಿದಳು. ದೇವಕಿಯಾದರೋ ಈ ಸುಖದಿಂದ ವಂಚಿತಳಾಗಿಯೇ ಇದ್ದಳು.



# ಸಂಸ್ಕಾರ ಸಮನ್ವಿತ ಜೀವನವೃತ್ತಿ

(ಕಳೆದ ಸಂಚಿಕೆಯಿಂದ ಮುಂದುವರಿಯುವುದು)

ಆರ್.ಎನ್.ಎನ್. ಮೂರ್ತಿ

ಕ್ಷಮಾ ಸತ್ಯಂ ದಯಾ ದಾನಂ ಶೌಚಮಂದ್ರಿಯನಿಗ್ರಹಃ।
ದೇವಪೂಜಾಗ್ರಿಹರಣಂ ಸಂತೋಷೋಸ್ತೇಯಮೇವ ಚ ॥
ಸರ್ವವ್ರತೇಶ್ವಯಂ ಧರ್ಮಃ ಸಾಮಾನ್ಯೋ ದಶಧಾಸ್ಮೃತಃ ॥

ಎಲ್ಲ ಪಾಪಗಳಿಂದಲೂ ಬಿಡುಗಡೆಹೊಂದಿ, ಎಲ್ಲ ರೀತಿಯ ಭೋಗಗಳನ್ನು ತ್ಯಜಿಸಿ, ಸದ್ಗುಣಗಳೊಂದಿಗೆ ವಾಸಿಸುವುದೇ ಉಪವಾಸ ಎನ್ನುತ್ತಾರೆ. ಉಪವಾಸ ಮಾಡುವ ವ್ರತವು ಸ್ನಾನ ಮುಂತಾದ ಕ್ರಿಯೆಯಿಂದ ಶುದ್ಧವಾಗಿ ದೇವರು, ಗುರು, ಬ್ರಾಹ್ಮಣ, ಸಾಧು ಮತ್ತು ಗೋ ಪೂಜೆ, ಸತ್ಸಂಗ ಸಹವಾಸ, ಭಗವದ್ಕಥಾ ಶ್ರವಣ ಹಾಗೂ ದಾನ - ಪುಣ್ಯ ಮುಂತಾದ ಕಾರ್ಯಗಳನ್ನು ಮಾಡುವುದು ಅವಶ್ಯ. ಜಲ, ಫಲ,ಗೆಡ್ಡೆ ಗೆಣಸು, ಮೊಸರು, ತುಪ್ಪ, ಬ್ರಾಹ್ಮಣನ ಇಚ್ಛೆ,ಔಷಧಿ ಮತ್ತು ಗುರುಗಳ ಮಾತು (ಪೂಜ್ಯಯೋಗ್ಯರ)ಈ ಎಂಟು ವಿಷಯಗಳಿಂದ ವ್ರತ ಕೆಡುವುದಿಲ್ಲ.ಹೋಮಾವಶಿಷ್ಟವಾದ ಕೀರು, ಭಿಕ್ಷಾನ್ನ, ಹುರಿದ ಕಡಲೆಹಿಟ್ಟು, ಕಣ (ತೃಣ ಪುಷ್ಪ) ಜೋಳ, ಶಾಕ, ಹಸುವಿನ ಹಾಲು, ಮೊಸರು, ತುಪ್ಪ, ಗೆಡ್ಡೆಗೆಣಸು, ಮಾವು, ದಾಳಿಂಬೆ,ಕಿತ್ತಲೆ ಮತ್ತು ಬಾಳೆಹಣ್ಣು ಮುಂತಾದವು ತಿನ್ನ ಬಹುದಾದ ಹವಿಷ್ಯಗಳು, ವ್ರತಿಯಾದವನು ತಾಮಸ ಪದಾರ್ಥಗಳ ಸೇವನೆ ಮಾಡಬಾರದು.ಅಲ್ಲದೆ ಅಲಂ ಕಾರ ಮತ್ತು ಶೃಂಗಾರ ಸಾಧನೆಗಳಿಂದ ದೂರ ಉಳಿಯ ಬೇಕು.ಪದೇ ಪದೇ ನೀರು ಕುಡಿಯುವುದು, ಹಗಲು ನಿದ್ದೆ ಮಾಡುವುದು ಹಾಗೂ ಮೈಥುನಾದಿ ಸಹ ವಾಸಗಳಿಂದ ವ್ರತಕೆಡುತ್ತದೆ.ಅಂದರೆ ಪವಿತ್ರರಾಗಿದ್ದು ತಮ್ಮ ಸಂಕಲ್ಪಿತ ವ್ರತದ ಅನುಷ್ಠಾನ ಮಾಡುವುದೇ ಪರಮ ಕಲ್ಯಾಣವು.

ಯಥಾವಿಧಿ ವ್ರತ ಮಾಡಿ ಪೂರ್ಣಗೊಂಡ ಮೇಲೆ ಉದ್ಯಾಪನ ಮಾಡಬೇಕು. ವ್ರತಿಯಾದವನು ಒಂದು ವಿಷಯವನ್ನು ಸದಾ ಗಮನದಲ್ಲಿಡಬೇಕುಃ ವ್ರತಾರಂಭವಾದ ಮೇಲೆ ಕೋಪ, ಲೋಭ, ಮೋಹ ಅಥವಾ ಆಲಸ್ಯ ಇತ್ಯಾದಿ ಕಾರಣಗಳಿಂದ ಮಧ್ಯೆ ಬಿಟ್ಟರೆ ಅವನು ಮೂರುದಿನಗಳವರೆಗೆ ಆಹಾರ ಬಿಟ್ಟು ಪುನಃ ವ್ರತವನ್ನು ಪ್ರಾರಂಭಿಸಬೇಕು.

ಕ್ರೋಧಾತ್ರಮಾಡಾಲ್ಲೋಭಾದ್ವಾ ವ್ರತಭಂಗೋಭವೇದ್ಯದಿ।
ದಿನತ್ರಯಂ ನ ಭುಂಜೀತ ಶಿರಸೋ ಮುಂಡನ ಭವೇತ್॥

ವ್ರತ ಮತ್ತು ತೀರ್ಥಯಾತ್ರೆ ಹಾಗೂ ಶ್ರಾದ್ಧಗಳಲ್ಲಿ ಮತ್ತೊಬ್ಬರ ಆಹಾರ ಸೇವಿಸುವುದರಿಂದ,ಅದರ ಪುಣ್ಯ ಅವರಿಗೇ ಲಭಿಸುತ್ತದೆ. ಸಂಕಷ್ಟಕಾಲದಲ್ಲಿ ಅಥವಾ ಅಶಕ್ಯ ಸ್ಥಿತಿಯಲ್ಲಿ ವ್ರತಾದಿ ಧರ್ಮ ಕಾರ್ಯಗಳನ್ನು ಸ್ವತ- ಮಾಡಲಿಕ್ಕಾಗದಿದ್ದರೂ ಪತಿ,ಪತ್ನಿ, ಪುತ್ರ, ಪುರೋಹಿತ, ಸಹೋದರ ಅಥವಾ ಗೆಳೆಯರನ್ನು ಪ್ರತಿನಿಧಿ ರೂಪವಾಗಿ ನೇಮಿಸಿ ಮಾಡಬಹುದಾಗಿದೆ. ಸರಿಯಾದ ಯೋಗ್ಯ ಪ್ರತಿನಿಧಿ ದೊರಕದಿದ್ದಾಗ ಈ ಕೆಲಸವನ್ನು ಬ್ರಾಹ್ಮಣರ ಮೂಲಕವೂ ಸಹ ನೆರವೇರಿಸಬಹುದು. ಇಲ್ಲಿ ಪ್ರತಿಯೊಂದು ತಿಂಗಳು ಮಾಡಬಹುದಾದ ಪ್ರಮುಖ ವ್ರತಗಳ ಒಂದು ಪಟ್ಟಿಯನ್ನು ಕೊಟ್ಟಿದೆ.ವ್ರತಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಅರಿಯಲು ವ್ರತಗ್ರಂಥಗಳು ಹಾಗೂ ಪುರಾಣಗಳು ಮತ್ತು ಪೂಜಾಪದ್ಧತಿಗಳನ್ನು ನೋಡಬೇಕಾಗುತ್ತದೆ.

**ಚೈತ್ರದಲ್ಲಿ:** ಸಂವತ್ಸರ ಪ್ರತಿಪದಾವ್ರತ, ಅರುಂಧತೀ ವ್ರತ,ಸೂರ್ಯಷಷ್ಠಿ, ರಾಮನವಮಿ,ಹನುಮಜ್ಜಯಂತಿ, ಅಶೂನ್ಯ ಶಯನ ವ್ರತ, ಭರ್ತೃದ್ವಾದಶಿ.

**ವೈಶಾಖ:** ಅಕ್ಷಯ ತೃತೀಯಾ, ನಿಂಬ ಸಪ್ತಮಿ, ಗಂಗಾ ಸಪ್ತಮಿ, ಪರಶುರಾಮಜಯಂತಿ.

**ಜ್ಯೇಷ್ಠ :** ವಟಸಾವಿತ್ರಿ, ನಿರ್ಜಲಾಏಕಾದಶೀ, ಗಂಗಾ ದಶಹರಾ,

**ಆಷಾಢ :** ಹರಿಶಯನೀ ಏಕಾದಶೀ, ಸ್ಕಂದಷಷ್ಠೀ, ಸೂರ್ಯ ಸಪ್ತಮಿ ವ್ಯಾಸಪೂರ್ಣಿಮೆ (ಗುರುಪೂರ್ಣಿಮೆ).

**ಶ್ರಾವಣ :** ನಾಗಪಂಚಮಿ, ದೂರ್ವಾಷ್ಟಮೀ, ಶ್ರಾವಣೀ ಪೂರ್ಣಿಮಾ.ಭಾದ್ರಪದಃ ಹರಿತಾಲಿನಿ,ಗಣೇಶಚತುರ್ಥೀ, ಋಷಿ ಪಂಚಮೀ, ಮುಕ್ತಾಭರಣ ಸಪ್ತಮೀ, ಶ್ರೀ ಕೃಷ್ಣಜನ್ಮಾಷ್ಟಮೀ, ವಾಮನದ್ವಾದಶೀ ಅನಂತಚತುರ್ದಶೀ, ಅಗಸ್ತ್ಯವ್ರತ.

**ಆಶ್ವೀಜ :** ಉಪಾಂಗಲಲಿತಾ, ಮಹಾಲಯ, ದೇವೀ ನವರಾತ್ರಿ, ವಿಜಯದಶಮೀ, ಶರತ್ಪೂರ್ಣಿಮೆ.

**ಕಾರ್ತೀಕ :** ಕರವಾಚೌಥ (ಕರ್ಕಚತುರ್ಥೀ) ಧನ ತ್ರಯೋದಶೀ, ನರಕಚತುರ್ದಶೀ, ದೀಪಾವಳಿ, ಗೋ ವರ್ಧನ (ಅನ್ನಕೂಟ) ಯಮದ್ವಿತೀಯ, ಭೀಷ್ಮ ಪಂಚಕ ವ್ರತ, ಹರಿ

ಬೋಧಿನೀ, ವೈಕುಂಠಚತುರ್ದಶೀ, ಕಾರ್ತಿಕ ಪೂರ್ಣಿಮೆ, ಮನೋರಥ ಪೂರ್ಣಿಮೆ.

**ಮಾರ್ಗಶೀರ್ಷ :** ಕಾಲಭೈರವಾಷ್ಟಮೀ, ದತ್ತ ಜಯಂತಿ.

**ಪುಷ್ಯ :** ಭದ್ರಾಷ್ಟಮಿ, ಮಕರಸಂಕ್ರಾಂತಿ

**ಮಾಘ :** ವಸಂತ ಪಂಚಮಿ, ಅಚಲಾಸಪ್ತಮೀ, ಭೀಷ್ಮಾಷ್ಟಮೀ.

**ಫಾಲ್ಗುಣ :** ಮಹಾಶಿವರಾತ್ರಿ, ಹೋಲಿ ಇತ್ಯಾದಿ.

ಈ ಎಲ್ಲ ವ್ರತೋಪಾಸನೆಗಳಲ್ಲಿ ಮನುಷ್ಯ ಸಾತ್ವಿಕತೆಯನ್ನು ಅನುಸರಿಸಿ,ತನ್ನ ತ್ರಿವಿಧ ತಾಪಗಳನ್ನು ದೂರಗೊಳಿಸಲು ಅಂತಃಕರಣ ಶುದ್ಧಿಗಾಗಿ,ವಿಶೇಷವಾಗಿ ಭಗವಂತನ ಪ್ರೀತಿಗೆ ಇವುಗಳನ್ನು ಅನುಷ್ಠಾನ ಮಾಡಬೇಕು. ಇವುಗಳನ್ನು ಅನುಸರಿಸುವುದರಿಂದ ಪ್ರಧಾನವಾಗಿ ಮಂಗಳವಾಗುತ್ತದೆ. ಬುದ್ಧಿ ನಿರ್ಮಲಗೊಳ್ಳುತ್ತದೆ. ವೈಚಾರಿಕತೆಯಲ್ಲಿ ಸತ್ವಗುಣದ ಉದ್ರೇಕವಾಗಿ ವಿವೇಕ ಶಕ್ತಿ ಪ್ರಾಪ್ತವಾಗುತ್ತದೆ. ಸತ್ ಅಸತ್‌ನ ನಿರ್ಣಯ ಸ್ವತಃ ಉಂಟಾಗುವುದಲ್ಲದೆ, ಕೊನೆಗೆ ಸನ್ಮಾರ್ಗದಲ್ಲಿ ಪ್ರವೃತ್ತರಾಗಿ ಕರ್ತಾ ಇಲ್ಲವೇ ಅನುಷ್ಠಾತಾ ಲೌಕಿಕ ಹಾಗೂ ಪಾರಲೌಕಿಕ ಸುಖವನ್ನು ಹೊಂದುತ್ತಾನೆ.ಹಾಗಾಗಿ ವ್ರತೋಪಾಸನೆಯ ಮಹಿಮೆಯನ್ನು ಹೇಳುತ್ತಾ-ವ್ರತೋಪಾಸನೆ ಅನುಷ್ಠಾನದಿಂದ ಪಾಪಶಮನವಾಗುವುದಲ್ಲದೆ ಇಷ್ಟಾರ್ಥ ಫಲಸಿದ್ಧಿಸುತ್ತದೆ ಎಂದು ಕೊಂಡಾಡಿದ್ದಾನೆ. ಇದರಿಂದ ದೇವತೆಗಳ ಆಶ್ರಯವೂ ಸಿಕ್ಕಂತಾಗುತ್ತದೆ. ವ್ರತ ವೀರದೇವತೆ ಅತ್ಯಂತ ಸಂತುಷ್ಟವಾಗಿ ಅಭೀಷ್ಟ ಮನೋರಥಗಳನ್ನು ಕೊಡುವುದರಲ್ಲಿ ಯಾವುದೇ ಅನುಮಾನವಿಲ್ಲ.ಯಾವನೇ ಆಗಲಿ ನಿರ್ದಿಷ್ಟ ವಿಧಾನದಿಂದ ವ್ರತೋಪಾಸನೆಯನ್ನು ಅನುಷ್ಠಾನಗೊಳಿಸುತ್ತಾನೋ ಆತ ಜಗತ್ತಿನ ಎಲ್ಲ ದುಃಖಗಳಿಂದ ಬಿಡುಗಡೆಯನ್ನು ಹೊಂದುತ್ತಾನೆ. ಸ್ವರ್ಗ ಲೋಕದಲ್ಲಿ ಐಶ್ವರ್ಯವನ್ನು ಭೋಗಿಸುತ್ತಾ (ದೇವತೆಗಳಿಂದ) ದೇವತೆಗಳ ಮೂಲಕ ಗೌರವ ಹೊಂದುತ್ತಾನೆ.

- ಯಸ್ಯ ರಾಷ್ಟ್ರೇ ಪುರೈ ಚೈವ ಭಗವಾನ್‌ಯಜ್ಞ ಪುರುಷ:।
ಇಜ್ಯತೇ ಸ್ವೇನ ಧರ್ಮೇಣ ಜನೈರ್ವರ್ಣಾಶ್ರಮಾನ್ವಿತೈಃ,
ತಸ್ಯ ರಾಜ್ಞೋ ಮಹಾಭಾಗ ಭಗವಾನ್ ಯಜ್ಞ ಪುರುಷ:
ಪರಿತುಷ್ಯತಿ ವಿಶ್ವಾತ್ಮಾ ತಿಷ್ಠತೋ ನಿಜಶಾಸನೇ ॥

ಯಾರ ರಾಜ್ಯ ಅಥವಾ ನಗರದಲ್ಲಿ ವರ್ಣಾಶ್ರಮ ಧರ್ಮಗಳನ್ನು ಪಾಲಿಸುವ ಮನುಷ್ಯರು ಸ್ವಧರ್ಮಪಾಲನೆಯ ಮೂಲಕ ಭಗವಾನ್ ಯಜ್ಞ ಪುರುಷನ ಆರಾಧನೆ ಮಾಡುತ್ತಾರೋ .ಹೇ ಮಹಾಭಾಗ। ಭಗವಂತನು ತನ್ನ ವೇದ ಶಾಸ್ತ್ರ ರೂಪದ ಆಜ್ಞೆಯನ್ನು ಪಾಲಿಸುವುವಂತಹ ರಾಜರ ಬಗ್ಗೆ ಸಂತುಷ್ಟನಾಗಿರುತ್ತಾನೆ. ಇದಕ್ಕೆ ಕಾರಣ, ಅವರೇ ಇಡೀ ವಿಶ್ವದ ಆತ್ಮ ಹಾಗೂ ಇಡೀ ಪ್ರಾಣಿ ಸಮೂಹಕ್ಕೆ ರಕ್ಷಕರಾಗಿರುತ್ತಾರೆ.ಪದ್ಮ ಪುರಾಣದ ಸೃಷ್ಟಿ ಖಂಡದಲ್ಲಿ ಸ್ಪಷ್ಟರಾಗಿರುವುದು.'ಯಜ್ಞದಿಂದ ದೇವತೆಗಳ ಆಪ್ಯಾಯನ ಇಲ್ಲವೇ ಪೋಷಣೆಯಾಗುತ್ತದೆ.ಯಜ್ಞದ ಮೂಲಕ ಸೃಷ್ಟಿಯಾಗುವುದರಿಂದ ಮನುಷ್ಯರ ಪಾಲನೆಯಾಗುತ್ತದೆ. ಈ ರೀತಿ ಜಗತ್ತನ್ನು ರಕ್ಷಿಸುವುದರಿಂದಲೇ ಯಜ್ಞ ಕಲ್ಯಾಣಕಾರಕ ಎಂದು ಹೇಳಲ್ಪಟ್ಟಿದೆ. :-

యజ్ఞోనాప్యాయితా దేవా వృష్ట్యయుత్సర్గేణ మానవాః।
ఆప్యాయనం వై కుర్వంతి యజ్ఞాః కల్యాణ హేతవః

ಎಲ್ಲ ಪುರಾಣಗಳು ಯಜ್ಞಗಳನ್ನು ಯಥಾ ಸಾಧ್ಯವಾದಷ್ಟೂ ಸಂಪಾದಿಸುವ ಸಲುವಾಗಿ (ಗಳಿಸುವಂತಹದು) ಹೆಚ್ಚು ಸಾಮರ್ಥ್ಯನೀಡುತ್ತವೆ. ಯಜ್ಞಗಳ ಫಲ ಕೇವಲ ಇಹ ಲೌಕಿಕವಷ್ಟೇ ಅಲ್ಲ, ಅವು ಪಾರಲೌಕಿಕವೂ ಸಹ ಹೌದು. ಇವುಗಳ ಅನುಷ್ಠಾನದಿಂದ ದೇವತೆಗಳು ಋಷಿಗಳು, ದೈತ್ಯರು, ನಾಗರು, ಕಿನ್ನರರು, ಮಾನವರು ಹಾಗೂ ಎಲ್ಲರಿಗೂ ತಮ್ಮ ಅಭೀಷ್ಟ ಕಾಮನೆಗಳು ಪೂರೈಸಿರುವುದಲ್ಲದೆ ಪ್ರಸ್ತುತ ಅವುಗಳ ಸರ್ವಾಂಗೀಣ ಅಭ್ಯುದಯವೂ ಸಹ ಆಗಿದೆ. ಹಾಗಾಗಿ ಇವುಗಳನ್ನು ಗಳಿಸುವುದು ಅವಶ್ಯಕವೇ ಸರಿ.

ಶಾಸ್ತ್ರಗಳಲ್ಲಿ ಮನುಷ್ಯರ ಒಳಿತಿಗಾಗಿ ಯಜ್ಞ, ತಪಸ್ಸು, ಪುಣ್ಯ ಕ್ಷೇತ್ರದರ್ಶನ,ಪುಣ್ಯ ತೀರ್ಥಸೇವನೆ, ದಾನಧರ್ಮ ಇತ್ಯಾದಿ ಅನೇಕ ಸಾಧನೆಗಳನ್ನು ತಿಳಿಸಿದೆ. ಅವುಗಳಲ್ಲಿ ವ್ರತೋಪಾಸನೆಯೂ ಸಹ ಒಂದು. ಇದರ ಮಹಿಮೆ ಅಪಾರ, ಅಂತಃಕರಣ ಶುದ್ಧಿಗಾಗಿ ವ್ರತೋಪಾಸನೆ ಅವಶ್ಯಕ. ಇದರಿಂದ ಬುದ್ಧಿ,ವೈಚಾರಿಕತೆ ಮತ್ತು ಜ್ಞಾನತಂತು ಬೆಳವಣಿಗೆಯಾಗು ತ್ತದೆ. ಶರೀರದ ಅಂತಸ್ಥಳದಲ್ಲಿ ಭಗವಂತನ ಬಗ್ಗೆ ಭಕ್ತಿ, ಶ್ರದ್ಧೆ ಮತ್ತು ತಲ್ಲೀನತೆಯ ಸಂಚಾರವಾಗುತ್ತದೆ. ಪಾರಮಾರ್ಥಿಕ ಲಾಭದ ಜತೆಜತೆಗೇ ವ್ರತೋಪವಾಸದಿಂದ ಲೌಕಿಕ ಲಾಭವೇ ಉಂಟಾಗುತ್ತದೆ. ವ್ಯಾಪಾರ,ವ್ಯವಸಾಯ (ಕೃಷಿ) , ಕಲಾ ಕೌಶಲ್ಯ, ಶಾಸ್ತ್ರಾನುಸಂಧಾನ ಮತ್ತು ಉತ್ಸಾಹ ಪೂರ್ವಕ ವ್ಯವಹಾರ ಕೌಶಲ್ಯದ ಸಫಲ ಸಂಪಾದನೆಗಾಗಿ ಮನಸ್ಸು ನಿಗ್ರಹಗೊಂಡಿರುತ್ತದೆ. ಇದರಿಂದ ಸುಖಮಯವಾದ ದೀರ್ಘ ಜೀವನದ ಆರೋಗ್ಯಸಾಧನೆಯು ಸ್ವತಃ ಸಂಗ್ರಹವಾಗುತ್ತದೆ.

ರೋಗವು ಪಾಪ, ಇಂತಹ (ರೋಗ) ಪಾಪ ವ್ರತಗಳಿಂದ ದೂರವಾಗಿದ್ದರೂ ಕಾಯಕ, ವಾಚಕ, ಮಾನಸಿಕ ಮತ್ತು ಸಾಂಸಾರಿಕ ಪಾಪ, ಉಪಾಯ, ಮಹಾಪಾಪಾದಿಗಳು ಸಹ ವ್ರತೋಪಾಸದಿಂದ ದೂರವಿರುತ್ತವೆ. ಅವುಗಳನ್ನು ಬುಡಸಹಿತ ನಾಶಮಾಡುವ ಪ್ರತ್ಯಕ್ಷ ಪ್ರಮಾಣವೆಂದರೆ - ವ್ರತಾರಂಭಕ್ಕೆ ಮುನ್ನ ಪಾಪದಿಂದ ಕೂಡಿದ ಜೀವಿಗಳ ಮುಖ ಹತಾಶೆಯಿಂದ ಕೂಡಿರುತ್ತದೆ. ವ್ರತಮುಗಿಯುತ್ತಲೇ ಸೂರ್ಯೋದಯದ ಕಮಲದಂತೆ (ತಾವರೆ) ಅರಳಿರುತ್ತದೆ. ಪುಣ್ಯಪ್ರಾಪ್ತಿಗೆ ಯಾವುದೇ ಫಲ ಘಳಿಗೆಯಲ್ಲಿ ಉಪವಾಸ ಮಾಡುವ ಅಥವಾ ಉಪವಾಸ ಕರ್ಮಾನುಷ್ಠಾನ ಮೂಲಕ ಪುಣ್ಯ ಸಂಪಾದಿಸುವ, ಸಂಗ್ರಹಿಸುವ ಸಂಕಲ್ಪವನ್ನು ವ್ರತವೆನ್ನುತ್ತಾರೆ. ಯಮ ನಿಯಮ ಮತ್ತು ಶಮದಮ ಇತ್ಯಾದಿಗಳ ಪಾಲನೆ, ಭೋಜನ ಮುಂತಾದವುಗಳ ಪರಿತ್ಯಾಗ ಅಥವಾ ನೀರು ಹಣ್ಣುಗಳಿಂದ ಇರುವುದು ಹಾಗೂ ಸಮಸ್ತ ಭೋಗಗಳನ್ನೆ ತ್ಯಜಿಸುವುದು. ಇವೆಲ್ಲವೂ ವ್ರತದೊಳಗೆ ಸೇರಿಕೊಂಡಿವೆ. ಶಾಸ್ತ್ರೋಕ್ತ ನಿಯಮವೇ ವ್ರತವೆನಿಸಿಕೊಳ್ಳುತ್ತದೆ. ವ್ರತಿಯಾದವನು ಶಾರೀರಿಕ ಸಂತಾಪವನ್ನು ಸಹಿಸಿಕೊಳ್ಳ ಬೇಕಾಗುತ್ತದೆ. ಹಾಗಾಗಿ ಇದನ್ನು ತಪಸ್ಸೆಂದೂ ಕರೆಯುತ್ತಾರೆ. ಇಂದ್ರೀಯ ನಿಗ್ರಹವನ್ನು ದಮ ಎಂದೂ ಮತ್ತು ಮನೋನಿಗ್ರಹವನ್ನು ಶಮವೆಂದೂ ಹೇಳುತ್ತಾರೆ. ವ್ರತದಲ್ಲಿ ಇಂದ್ರೀಯಗಳ ನಿಯಮನ (ಸಂಯಮ) ಮಾಡಬೇಕಾಗುತ್ತದೆ. ಆದ್ದರಿಂದ ಇದನ್ನು ನಿಯಮ ಎಂತಲೂ ಕರೆಯುತ್ತಾರೆ. ಕ್ಷಮೆ ಸತ್ಯ,ದಯೆ, ದಾನ, ಶೌಚ, ಇಂದ್ರೀಯ ಸಂಯಮ, ದೇವರ ಪೂಜೆ, ಹವನ, ಸಂತೋಷ ಮತ್ತು ಕಳ್ಳತನದ ಕೊರತೆ (ಮಾಡದಿರುವುದು) ಈ ಹತ್ತು ನಿಯಮಗಳ ಪಾಲನೆ ಸಾಮಾನ್ಯವಾಗಿ ಎಲ್ಲ ವ್ರತಗಳಲ್ಲಿಯೂ ಪ್ರಧಾನ ಅವಶ್ಯಕವೆಂದು ಹೇಳಲ್ಪಟ್ಟಿದೆ.

-(ಸಶೇಷ)


## ಸ್ವಾಮಿಯ ಆಲಯದಲ್ಲಿ ಸೆಲ್‌ಫೋನ್ ನಿಷೇಧ

ತಿರುಮಲೆ ಸ್ವಾಮಿಯವರ ಆಲಯದಲ್ಲಿ ಸೆಲ್‌ಫೋನ್,ಕೆಮರಾ, ಇತರ ಎಲೆಕ್ಟ್ರಾನಿಕ್ ವಸ್ತುಗಳನ್ನು ನಿಷೇಧಿಸಲಾಗಿದೆ. ನಿಷೇಧಿಸಿದ ವಸ್ತುಗಳೊಂದಿಗೆ ಭಕ್ತರು ಕಂಡು ಬಂದರೆ ಅಂತಹ ವ್ಯಕ್ತಿಯರನ್ನು ಆಲಯದೊಳಗೆ ಅನುಮತಿಸಲಾಗುವುದಿಲ್ಲ. ಆದ್ದರಿಂದ ಭಕ್ತರು ತಿ.ತಿ.ದೇ.ಯೊಂದಿಗೆ ಸಹಕರಿಸಬೇಕಾಗಿ ಕೋರಲಾಗಿದೆ.

- ಕಾರ್ಯನಿರ್ವಹಣಾಧಿಕಾರಿ

# ಮುಂಡಕೋಪನಿಷತ್

- ಶ್ರೀಮತಿ. ಎ. ಗೀತ ವೀರರಾಘವನ್

ಈ ಉಪನಿಷತ್ತು ಅಥರ್ವಣ ವೇದಕ್ಕೆ ಸೇರಿದೆ. ಇದರಲ್ಲಿ ಮೂರು ಮುಂಡಕಗಳಿವೆ. ಆರು ಖಂಡಗಳಿವೆ. ಅರವತ್ನಾಲ್ಕುಮಂತ್ರಗಳಿವೆ. ಇದು ಸಂಪೂರ್ಣ ಪದ್ಯಮಯವಾಗಿದೆ. ಮುಂಡಕ ಎನ್ನುವ ಪದ ಸನ್ಯಾಸಿಗಳನ್ನು ಸೂಚಿಸುತ್ತದೆ. ಸನ್ಯಾಸಿಗಳು ಅವಿದ್ಯೆಯನ್ನು ಕತ್ತರಿಸಿ ಹಾಕಿರುವುದರಿಂದ ಮುಂಡಕ ಶಿರಸ್ಕಾರದ ಸನ್ಯಾಸಗಳಿಗೆ ವಿಶೇಷವಾಗಿ ಈ ಉಪನಿಷತ್ತು ಅನ್ವಯಿಸುತ್ತದೆ. ಈ ಉಪನಿಷತ್ತು ಲಲಿತವಾದ ಛಂದಸ್ಸಿನಲ್ಲಿ ರಮಣೀಯವಾದ ಶೈಲಿಯಲ್ಲಿ ರಚಿತವಾಗಿದೆ. ಈ ಉಪನಿಷತ್ತಿನಲ್ಲಿ ಹೇಳಿರುವ ಬ್ರಹ್ಮವಿದ್ಯೆಯು ಎಲ್ಲಾ ವೇದಗಳವರಿಗೂ ಯಾವ ವ್ಯತ್ಯಾಸವೂ ಇಲ್ಲದೆ ಅನ್ವಯಿಸುತ್ತದೆ.ಇದರಲ್ಲಿ ಬರುವ ಭಾವಗಳು ಉನ್ನತವಾಗಿವೆ. ಈ ಬ್ರಹ್ಮವಿದ್ಯೆಯನ್ನು ಆಚಾರ್ಯ ರಾದ ಅಂಗೀರಸರು ಮಹಾಗೃಹಸ್ಥರಾದ ಶೌನಕರಿಗೆ ಉಪದೇಶಿಸಿರುತ್ತಾರೆ.

ಮೊದಲ ಮುಂಡಕದ ಮೊದಲ ಖಂಡದಲ್ಲಿ ಎಲ್ಲಾ ವಿದ್ಯೆಗಳನ್ನೂ ಮುಖ್ಯವಾಗಿ ಎರಡು ಭಾಗವಾಗಿ ವಿಂಗಡಿಸಿರುತ್ತಾರೆ. ಅವು "ಪರಾ ವಿದ್ಯೆ" ಮತ್ತು " ಅಪರಾ ವಿದ್ಯೆ". ಎಂದರೆ ಬ್ರಹ್ಮಜ್ಞಾನ, 'ಅಪರಾ ವಿದ್ಯೆ' ಎಂದರೆ 'ಲೌಕಿಕಜ್ಞಾನ'. ಋಗ್ವೇದ, ಯಜುರ್ವೇದಾದಿಗಳಿಗೆ ಅಪರಾ ವಿದ್ಯೆಯ ಸ್ಥಾನವನ್ನು ಉಪನಿಷತ್ತು ನೀಡುತ್ತಿರುವುದು ಈ ಉಪನಿಷತ್ತಿನಲ್ಲಿಯೇ ಮೊದಲು. ಎಷ್ಟೇ ವ್ಯಾಪಕವಾಗಿದ್ದರೂ ಅಪರಾ ವಿದ್ಯೆ ಅಪೂರ್ಣ. ಅದರ ಆಧಾರದ ಮೇಲೆ ಪರಾ ವಿದ್ಯೆಯನ್ನು ಹೊಂದಬೇಕು. ಪರಾ ವಿದ್ಯೆ ಎಲ್ಲದಕ್ಕೂ ಆಧಾರವಾದ "ಪರಮಾತ್ಮ ತತ್ವ"ವನ್ನು ತೋರಿಸಿಕೊಡುತ್ತದೆ.ಈ "ಬ್ರಹ್ಮ ಪ್ರಾಪ್ತಿ"ಯನ್ನು ಹೊಂದಬೇಕಾದರೆ ಆಚಾರ್ಯರನ್ನು ಹೊಂದಿರಬೇಕು,

ಎರಡನೇ ಮುಂಡಕದ ಮೊದಲ ಖಂಡದಲ್ಲಿ ಬ್ರಹ್ಮ ಸ್ವರೂಪದ ನಿರೂಪಣೆ ಇದೆ. "ಬ್ರಹ್ಮವಸ್ತು"ವು ಎಲ್ಲಾ ಇತರ ವಸ್ತುವಿನಲ್ಲಿ ಅಂತರಾತ್ಮ (ಅಂತರ್ಯಾಮಿ) ಆಗಿದೆ. ಈ 'ಬ್ರಹ್ಮವಸ್ತು' ವಿನಿಂದ ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳು (ನಾಶಗಳು) ನಡೆಯುತ್ತದೆ."ಪುರುಷ ಏವೇದಂ ವಿಶ್ವಂ" ಎಂದು ಇಲ್ಲಿ ಪ್ರತಿಪಾದಿಸಿದೆ.

ಎರಡನೆಯ ಖಂಡದಲ್ಲಿ ಯೋಗವನ್ನು ಪ್ರತಿಪಾದಿಸಿದೆ. ಈ ಉಪನಿಷತ್ತಿನಲ್ಲಿ ಪ್ರಣವದ ಮೂಲಕ ಮಾಡುವ ಧ್ಯಾನವನ್ನು ಬಹಳ ಮನೋಹರವಾಗಿ ನಿರೂಪಿಸಿದೆ. ಈ ಉಪನಿಷತ್ತಿನಲ್ಲಿ ಪ್ರತಿಪಾದಿಸಿರುವ ಧನುಸ್ಸೇ ಪ್ರಣವ.ಉಪಾಸನೆಯಿಂದ ಹರಿತವಾದ ಬಾಣವನ್ನು ಜೀವಾತ್ಮನೆಂದು ನಿರೂಪಿಸಿದೆ. ಬ್ರಹ್ಮವೇ ಲಕ್ಷ್ಯ. ಇಂದ್ರಿಯಗಳನ್ನು ವಿಷಯಗಳಿಗೆ ಪ್ರಮತ್ತವಾಗಿಸದೆ ಲಕ್ಷ್ಯವನ್ನು ಹೊಡೆದು ಅದರಲ್ಲಿ ತನ್ಮಯವಾಗಬೇಕು.

ಮೂರನೆಯ ಮುಂಡಕದಲ್ಲಿ ಮೊದಲನೆಯ ಖಂಡದಲ್ಲಿ ಜೀವಾತ್ಮ-ಪರಮಾತ್ಮರ ನಿರೂಪಣೆ ಇದೆ. ಇಬ್ಬರೂ ಒಂದೇ ವೃಕ್ಷದಲ್ಲಿ ಇದ್ದಾರೆ. ಎರಡು ಪಕ್ಷಿಗಳು ಒಂದೇ ವೃಕ್ಷವನ್ನಾಶ್ರಯಿಸಿವೆ. ಒಂದು ಅದರ ಫಲವನ್ನು ಸ್ವಾದುವಾಗಿದೆಯೆಂದು ಆನಂದದಿಂದ ಭುಂಜಿಸುತ್ತದೆ (ತಿನ್ನುತ್ತದೆ). ಇನ್ನೊಂದು ಯಾವ ಫಲವನ್ನೂ ಭುಂಜಿಸದೆ (ತಿನ್ನದೆ) ಪ್ರಕಾಶಿಸುತ್ತದೆ. ಇಲ್ಲಿ ಬಂದಿರುವ ಜೀವಾತ್ಮ - ಪರಮಾತ್ಮರ ಉಲ್ಲೇಖವನ್ನು ಬಗೆ ಬಗೆಯಾಗಿ ವರ್ಣಿಸಲಾಗಿದೆ.

ಮೂರನೆಯ ಮುಂಡಕದ ಎರಡನೆಯ ಖಂಡದಲ್ಲಿ ಕಾಮವನ್ನು ಜಯಿಸಿದವನು ಪರಮಾತ್ಮ ಪ್ರಾಪ್ತಿಗೆ ಅರ್ಹನಾಗುವನೆಂದು ಹೇಳಿದೆ. ಈ ಖಂಡದಲ್ಲಿ ಮುಕ್ತನ ಸ್ವರೂಪವನ್ನು "ಜ್ಞಾನಿಯು ಹೊಂದುತ್ತಾನೆ" ಎಂದು ತಿಳಿಸಿದೆ.

ಅಪರಾ ವಿದ್ಯೆ ಎಂಬುದು ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದ, ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಛಂದಸ್ಸು, ಜ್ಯೋತಿಷ್ಯ. ಯಾವುದರಿಂದ ಈ ಅಕ್ಷರ ಬ್ರಹ್ಮವು ಪಡೆಯಲ್ಪಡುತ್ತದೆಯೋ ಅದು ಪರಾ ವಿದ್ಯೆ.

ಯಾವ ಈ ಅಕ್ಷರವು ಅದೃಶ್ಯವೋ, ಕಣ್ಣು ಕಿವಿಗಳನ್ನು ಹೊಂದಿಲ್ಲವೋ ಪಾಣಿ ಪಾದಗಳಿಲ್ಲದ ಅದು ನಿತ್ಯವೂ ಸರ್ವಗತವೂ ಸುಸೂಕ್ಷ್ಮವೂ ಅವ್ಯಯವೂ ಅದುದು. ಬುದ್ಧಿಯುಕ್ತರಾದವರು ಈ ಸರ್ವಕಾರಣನನ್ನು ಚೆನ್ನಾಗಿ ಕಾಣುತ್ತಾರೆ. ಜೇಡವು ಹೇಗೆ ಎಳೆಗಳನ್ನು ತನ್ನೊಳಗಿಂದಲೇ ಎಳೆದು ಹರಡುತ್ತದೆಯೋ ಮತ್ತು ಹೇಗೆ ಅವುಗಳನ್ನು ತನ್ನೊಳಕ್ಕೆ ಎಳೆದು ಕೊಳ್ಳುತ್ತದೆಯೋ,ಹೇಗೆ ಬಳ್ಳಿಗಳು ಗಿಡಗಳು ಭೂಮಿ

ಯಲ್ಲಿ ಉಂಟಾಗುತ್ತವೆಯೋ, ಹೇಗೆ ತಲೆ ಕೂದಲು ಮತ್ತು ಮೈಮೇಲಿನ ಕೂದಲು ಸಜೀವನಾದ ಪುರುಷನಿಂದ ಉಂಟಾಗುವವೋ ಹಾಗೆ ವಿಶ್ವವು ಈ ಅಕ್ಷರ ಪುರುಷನಿಂದ ಉಂಟಾಗಿದೆ.

ತಾನು ಮಾಡಿದ ಕರ್ಮಗಳಿಂದ ಪಡೆದುಕೊಂಡ ಲೋಕಗಳನ್ನು ಅನಿತ್ಯ, ಅಸ್ಥಿರವೆಂದು ಪರೀಕ್ಷಿಸಿ ತಿಳಿದುಕೊಂಡ ಬ್ರಾಹ್ಮಣನು, ಅಕೃತ್ಯನಾದ ಪರಮಾತ್ಮನು ಮಾಡಿದ ಕರ್ಮದಿಂದ ಲಭ್ಯವಾಗಿರುವುದಿಲ್ಲವೆಂದು ತಿಳಿದು ಶ್ರೋತ್ರಿಯನೂ, ಬ್ರಹ್ಮನಿಷ್ಠನೂ ಆದ ಆಚಾರ್ಯನ ಬಳಿಗೆ ಹೋಗಬೇಕು.

ಯಾರಲ್ಲಿ ದ್ಯುಲೋಕ, ಪೃಥವೀಲೋಕ, ಅಂತರಿಕ್ಷ, ಎಲ್ಲಾ ಪ್ರಾಣಗಳೂ ಮತ್ತು ಇಂದ್ರಿಯಗಳೊಡನೆ ಕೂಡಿದ ಮನಸ್ಸು ಇವು ಓತಪ್ರೋತವಾಗಿದೆಯೋ ಅಂಥ ಪರಮಾತ್ಮನೊಬ್ಬನನ್ನೇ ತಿಳಿಯಬೇಕು. ಇತರ ಮಾತುಗಳನ್ನು ಬಿಟ್ಟುಬಿಡಬೇಕು. ಅವನು ಅಮೃತತತ್ವಕ್ಕೆ ಸೇತುವಾಗಿದ್ದಾನೆ.

ಪರಾ ಮತ್ತು ಅಪರಾ ತತ್ವಗಳಲ್ಲಿ ಅಂತರ್ಯಾಮಿಯಾಗಿರುವ ಆ ಪರಮಾತ್ಮನನ್ನು ಸಾಕ್ಷಾತ್ಕರಿಸಿದಾಗ ಹೃದಯದ ಕಾಮ ಕ್ರೋದಾಧಿ ಗಂಟುಗಳೆಲ್ಲಾ ಬಿಚ್ಚಿ ಹೋಗುತ್ತವೆ. ಸಂಶಯಗಳೆಲ್ಲಾ ಜಾರಿ ಹೋಗುತ್ತವೆ. ಆತನ ಕರ್ಮಗಳೆಲ್ಲಾ ನಾಶವಾಗುತ್ತವೆ.

ಸಮಾನವಾದ ಗುಣಗಳನ್ನುಳ್ಳವೂ ಪರಸ್ಪರ ಸ್ನೇಹವನ್ನುಳ್ಳವೂ ಆದ ಎರಡು ಪಕ್ಷಿಗಳು (ಜೀವ - ಪರಮಾತ್ಮರು) ಒಂದೇ ವೃಕ್ಷದಲ್ಲಿ ಅಂಟಿದಂತೆ ಇದೆ. ಅದರಲ್ಲಿ ಒಂದು ಪಿಪ್ಪಲ ಎಂದು ಹೇಳುವ ಕರ್ಮ ಫಲವನ್ನು ಸ್ವಾದುವಾಗಿದೆ ಎಂದು ತಿನ್ನುತ್ತದೆ. ಮತ್ತೊಂದು ಅದನ್ನು ತಿನ್ನದೆ ಪ್ರಕಾಶಿಸುತ್ತದೆ.

ಶರೀರದಲ್ಲಿ ಅಂತರ್ಯಾಮಿಯಾಗಿರುವವನೂ, ಜೋತಿರ್ಮಯನೂ ಶುಭನೂ ಆದ ಪರಮಾತ್ಮನು ಸತ್ಯ, ತಪಸ್ಸು,ಸಮ್ಯಗ್ ಜ್ಞಾನ ಮತ್ತು ನಿತ್ಯ ಬ್ರಹ್ಮಚರ್ಯ ಇವುಗಳಿಂದಲೇ ಪ್ರಾಪ್ತವಾಗುತ್ತಾನೆ. ದೋಷರಹಿತರಾದ ಯತಿಗಳು ಆ ಪರಮಾತ್ಮನನ್ನು ಕಾಣುತ್ತಾರೆ.

ನದಿಗಳೆಲ್ಲಾ ಹರಿದು ಬಂದು ಸಮುದ್ರವನ್ನು ಸೇರಿ ತಮ್ಮ ತಮ್ಮ ನಾಮ, ರೂಪಗಳನ್ನು ಕಳೆದುಕೊಂಡು ಗುರುತಿಸಲಾಗದಂತೆ ಸಮುದ್ರದಲ್ಲಿ ಐಕ್ಯವಾಗುತ್ತವೆ. ಅದೇ ರೀತಿಯಲ್ಲಿ ಬ್ರಹ್ಮ ಜ್ಞಾನಿಯು ತನ್ನ ನಾಮ, ರೂಪಗಳಿಂದ ಮುಕ್ತನಾಗಿ ಪರಾತ್ಪರನಾದ ದಿವ್ಯ ಪುರುಷನನ್ನು ಹೋಗಿ ಸೇರುತ್ತಾನೆ.

**ಉಪನಿಷತ್ತಿನಲ್ಲಿ ಪ್ರತಿಪಾದಿಸಿರುವ ಧನುಸ್ಸೇ ಪ್ರಣವ. ಉಪಾಸನೆಯಿಂದ ಹರಿತವಾದ ಬಾಣವನ್ನು ಜೀವಾತ್ಮನೆಂದು ನಿರೂಪಿಸಿದೆ. ಬ್ರಹ್ಮವೇ ಲಕ್ಷ್ಯ. ಇಂದ್ರಿಯಗಳನ್ನು ವಿಷಯಗಳಿಗೆ ಪ್ರಮತ್ತವಾಗಿಸದೆ ಲಕ್ಷ್ಯವನ್ನು ಹೊಡೆದು ಅದರಲ್ಲಿ ತನ್ಮಯವಾಗಬೇಕು.**

ಜ್ಞಾನಿಯಾದ ಆಚಾರ್ಯನು ಶಾಸ್ತ್ರವಿಧಿಗನುಸಾರವಾಗಿ ತನ್ನ ಬಳಿ ಉಪದೇಶಕ್ಕಾಗಿ ಬಂದ ಶಾಂತಚಿತ್ತನೂ ಶಮದಮಾದಿ ಸಾಧನಯುಕ್ತನೂ ಆದ ಶಿಷ್ಯನಿಗೆ ಈ ಬ್ರಹ್ಮವಿದ್ಯೆಯನ್ನು ತತ್ವ ವಿವೇಚನ ಪೂರ್ವವಾಗಿ ಉಪದೇಶಿಸಬೇಕು. ಅದರಿಂದ ಶಿಷ್ಯನು ನಿತ್ಯನೂ ಅಕ್ಷರ ಸ್ವರೂಪಿಯೂ ಆದ ಪರಮಪುರುಷನ್ನು ತಿಳಿಯುವಂತಾಗಬೇಕು.

ಆ ದಿವ್ಯವಾದ ಪೂರ್ಣ ಪುರುಷನು ಆಕಾರ ರಹಿತನಾಗಿ ಸಮಸ್ತ ಜಗತ್ತಿನ ಒಳಗೂ ಹೊರಗೂ ವ್ಯಾಪಿಸಿದ್ದು ಜನ್ಮಾದಿ ವಿಕಾರಗಳಿಲ್ಲದೆ ಸರ್ವಥಾ ವಿಶುದ್ಧನಾಗಿ ಪ್ರಕೃತಿ ಪುರುಷರಿಗಿಂತ ಉತ್ಕೃಷ್ಟನಾಗಿದ್ದಾನೆ.

ಈ ಪರಮ ಪುರುಷನಿಂದಲೇ ಸಮಸ್ತ ಸಮುದ್ರಗಳು, ಪರ್ವತಗಳು ನದಿಗಳು ಉದ್ಭವಗೊಂಡಿವೆ.ಎಲ್ಲಾ ಔಷಧಿ ವನಸ್ಪತಿಗಳೂ ರಸಗಳೂ ಇವನಿಂದಲೇ ಉತ್ಪನ್ನವಾಗಿವೆ.

ಅಮೃತ ಸ್ವರೂಪವಾದ ಈ ಪರಬ್ರಹ್ಮನೇ ಈ ಸಂಪೂರ್ಣ ಜಗತ್ತು, ಈ ಬ್ರಹ್ಮವು ಸರ್ವ ಶ್ರೇಷ್ಠವಾದದ್ದು.

ಆ ಪರಮಾತ್ಮನು ಸತ್ಯ ಸ್ವರೂಪಿಯಾಗಿರುವುದರಿಂದ ಸತ್ಯವೇ ಜಯಿಸುತ್ತದೆ. ಪರಮಾತ್ಮನನ್ನು ಸೇರುವ ದೇವಯಾನವೆಂಬ ಮಾರ್ಗವು ಸತ್ಯದಿಂದ ತುಂಬಿದೆ. ಅದರಲ್ಲಿ ಪೂರ್ಣ ಕಾಮರಾದ ಋಷಿಗಳು ಆ ಮಾರ್ಗದಲ್ಲಿ ಸಾಗಿ ಸತ್ಯ ಸ್ವರೂಪಿಯಾದ ಪರಮಾತ್ಮನ ಉತ್ಕೃಷ್ಟವಾದ ಧಾಮವನ್ನು ಸೇರುತ್ತಾರೆ. ಇಷ್ಟವಾದ ಪದಾರ್ಥಗಳನ್ನು ಭಾವಿಸಿಕೊಂಡಿರುವವನು ಆ ಆಸೆಗಳೊಡನೆ ಮತ್ತೆ ಮತ್ತೆ ಇಲ್ಲಿಯೇ ಜನಿಸುತ್ತಾನೆ. ಆದರೆ ಆತ್ಮಜ್ಞಾನವನ್ನು ಹೊಂದಿ ಅವಾಪ್ತ ಸಮಸ್ತ ಕಾಮನಾದ ಪರಮಾತ್ಮನನ್ನು ಬಯಸುವವನಿಗೆ ಎಲ್ಲಾ ಆಸೆಯೂ ಇಲ್ಲೇ ನಾಶಗೊಳ್ಳುತ್ತವೆ.

ವೇದಾಂತಗಳಲ್ಲಿ ಪ್ರತಿಪಾದಿತವಾದ ಜ್ಞಾನದ ಮೂಲಕ ನಿಶ್ಚಿತವಾದ ಜ್ಞಾನವುಳ್ಳವರೂ ಇಂದ್ರಿಯ ಜಯವನ್ನು ಸಾಧಿಸಿದವರೂ ಕಾಮ್ಯ ಕರ್ಮಗಳನ್ನು ಬಿಟ್ಟು ಶುದ್ಧರಾದವರೂ

ಬ್ರಹ್ಮನಿಷ್ಠರೂ ಆದವರು ತಮ್ಮ ಅಂತಿಮ ಶರೀರದ ಅವ ಸಾನದಲ್ಲಿ ಅಮೃತ ಸ್ವರೂಪಿಯಾದ ಪರಮಾತ್ಮನ ದಯೆ ಯಿಂದ ಪೂರ್ಣವಾಗಿ ಮುಕ್ತರಾಗುತ್ತಾರೆ.

ಯಾರು ಈ ಪರಬ್ರಹ್ಮನ ಉಪಾಸನೆಯನ್ನು ಮಾಡುವ ವನಾಗುವನೋ ಅವನು ಬ್ರಹ್ಮರೂಪದ ಅವಿರ್ಭಾವವನ್ನು ಹೊಂದುವವನಾಗುತ್ತಾನೆ. ಅವನ ಕುಲದಲ್ಲಿ ಬ್ರಹ್ಮವನ್ನು ಅರಿಯದವನು ಇರುವುದಿಲ್ಲ. ಅವನು ಶೋಕವನ್ನೂ ಪಾಪ ವನ್ನೂ ದಾಟಿ ಹೋಗುತ್ತಾನೆ.

ಈ ಉಪನಿಷತ್ತಿನ ಪ್ರಧಾನ ಅಂಶಗಳು. ಈ ರೀತಿ ಇವೆ:

೧) ವಿದ್ಯೆಗಳಲ್ಲಿ 'ಪರಾವಿದ್ಯೆ'ಮತ್ತು ಅಪರವಿದ್ಯೆ' ಎಂಬ ಎರಡು ಭಾಗವಿದೆ. 'ಪರಾವಿದ್ಯೆ' ಎನ್ನುವುದು "ಬ್ರಹ್ಮ ಜ್ಞಾನ". ಎಷ್ಟೇ ಲೌಕಿಕ ಜ್ಞಾನವಿದ್ದರೂ ಬೇರೆ ಬೇರೆ ವಿದ್ಯಾಸ್ಥಾನಗಳಲ್ಲಿ ಪರಿಣತಿ ಇದ್ದರೂ ಅವನಿಗೆ ಶೋಕ, ಮೋಹಗಳು ಹೋಗು ವುದಿಲ್ಲ. ಶೋಕ ಮೋಹಗಳನ್ನು ಹೋಗಲಾಡಿಸಿಕೊಳ್ಳ ಬೇಕಾ ದರೆ ಬ್ರಹ್ಮ ವಿದ್ಯೆಯನ್ನೇ ಪಡೆದುಕೊಳ್ಳಬೇಕು.

೨) "ಬ್ರಹ್ಮಜ್ಞಾನ"ವನ್ನು ಪಡೆದುಕೊಳ್ಳಲು ಇಚ್ಛಿಸುವವನು ಯುಕ್ತನಾದ ಗುರುವಿನಿಂದಲೇ ಸಂಪಾದಿಸಿ ಕೊಳ್ಳಬೇಕು. ಅವನು ಶಾಂತಚಿತ್ತನೂ, ಶಮಾನ್ವಿತನೂ, ವಿನೀತನೂ ಆಗಿ ಆಚಾರ್ಯರಿಂದ ಆ ಉಪದೇಶವನ್ನು ಪಡೆದುಕೊಳ್ಳಬೇಕು.

೩) ಬ್ರಹ್ಮ ಜ್ಞಾನದಿಂದಲೇ ಶೋಕ - ಮೋಹಗಳ ನಿವೃತ್ತಿ.

೪) ಸಾಧನೆಯಲ್ಲಿ ಅಷ್ಟಾಂಗಯೋಗಕ್ಕೆ ಪ್ರಮುಖವಾದ ಸ್ಥಾನವಿದೆ.

೫) ಪರಮಾತ್ಮನ ಅನುಗ್ರಹದಿಂದಲೇ ಅವನನ್ನು ಉಪಾಸನೆ ಮಾಡುವುದರಿಂದಲೇ ಸಂಸಾರದಿಂದ ಬಿಡುಗಡೆ. ಶೋಕ ಮೋಹಗಳ ನಾಶ.

೬)ಸತ್ಯ, ತಪಸ್ಸು, ಸಮ್ಯಗ್‌ಜ್ಞಾನ, ಬ್ರಹ್ಮಚರ್ಯ ಮೊದ ಲಾದ ಆತ್ಮಗುಣಗಳ ಅಭ್ಯಾಸ ಅತ್ಯಂತ ಅವಶ್ಯಕ.

೭) ಮನುಷ್ಯನು ಇತರ ವಿಷಯಗಳನ್ನು ಬಯಸಿ ಅವುಗಳನ್ನು ಬೆಂಬತ್ತಿ ಹೋದರೆ ಅವನಿಗೆ ಸಂಸಾರವು ತಪ್ಪದು. ತನ್ನ ಮನಸ್ಸನ್ನು ನಿಗ್ರಹಿಸಿ "ಪರಮಾತ್ಮ ಕಾಮ" ನಾಗಬೇಕು.

೮) ಕೇವಲ ಪ್ರವಚನ, ಶ್ರವಣ ಮೊದಲಾದುವುಗಳಿಂದ ಬ್ರಹ್ಮಪ್ರಾಪ್ತಿ ಶಕ್ಯವಿಲ್ಲ. ಅದಕ್ಕೆ ತೀವ್ರವಾದ ಶ್ರದ್ಧೆಯೊಡನೆ ಭಗವದುಪಾಸನೆ ಮಾಡಬೇಕು.


## ಡಯಲ್ ಯುವರ್ ಇ.ಓ.

## ಯಾತ್ರಿಕ ಭಕ್ತರಲ್ಲಿ..... ವಿನಂತಿ

**ತಿರುಪತಿ ತಿರುಮಲೆಯಲ್ಲಿ ತಮ್ಮ ಅನುಭವಕ್ಕೆ ಬಂದ ಕುಂದು ಕೊರತೆಗಳ ಬಗ್ಗೆ ಹೆಚ್ಚು - ಕಡಿಮೆಗಳ ಬಗ್ಗೆ-ಸಲಹೆ ಸೂಚನೆಗಳನ್ನು ಕಾರ್ಯನಿರ್ವಹಣಾಧಿಕಾರಿಯವರಿಗೆ ನೇರವಾಗಿ ನೀಡಬಹುದು. ಅದಕ್ಕಾಗಿ ಪ್ರತಿ ತಿಂಗಳ ಮೊದಲ ಶುಕ್ರವಾರ ಬೆಳಗ್ಗೆ 8-30 ರಿಂದ 9-30 ಗಂಟೆಯವರೆಗೆ ತಾವು ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿಗಳೊಡನೆ ದೂರವಾಣಿಯಲ್ಲಿ ಮಾತನಾಡಬಹುದು.**

ದೂರವಾಣಿ ಸಂಖ್ಯೆ -0877-2263261

ಯಾತ್ರಿಕರ ಸೌಕರ್ಯಗಳನ್ನು ಹೆಚ್ಚಿಸಲು

ತಮ್ಮ ಯಾತ್ರೆ ಸುಲಭತರವಾಗಿ ಕೈಗೂಡಲು - ಮಾತನಾಡಿ.

# ಆಚಾರ್ಯ ಮಧ್ವರು ಸಂದರ್ಶಿಸಿದ ತಾಣಗಳು

-ವಿದ್ವಾನ್. ಜಿ. ಗೋಪಾಲಾಚಾರ್



(ಕಳೆದ ಸಂಚಿಕೆಯಿಂದ ಮುಂದುವರಿಯುವುದು)

**10. ಶ್ರೀಕೃಷ್ಣ ಮಠ - ಅಷ್ಟಮಠ -**

ಶ್ರೀ ಮಧ್ವಾಚಾರ್ಯರು ಕಲಿಯುಗದಲ್ಲಿ ಭಕ್ತರ ಕಲ್ಯಾಣಕ್ಕಾಗಿ ಉಡುಪಿಯಲ್ಲಿ ಶ್ರೀಕೃಷ್ಣನನ್ನು ಪ್ರತಿಷ್ಠಾಪಿಸಿದ್ದಾರೆ.ದ್ವಾರಕೆಯಿಂದ ನಾವೆಯ ಮೂಲಕ ಬಂದ ಗೋಪೀ ಚಂದನದಲ್ಲಿ ಆವೃತನಾಗಿದ್ದ ಮಂದಹಾಸಮೃದು ಸುಂದರನಾದ ಶ್ರೀಕೃಷ್ಣನನ್ನು ಮಧ್ವಸರೋವರದಲ್ಲಿ ಅಭಿಷೇಕ ಮಾಡಿ ಗರ್ಭಗೃಹದಲ್ಲಿ ಪ್ರತಿಷ್ಠಾಪಿಸಿದರು. ನಿರಂತರ ಪೂಜಾದಿ ಧಾರ್ಮಿಕ ವ್ಯವಸ್ಥೆಗಾಗಿ ಎಂಟು ವಟುಗಳಿಗೆ ಸನ್ಯಾಸ ದೀಕ್ಷೆಯನ್ನು ನೀಡಿ ಶಿಷ್ಯನಾಗಿ ಸ್ವೀಕರಿಸಿದರು. ಎಂಟು ಯತಿಗಳಿಗೂ ಸಂಸ್ಥಾನದ ಪ್ರತಿಮೆಗಳನ್ನು ನೀಡಿದರು. ಪ್ರತಿಯೊಬ್ಬ ಯತಿಗಳಿಗೂ ಎರಡು ತಿಂಗಳಿನಂತೆ ಪೂಜಾವ್ಯವಸ್ಥೆಯನ್ನೂ ಮಾಡಿ ಹದಿನಾಲ್ಕು ಲೋಕದೊಡೆಯನಿಗೆ ಹದಿನಾಲ್ಕು ಪೂಜೆಗಳು ಪ್ರತಿದಿನವೂ ಇಲ್ಲಿ ನಡೆಯುವಂತೆ ನಿಯಮ ಮಾಡಿದರು. ಇಲ್ಲಿಯ ಶ್ರೀಕೃಷ್ಣ ಅನ್ನಬ್ರಹ್ಮ. ಅವನ ಸನ್ನಿಧಿಯಲ್ಲಿ ನಿರಂತರ ಅನ್ನದಾನದ ವ್ಯವಸ್ಥೆಗಾಗಿ ಅಕ್ಷಯಪಾತ್ರೆ ಮತ್ತು ಸಟ್ಟುಗವನ್ನು ಸ್ಥಾಪಿಸಿದ್ದಾರೆ. ಇಲ್ಲಿಯ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಅನುಪಮವಾಗಿವೆ. ಸೋದೆ ಸಂಸ್ಥಾನದಲ್ಲಿ ವಿರಾಜಮಾನರಾಗಿದ್ದ ಮಹಾಮಹಿಮರಾದ ಶ್ರೀ ವಾದಿರಾಜ ಗುರುಸಾರ್ವಭೌಮರು ಎರಡು ತಿಂಗಳಿಗಿದ್ದ ಪರ್ಯಾಯ ವ್ಯವಸ್ಥೆಯನ್ನು ಎರಡು ವರ್ಷಗಳಿಗೆ ವಿಸ್ತರಿಸಿದರು. ಪರ್ಯಾಯ ಪೀಠದಲ್ಲಿರುವ ಶ್ರೀಗಳಲ್ಲಿ ಆಚಾರ್ಯರೇ ಸನ್ನಿಹಿತರಾಗಿ ಶ್ರೀಕೃಷ್ಣನ ಮಹಾಪೂಜೆಯನ್ನು ನಡೆಸುವರು. ದೇಶ ವಿದೇಶಗಳಿಂದ ಅಪಾರ ಸಂಖ್ಯೆಯಲ್ಲಿ ಭಕ್ತರು ಇಲ್ಲಿಗೆ ಆಗಮಿಸಿ ಶ್ರೀ ಕೃಷ್ಣನನ್ನು ಕಂಡು ಧನ್ಯರಾಗುತ್ತಾರೆ.

**12. ಕುಂಜಿತ್ತಾಯ ಮನೆ -**

ಈ ಮನೆಯು ಉಡುಪಿಯ ಕಲ್ಸಂಕದ ಸಮೀಪದಲ್ಲಿದೆ. ಉಡುಪಿಯ ಶ್ರೀ ಅನಂತೇಶ್ವರ ಸನ್ನಿಧಿಯಲ್ಲಿ ಪವಿತ್ರಪಾಣಿಗಳು ಇವರು. ಮಧ್ವಾಚಾರ್ಯರು ಉಡುಪಿಯಲ್ಲಿ ಶ್ರೀಕೃಷ್ಣನನ್ನು ಪ್ರತಿಷ್ಠಾಪಿಸಲು ಸಂಕಲ್ಪಿಸುತ್ತಾರೆ. ಮಧ್ವರ ಭಕ್ತಿಗೆ ಶ್ರೀಕೃಷ್ಣನು ದ್ವಾರಕೆಯಿಂದ ಇಲ್ಲಿಗೆ ಬರುತ್ತಾನೆ. ಭಗವಂತನ ದಿವ್ಯ ಸನ್ನಿಧಾನಯುಕ್ತವಾದ ಈ ವಿಗ್ರಹವನ್ನು ಪ್ರತಿಷ್ಠಾಪಿಸುವಾಗ ಈ ಮನೆತನದವರ ಸೇವೆ ಅಪಾರವಾದದ್ದು. ಸ್ಥಳದಾನ ಮಾಡಿದ ಭಾಗ್ಯವಂತರು. ಇವರ ಸೇವೆಗೆ ಸಂತುಷ್ಟರಾದ ಮಧ್ವರು ಲಕ್ಷ್ಮೀನಾರಾಯಣ ವಿಗ್ರಹವನ್ನು ನೀಡಿ ಅನುಗ್ರಹಿಸಿದ್ದಾರೆ. ಪರ್ಯಾಯ ಪೀಠವೇರುವ ಶ್ರೀಗಳು ಈ ಮನೆಗೆ ಬಂದು ದೇವರ ದರ್ಶನವನ್ನು ಮಾಡಿ ರಾಯಸವನ್ನು ನೀಡಿ ಈ ಮನೆಯವರನ್ನು ಪರ್ಯಾಯಕ್ಕೆ ಆಮಂತ್ರಿಸುತ್ತಾರೆ. ಈಗ ಈ ಮನೆಯಲ್ಲಿರುವ ಶ್ರೀನಿವಾಸ ಉಪಾಧ್ಯಾಯ

ದಂಪತಿಗಳು ಈ ಮನೆಗೆ ಆಗಮಿಸುವ ಭಕ್ತರಿಗೆ ದೇವರ ದರ್ಶನವನ್ನು ಮಾಡಿಸುತ್ತಾರೆ.

### 13. ವಿಷ್ಣುಮಂಗಳ -

ತರುಣ ಯತಿಗಳಾದ ಆಚಾರ್ಯ ಮಧ್ವರು ತತ್ವವಾದದ ಪ್ರಸಾರಕ್ಕಾಗಿ ದಕ್ಷಿಣ ಭಾರತ ಯಾತ್ರೆಯನ್ನು ಕೈಗೊಳ್ಳುತ್ತಾರೆ.ಕೇರಳದ ಕಾಸರಗೋಡಿನ ಸನಿಹದಲ್ಲಿ ಸಿಗುವ ಮೊದಲ ಕ್ಷೇತ್ರವೇ ವಿಷ್ಣುಮಂಗಳ. ಇಲ್ಲಿ ಜಗನ್ಮಂಗಳ ನಾದ ಶ್ರೀ ವಿಷ್ಣುವು ನೆಲೆಸಿದ್ದಾನೆ. ಶ್ರೀಮಧ್ವಾಚಾರ್ಯರು ಅನೇಕ ಬಾರಿ ಈ ಕ್ಷೇತ್ರಕ್ಕೆ ಆಗಮಿಸಿ ಇಲ್ಲಿಯ ಚಕ್ರತೀರ್ಥದಲ್ಲಿ ಸ್ನಾನವನ್ನು ಮಾಡಿ ಅಹ್ನೀಕ ದೇವರಪೂಜೆ ಪಾಠ ಪ್ರವಚನ ಗಳನ್ನು ಮಾಡಿ ಈ ಭಾಗದ ಜನರನ್ನು ಅನುಗ್ರಹಿಸಿದ್ದಾರೆ. ಒಮ್ಮೆ ಗುರುಗಳ ಜೊತೆಗೆ ಇಲ್ಲಿಗೆ ಬಂದಾಗ ಭಿಕ್ಷೆ ನೀಡಿದ ಭಕ್ತನು ಇವರನ್ನು ಪರೀಕ್ಷಿಸಲು ಊಟವಾದ ನಂತರ ಇನ್ನೂರಕ್ಕೂ ಹೆಚ್ಚಿನ ನೇಂದ್ರ ಬಾಳೆಹಣ್ಣುಗಳನ್ನು ಇವರ ಮುಂದಿಟ್ಟನು. ಆಚಾರ್ಯಮಧ್ವರು ಅನಾಯಾಸವಾಗಿ ಎಲ್ಲ ಹಣ್ಣನ್ನು ಭಕ್ಷಿಸಿದರು. ಇದನ್ನು ನೋಡಿದ ಎಲ್ಲರಿಗೂ ಆಶ್ಚರ್ಯ.ಸ್ವತಃ ಗುರುಗಳಿಗೂ ಆಶ್ಚರ್ಯವಾಗಿ ಪ್ರಶ್ನಿಸಿದರು. ಆಗ ಮಧ್ವರು ತಮ್ಮ ಉದರದಲ್ಲಿರುವ ಹೆಬ್ಬೆರಳ ಗಾತ್ರದ ಪ್ರಜ್ವಲಿಸುವ ಜಠ ರಾಗ್ನಿಯ ಮಹತ್ವವನ್ನು ತಿಳಿಸಿದರು.ಮುಂದೆ ಇದೇ ವಿಷ್ಣು ಮಂಗಳದ ಈ ದೇವಸ್ಥಾನಕ್ಕೆ ಆಚಾರ್ಯಮಧ್ವರು ಕಬೇನಾಡಿ ದೊರೆಯಾದ ಜಯಸಿಂಹ ರಾಜನ ಆಮಂತ್ರಣದ ಮೇರೆಗೆ ಆಗಮಿಸುತ್ತಾರೆ.

### 14. ತಿರುವನಂತಪುರ -

ಆಚಾರ್ಯಮಧ್ವರು ವಿಷ್ಣುಮಂಗಳದಿಂದ ಮುಂದು ವರಿಸಿದರು. ದಾರಿಯಲ್ಲಿ ಕೇರಳದ ಮಹಾನದಿಯಾದ ಪಯಸ್ವಿನಿಯ ತಟದಲ್ಲಿ ಸಮೃದ್ಧವಾದ ದೇವಾಲಯಗಳು.



**ಒಮ್ಮೆ ಗುರುಗಳ ಜೊತೆಗೆ ಇಲ್ಲಿಗೆ ಬಂದಾಗ ಭಿಕ್ಷೆ ನೀಡಿದ ಭಕ್ತನು ಇವರನ್ನು ಪರೀಕ್ಷಿಸಲು ಊಟವಾದ ನಂತರ ಇನ್ನೂರಕ್ಕೂ ಹೆಚ್ಚಿನ ನೇಂದ್ರ ಬಾಳೆಹಣ್ಣುಗಳನ್ನು ಇವರ ಮುಂದಿಟ್ಟನು. ಆಚಾರ್ಯಮಧ್ವರು ಅನಾಯಾಸವಾಗಿ ಎಲ್ಲ ಹಣ್ಣನ್ನು ಭಕ್ಷಿಸಿದರು. ಇದನ್ನು ನೋಡಿದ ಎಲ್ಲರಿಗೂ ಆಶ್ಚರ್ಯ.**

ಗ್ರಾಮಗಳು ವಿದ್ವಜ್ಜನರಿಂದ ಶೋಭಿತವಾಗಿದ್ದವು.ಮುಂದೆ ಇದೇ ತೀರದಲ್ಲಿ ಅವತರಿಸುವ ದುರ್ಗಾದೇವಿಯನ್ನು ಸ್ಮರಿಸಿ ಕೊಂಡು ಕೇರಳದ ಬಹುಪ್ರಸಿದ್ಧ ಕ್ಷೇತ್ರವಾದ ತಿರುವನಂತ ಪುರಕ್ಕೆ ಆಗಮಿಸಿದರು. ಇದು ಪುರಾಣಪ್ರಸಿದ್ಧ ಪುಣ್ಯಕ್ಷೇತ್ರ ವಾಗಿದೆ. ಇಲ್ಲಿ ಭವ್ಯವಾದ ಶ್ರೀ ಅನಂತಪದ್ಮನಾಭನ ದೇವ ಸ್ಥಾನವಿದೆ. ಯೋಗನಿದ್ರೆಯಲ್ಲಿ ಪವಡಿಸಿದ ಭಗವಂತನನ್ನು ಮೂರು ಬಾಗಿಲಿನಿಂದ ದರ್ಶನ ಮಾಡ ಬೇಕು. ಆಚಾರ್ಯರು ಭಗವಂತನನ್ನು ಸ್ತುತಿಸಿ ಅಲ್ಲಿ ವ್ಯವಸ್ಥೆಮಾಡಿದ್ದ ವಿದ್ವತ್ಸಭೆಯಲ್ಲಿ ಸೂತ್ರಾರ್ಥದ ವಿವರಣೆಯನ್ನು ನೀಡಿದರು. ಆಗ ಅಲ್ಲಿಗೆ ಕುದಿಪುಸ್ತೂರು ಎಂಬ ಪಂಡಿತನು ಆಗಮಿಸುತ್ತಾನೆ.ವಾದದಲ್ಲಿ ಅವನನ್ನು ನಿರುತ್ತರನನ್ನಾಗಿಸಿ ವಿದ್ವತ್ಸಭೆಯನ್ನು ಸಂತೋಷ ಪಡಿಸಿದರು.

### 15ಕನ್ಯಾಕುಮಾರಿ -

ತಿರುವನಂತಪುರದಿಂದ ಆಚಾರ್ಯಮಧ್ವರು ಭಾರ ತಾಂಬೆಯ ಪಾದಪ್ರದೇಶವಾದ ತಮಿಳುನಾಡಿನ ಕನ್ಯಾ ಕುಮಾರಿಗೆ ಆಗಮಿಸುತ್ತಾರೆ. ಇಲ್ಲಿ ಸಮುದ್ರತ್ರಯಗಳ ಸಂಗಮ ಬಲು ರಮ್ಯವಾದದ್ದು. ಇಲ್ಲಿರುವ ಪವಿತ್ರವಾದ ಕನ್ಯಾತೀರ್ಥ ದಲ್ಲಿ ಸ್ನಾನವನ್ನು ಮಾಡಿ ತತ್ವವಾದವನ್ನು ಇಲ್ಲಿಯ ಭಕ್ತರಿಗೆ ಉಪದೇಶಿಸಿದರು.

### 16. ರಾಮೇಶ್ವರ -

ಆಚಾರ್ಯಮಧ್ವರು ಕನ್ಯಾಕುಮಾರಿಯಿಂದ ರಾಮೇಶ್ವರ ಕ್ಷೇತ್ರಕ್ಕೆ ಆಗಮಿಸಿದರು. ಶ್ರೀರಾಮನ ಮಹತ್ವವನ್ನು ಸಾರುವ ಈ ಕ್ಷೇತ್ರದಲ್ಲಿ ಚಾತುರ್ಮಾಸ್ಯವ್ರತವನ್ನು ಸ್ವೀಕರಿಸಿ ದರು. ಪ್ರತಿದಿನವೂ ವಿದ್ವತ್ಸಭೆಯಲ್ಲಿ ವೇದಾಂತದ ಪ್ರವಚನ. ರಾಮೇಶ್ವರನ ದಿವ್ಯ ಸನ್ನಿಧಿಯಲ್ಲಿ ಆಚಾರ್ಯರು ತಮ್ಮ ವಿದ್ವತ್ತಿನಿಂದ ಪಂಡಿತವೃಂದವನ್ನು ಸಂತೋಷಗೊಳಿಸಿದರು. ನಿಂದಿಸುವ ಅಸಜ್ಜನರನ್ನು ಉಪೇಕ್ಷಿಸಿ ಸಜ್ಜನರನ್ನು ಉದ್ಧರಿ ಸಿದರು. ಇಲ್ಲಿದ್ದಾಗ ಧನುಷ್ಕೋಟಿಗೆ ಹೋಗಿ ಬ್ರಹ್ಮ ಹತ್ಯಾದಿ ದೋಷಗಳನ್ನು ಕಳೆಯುವ ಸೇತುಸ್ನಾನವನ್ನು ಮಾಡಿದರು.



### 17. ಶ್ರೀರಂಗಮ್ -

ಆಚಾರ್ಯಮಧ್ವರು ರಾಮೇಶ್ವರದಲ್ಲಿ ಚಾತುರ್ಮಾಸ್ಯವನ್ನು ಪೂರೈಸಿ ಶ್ರೀರಂಗಕ್ಷೇತ್ರವನ್ನು ಸಂದರ್ಶಿಸಿದರು. ಸ್ವಯಂವ್ಯಕ್ತ ವೈಷ್ಣವಕ್ಷೇತ್ರಗಳಲ್ಲಿ ಮೊದಲನೆಯದೆಂಬ ಖ್ಯಾತಿಯನ್ನು ಪಡೆದ ಇದು ಅಪೂರ್ವ ಕ್ಷೇತ್ರವಾಗಿದೆ. ಕಾವೇರಿಯ ಪ್ರಶಾಂತ ತೀರದಲ್ಲಿ ಶೇಷಶಾಯಿಯಾಗಿ ಪವಡಿ ಸಿದ ಸುಂದರಮೂರುತಿಯಾದ ಶ್ರೀ ರಂಗನಾಥನು ಇಲ್ಲಿಯ ಪ್ರಧಾನದೇವತೆ. ಅನೇಕ ಇತಿಹಾಸವನ್ನು ಹೊಂದಿದ ಪುರಾಣ ಪ್ರಸಿದ್ಧವಾದ ಈ ಕ್ಷೇತ್ರದಲ್ಲಿ ನೆಲೆಸಿರುವ ಭಗವಂತನನ್ನು ಅನನ್ಯವಾಗಿ ಸ್ತುತಿಸಿದ್ದಾರೆ.

### 18. ಶ್ರೀಮುಷ್ಣಮ್ -

ಸ್ವಯಂವ್ಯಕ್ತವೈಷ್ಣವಕ್ಷೇತ್ರಗಳಲ್ಲಿ ಸೇರಿದ ಪರಮ ಪಾವನವಾದ ಕ್ಷೇತ್ರ ತಮಿಳುನಾಡಿನ ಶ್ರೀಮುಷ್ಣಮ್ ಕ್ಷೇತ್ರ. ಭೂವರಾಹ ರೂಪದಿಂದ ಭಗವಂತನು ಇಲ್ಲಿ ನೆಲೆಸಿದ್ದಾನೆ. ಆಚಾರ್ಯಮಧ್ವರು ಇಲ್ಲಿಗೆ ಆಗಮಿಸಿ ಭಗವಂತನನ್ನು ಆರಾಧಿಸಿದ್ದಾರೆ. ಇಲ್ಲಿ ಆಚಾರ್ಯರು ತೋರಿದ ಮಹಿಮೆ ಅಪಾರವಾದದ್ದು. ಒಮ್ಮೆ ಅತ್ಯಂತ ಪವಿತ್ರವಾದ ಈ ಕ್ಷೇತ್ರದಲ್ಲಿ ಜಲಕ್ಷಾಮ. ಜನರ ಕಷ್ಟವನ್ನು ನೋಡಿದ ಆಚಾರ್ಯರಿಗೆ ಕರುಣೆ ಉಕ್ಕಿಬಂತು. ದಂಡದಿಂದಲೇ ನೆಲವನ್ನು ಅಪ್ಪಳಿಸಿ ನೀರನ್ನು ತರಿಸಿ ತೀರ್ಥವನ್ನು ನಿರ್ಮಿಸಿ ಜನರ ಕಷ್ಟವನ್ನು ನಿವಾರಿಸಿದರು. ಆ ತೀರ್ಥವನ್ನು ಇಂದು ದಂಡತೀರ್ಥ ಎಂದು ಕರೆಯುತ್ತಾರೆ. ಹೀಗೆ ಒಟ್ಟು ಮಧ್ವರು ದಂಡದಿಂದ ನಿರ್ಮಿಸಿದ ತೀರ್ಥಗಳು ಮೂರು.

### 19. ಅಡೂರು -

ಆಚಾರ್ಯ ಮಧ್ವರು ದಕ್ಷಿಣಭಾರತದ ಸಂಚಾರವನ್ನು ಪೂರೈಸಿ ಉಡುಪಿಗೆ ಮರಳಿಬರುವ ಮಾರ್ಗದಲ್ಲಿ ಸಿಗುವ ಕೇರಳದ ಅಡೂರಿಗೆ ಬರುತ್ತಾರೆ. ಪಯಸ್ವಿನೀ ನದಿಯ ತೀರದಲ್ಲಿರುವ ಅಡೂರು ಕ್ಷೇತ್ರವು ಕುಂಬ್ಳೆ ಸೀಮೆಯ ಪ್ರಧಾನ ದೇವಸ್ಥಾನವಾಗಿದೆ. ಇಲ್ಲಿ ಭವ್ಯವಾದ ಮಹಾಲಿಂಗೇಶ್ವರ ದೇವಸ್ಥಾನವಿದೆ. ಮಧ್ವರು ಆ ದೇವಸ್ಥಾನಕ್ಕೆ ಆಗಮಿಸುತ್ತಾರೆ. ಅಲ್ಲಿ ಶಿಕ್ಷಾದಿ ಷಡಂಗ ಸಹಿತ ವೇದಗಳನ್ನು ಅಧ್ಯಯನ



ಮಾಡಿದ ವಿದ್ವಾಂಸರು ಸಭೆಯಲ್ಲಿ ನೆರೆದಿದ್ದರು. ಸಭೆಯಲ್ಲಿ ವಿದ್ವಾಂಸನ್ನೊಬ್ಬನು ಐತರೇಯ ಶಾಕೆಯ ಸೂಕ್ತವೊಂದನ್ನು ಸೂಚಿಸಿ ಅದರರ್ಥವನ್ನು ವಿವರಿಸಬೇಕೆಂದು ತಿಳಿಸಿದನು. ಆಗ ಆಚಾರ್ಯರು ಅದನ್ನು ವಿವರಿಸುತ್ತಾ ಅವರ ಪ್ರಾರ್ಥನೆಯಂತೆ ವಿಷ್ಣು ಸಹಸ್ರನಾಮದ



ಒಂದೊಂದು ಪದಗಳಿಗಿರುವ ಶತಾರ್ಥಗಳನ್ನು ವ್ಯಾಖ್ಯಾನಿಸಿದರು. ಆಚಾರ್ಯರ ಅಸದೃಶ್ಯವಾದ ಪ್ರತಿಭೆಗೆ ಆ ವಿದ್ವಾಂಸರು ತಲೆಬಾಗಿ ಕ್ಷಮೆಯನ್ನು ಪ್ರಾರ್ಥಿಸಿದರು. ಆಚಾರ್ಯರು ಅಲ್ಲಿ ಶ್ರೀವಿಷ್ಣುಮೂರ್ತಿಯನ್ನು ಪ್ರತಿಷ್ಠಾಪಿಸಿದ್ದಾರೆ.

### 20. ಹೃಷೀಕೇಶ -

ಹರಿದ್ವಾರದಿಂದ ಬದರೀನಾಥ ಕ್ಷೇತ್ರಕ್ಕೆ ಹೋಗುವ ಮಾರ್ಗದಲ್ಲಿ ಈ ಕ್ಷೇತ್ರವು ಸಿಗುತ್ತದೆ. ಇಲ್ಲಿ ಗಂಗಾ ಮಾತೆ ವಿಶಾಲ ರೂಪವನ್ನು ಹೊಂದಿ ಪ್ರವಹಿಸುತ್ತಿದ್ದಾಳೆ. ರುದ್ರದೇವರು ತನ್ನ ಜಟೆಯಲ್ಲಿ ಗಂಗೆಯನ್ನು ಧರಿಸಿ ಭಗೀರಥನ ಪ್ರಾರ್ಥನೆಯಂತೆ ಮರಳಿ ಭೂಮಿಗೆ ನೀಡಿದರು. ಈ ಪವಿತ್ರ ಭೂಮಿಯಲ್ಲಿ ಅನೇಕ ಮುನಿಗಳು ಇಂದಿಗೂ ಯಾರಿಗೂ ಗೋಚರಿಸದೆ ಧ್ಯಾನ ಮಗ್ನರಾಗಿದ್ದಾರೆ. ಆಚಾರ್ಯಮಧ್ವರು

ಈ ಕ್ಷೇತ್ರಕ್ಕೆ ಶಿಷ್ಯರೊಂದಿಗೆ ಆಗಮಿಸುತ್ತಾರೆ. ಆಗ ರುದ್ರದೇವರು ಧವಳ ಕಾಂತಿಯಿಂದ ಕಂಗೊಳಿಸುತ್ತ ವಿಪ್ರವೇಶ ದಲ್ಲಿ ಆಚಾರ್ಯರ ಬಳಿಗೆ ಆಗಮಿಸಿ ಭಿಕ್ಷೆಯನ್ನು ನೀಡಿ ಸತ್ಕರಿಸಿದ್ದಾರೆ.ತನ್ನ ಭಕ್ತನಿಗೆ ಸ್ಪಷ್ಟದಲ್ಲಿ ಪ್ರೇರಣೆಯನ್ನು ಮಾಡಿ ಶಿಷ್ಯವೃಂದಕ್ಕೆ ಉತ್ತಮ ವ್ಯವಸ್ಥೆಯನ್ನು ಮಾಡಿ ಮಧ್ವರ ಸೇವೆಯನ್ನು ಮಾಡಿದ್ದಾರೆ.

**21. ಬದರಿಕಾಶ್ರಮ -**

ಆಚಾರ್ಯ ಮಧ್ವರು ದಕ್ಷಿಣಭಾರತದ ಯಾತ್ರೆಯನ್ನು ಉಡುಪಿಯ ಶ್ರೀ ಅನಂತಾಸನದಲ್ಲಿ ಸಮರ್ಪಿಸಿ ಉತ್ತರ ಭಾರತದ ಯಾತ್ರೆಯನ್ನು ಪ್ರಾರಂಭಿಸಿದರು. ಹಿಮಾಚ್ಛಾದಿತ ಪರ್ವತಪ್ರದೇಶವಾದ ಬದರಿಕಾಶ್ರಮದತ್ತ ಪ್ರಯಾಣ ಬೆಳೆಸಿದರು. ಬದರಿಯ ಶ್ರೀಮನ್ನಾರಾಯಣನ ಸನ್ನಿಧಾನಕ್ಕೆ ಅರ್ಪಿಸಲು ಗೀತಾಭಾಷ್ಯವನ್ನು ರಚಿಸಿದರು. ಷಟ್ ಪ್ರಯಾಗ ಗಳನ್ನು ದಾಟಿ ಶ್ರೀ ನಾರಾಯಣನ ದಿವ್ಯ ಸನ್ನಿಧಿಗೆ ಆಗಮಿಸಿದರು. ಇಲ್ಲಿರುವ ಶ್ರೀ ಅನಂತಮಠದಲ್ಲಿ ವಾಸಮಾಡಿದರು. ನಾರಾಯಣನ ಸನ್ನಿಧಿಯಲ್ಲಿ ಗೀತಾ ಭಾಷ್ಯವನ್ನು ಪ್ರವಚನ ಮಾಡಿದರು. ಈ ಪ್ರಚನದಿಂದ ಸಂತುಷ್ಟನಾದ ಶ್ರೀ ನಾರಾಯಣನು ಮಂಗಳಶ್ಲೋಕದಲ್ಲಿದ್ದ ಶಕ್ತಿತಃ ಎಂಬ ಪದವನ್ನು ತೆಗೆದು ಲೇಶತಃ ಎಂಬ ಪದವನ್ನು ಸೇರಿಸಲು ಸೂಚಿಸಿ ರಾತ್ರಿಯ ಸಮಯದಲ್ಲಿ ಮತ್ತೆ ಆಚಾರ್ಯರಿಂದ ಪ್ರವಚನವನ್ನು ಮಾಡಿಸುತ್ತಾನೆ. ಅತ್ಯಂತ ಹಿಮದಪ್ರದೇಶವಾದ ಇಲ್ಲಿ ಆಚಾರ್ಯರು ನಲವತ್ತೆಂಟು ದಿನಗಳ ಕಾಲ ಕಾಷ್ಠಮೌನ ಉಪವಾಸ ವ್ರತವನ್ನು ಆಚರಿಸುತ್ತಾರೆ. ಅರುಣೋದಯದಲೆದ್ದು ಅಲಂಕನಂದಾ ನದಿಯಲ್ಲಿ ಇವರು ಮಾಡುವ ಸ್ನಾನ ಜಪ ಪೂಜಾದಿಗಳನ್ನು ನೋಡಿದ ಜನರು ಇವರು ವಾಯು ದೇವರೆಂದು ಕೊಂಡಾಡಿದರು.ಇದೇ ಸಮಯದಲ್ಲಿ ಭಗವಾನ್ ವೇದವ್ಯಾಸರ ಆದೇಶದಂತೆ ಉತ್ತರ ಬದರಿಗೆ ತೆರಳುತ್ತಾರೆ. ಮೌನ ವ್ರತದಲ್ಲಿರುವುದರಿಂದ "ನೇದೃಶಂ ಸ್ಥಲಮಲಂ ಶಮಲಘ್ನಂ, ನಾಸ್ತಿ ತೀರ್ಥಸಲಿಲಸ್ಯ ಸಮಂ ವಾಃ. ನಾಸ್ತಿ ವಿಷ್ಣುಸದೃಶಂ ನನು ದೈವಂ ನಾಸ್ಮದುಕ್ತಿಸದೃಶಂ ಹಿತ ರೂಪಂ" ಎಂಬ ಸಂದೇಶವನ್ನು ಬಂಡೆಗಲ್ಲಿನಲ್ಲಿ ಬರೆದು ಉತ್ತರ ಬದರಿಗೆ ಪ್ರಯಾಣಿಸುತ್ತಾರೆ. ವಾಯುವಿನಂತೆ ಪರ್ವತಗಳ ಸಾಲು ಪ್ರದೇಶದಲ್ಲಿ ಪ್ರಯಾಣಿಸುತ್ತಿದ್ದ ಇವರ ಮಹಿಮೆಯನ್ನು ಕಂಡ ಶ್ರೀ ಸತ್ಯತೀರ್ಥರು ಆಚಾರ್ಯರ ವ್ಯಕ್ತಿತ್ವವನ್ನು ಎಲ್ಲರಿಗೂ ತಿಳಿಸುತ್ತಾರೆ.

- (ಸಶೇಷ)

ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ

# ಸಪ್ತಗಿರಿ

## ಚಂದಾದಾರರಿಗೆ ವಿಜ್ಞಪ್ತಿ

ಸಪ್ತಗಿರಿ ಮಾಸಪತ್ರಿಕೆ ಪಾಠಕರಿಗೆ ಪ್ರತಿ ತಿಂಗಳು ಸಕಾಲದಲ್ಲಿ ಸೇರಲು ಅನೇಕ ಕ್ರಮಗಳನ್ನು ಕೈಗೊಂಡಿದೆ. ಭಕ್ತರು ತಮ್ಮ ವಿಳಾಸದಲ್ಲಿ ಏನಾದರೂ ಬದಲಾವಣೆ ಇದ್ದಲ್ಲಿ ನಮಗೆ ತಿಳಿಸಬೇಕಾಗಿ ಕೋರಲಾಗಿದೆ. ಪಾಠಕರು ಈ ವಿಷಯವನ್ನು ಈ ಕೆಳಗೆ ತಿಳಿಸಿದಂತೆ ಪ್ರಧಾನ ಸಂಪಾದಕರ ಕಾರ್ಯಾಲಯಕ್ಕೆ ತಿಳಿಸಬೇಕಾಗಿ ವಿನಂತಿ.

1) "ಸಪ್ತಗಿರಿ" ಮಾಸಪತ್ರಿಕೆಗೆ ಸಂಬಂಧಿಸಿದ ಸಲಹೆ/ಸೂಚನೆ/ದೂರುಗಳನ್ನು sapthagiri_helpdesk@tirumala.org ಮುಖಾಂತರ ತಿಳಿಯ ಪಡಿಸಿ.

2) ಸಪ್ತಗಿರಿ ಚಂದಾದಾರರ ವಿಳಾಸದಲ್ಲಿ ಬದಲಾವಣೆ ಇದ್ದಲ್ಲಿ 0877 - 2264543 ದೂರವಾಣಿ ಸಂಖ್ಯೆಗೆ ಕರೆ ಮಾಡಿ ತಮ್ಮ ಪೂರ್ತಿ ವಿಳಾಸವನ್ನು ಪಿನ್‌ಕೋಡ್, ಸೆಲ್ ನಂಬರ್ ಸಮೇತ ಕಾರ್ಯಾಲಯದ ಕೆಲಸದ ವೇಳೆಯಲ್ಲಿ (ಬೆ.10.30 ರಿಂದ ಸಂಜೆ 5.00 ಗಂಟೆಯೊಳಗೆ) ತಿಳಿಸಬೇಕು.

3. ಕಾರ್ಯಾಲಯದ ದೂರವಾಣಿ ನಂಬರ್ ಮುಖಾಂತರವಾಗಲಿ, sapthagiri_helpdesk @tirumala.org ಮುಖಾಂತರ ತಿಳಿಯಪಡಿಸಿ.


4. ಆನ್‌ಲೈನ್ ಚಂದಾದಾರರು ತಮ್ಮ ಪೂರ್ತಿ ವಿಳಾಸವನ್ನು ಕ್ರಮಬದ್ಧೀಕರಿಸಲು ತಿ.ತಿ.ದೇ. ವೆಬ್‌ಸೈಟ್ ಮುಖಾಂತರ ಮತ್ತೊಮ್ಮೆ ತಿಳಿಸಬೇಕಾಗಿ ಕೋರಲಾಗಿದೆ.

-ಪ್ರಧಾನ ಸಂಪಾದಕರು

## ತಿರುಮಲೆಯಲ್ಲಿ 2019 ಏಪ್ರಿಲ್ 17 ರಿಂದ 19 ರ ವರೆಗೆ ಸ್ವಾಮಿಯವರ, ಶ್ರೀಕೋದಂಡ ರಾಮ ಸ್ವಾಮಿಯವರಿಗೆ, ಶ್ರೀ ಕೃಷ್ಣಸ್ವಾಮಿಯವರಿಗೆ ನಡೆದ ವಸಂತೋತ್ಸವ.



ಉಭಯದೇವಿಯರೊಂದಿಗೆ ಸ್ವಾಮಿಯವರಿಗೆ ಸಹಸ್ರಧಾರಾಭಿಷೇಕ



ಉಭಯದೇವಿಯರೊಂದಿಗೆ ಸ್ವಾಮಿಯವರಿಗೆ, ಶ್ರೀ ಸೀತಾಲಕ್ಷ್ಮಣ ಸಮೇತ ಕೋದಂಡರಾಮಸ್ವಾಮಿಯವರಿಗೆ,
ಶ್ರೀ ರುಕ್ಮಿಣೀ ಕೃಷ್ಣಸ್ವಾಮಿಯವರಿಗೆ ಸ್ನಪನ ತಿರುಮಂಜನ ದೃಶ್ಯ

ಸ್ವಾಮಿಯವರ ಸ್ವರ್ಣರಥ





ತಿರುಮಲೆ ಮಾಢವೀಧಿಗಳಲ್ಲಿ ಮೆರೆಯುತ್ತಿರುವ
ಉಭಯದೇವಿಯರೊಂದಿಗೆ ಸ್ವಾಮಿಯವರು,
ಶ್ರೀ ಸೀತಾಲಕ್ಷ್ಮಣ ಸಮೇತ ಕೋದಂಡರಾಮ ಸ್ವಾಮಿಯವರು, ಶ್ರೀ ರುಕ್ಮಿಣೀಕೃಷ್ಣ ಸ್ವಾಮಿಯವರು

## ಒಂಟಿಮಿಟ್ಟ ಶ್ರೀ ಕೋದಂಡರಾಮ ಸ್ವಾಮಿಯವರಿಗೆ
## 2019 ಏಪ್ರಿಲ್ 12 ರಿಂದ 21 ರ ವರೆಗೆ ಅತ್ಯಂತ ವೈಭವವಾಗಿ ನಡೆದ ಬ್ರಹ್ಮೋತ್ಸವ ದೃಶ್ಯಗಳು


ಧ್ವಜಾರೋಹಣ


ಹನುಮಂತವಾಹನ


ಮಾಢವೀಧಿಗಳಲ್ಲಿ ಮೆರಯುತ್ತಿರುವ ಶ್ರೀ ರಾಮಚಂದ್ರ ಮೂರ್ತಿ


ಊಂಜಲ್ ಸೇವೆಯಲ್ಲಿ ಶ್ರೀ ಸೀತಾರಾಮಲಕ್ಷ್ಮಣ ಮೂರ್ತಿ


ಗರುಡವಾಹನ


ನವನೀತ ಕೃಷ್ಣಾಲಂಕಾರ


ಶ್ರೀ ಕೋದಂಡ ರಾಮ ಸ್ವಾಮಿಯವರ ಆಲಯ
ಒಂಟಿಮಿಟ್ಟ

## ಒಂಟಿಮಿಟ್ಟ, ಶ್ರೀ ಕೋದಂಡರಾಮ ಸ್ವಾಮಿಯವರಿಗೆ 2019 ಏಪ್ರಿಲ್ 18 ರಂದು ಅತ್ಯಂತ ವೈಭವವಾಗಿ ನಡೆದ ಕಲ್ಯಾಣೋತ್ಸವ ದೃಶ್ಯಗಳು




ಶ್ರೀ ಸೀತಾರಾಮ ಮೂರ್ತಿಯರು



ಶ್ರೀ ಸೀತಾರಾಮ ರ ಕಲ್ಯಾಣ





ಆಂಧ್ರಪ್ರದೇಶದ ರಾಜ್ಯದ ಪರವಾಗಿ ಶ್ರೀ ಸೀತಾರಾಮರ ಕಲ್ಯಾಣಕ್ಕೆ ರೇಷ್ಮೆ ವಸ್ತ್ರಗಳನ್ನು ಸಮರ್ಪಿಸುತ್ತಿರುವ (ಉಭಯ ರಾಜ್ಯದ) ರಾಜ್ಯಪಾಲರು ಶ್ರೀ.ಎಸ್.ಎಲ್.ವಿ. ನರಸಿಂಹನ್ ದಂಪತಿಯರು ಮತ್ತು ಮುಖ್ಯಮಂತ್ರಿ ಗೌ॥ ಶ್ರೀ ನಾರಾ ಚಂದ್ರಬಾಬು ನಾಯುಡು ದಂಪತಿಯರು





ಶ್ರೀ ಸೀತಾರಾಮ ರ ಕಲ್ಯಾಣೋತ್ಸವದಲ್ಲಿ ಪಾಲ್ಗೊಂಡ ಭಕ್ತರು



ವಿದ್ಯುತ್ ಅಲಂಕಾರದಲ್ಲಿ
ಶ್ರೀ ಕೋದಂಡ ರಾಮ ಸ್ವಾಮಿಯವರ ಆಲಯ,
ಒಂಟಿಮಿಟ್ಟ

# ತಿರುಪತಿ ಶ್ರೀ ಕೋದಂಡರಾಮ ಸ್ವಾಮಿಯವರಿಗೆ 2019 ಏಪ್ರಿಲ್ 15,16 ನೇ ದಿನಾಂಕದಂದು ಅತ್ಯಂತ ವೈಭವವಾಗಿ ನಡೆದ ಕಲ್ಯಾಣೋತ್ಸವ ಮತ್ತು ಪಟ್ಟಾಭಿಷೇಕ ದೃಶ್ಯಗಳು



ಶ್ರೀ ಸೀತಾರಾಮ ಕಲ್ಯಾಣ



ಶ್ರೀ ಸೀತಾರಾಮ ಪಟ್ಟಾಭಿಷೇಕ



ಶ್ರೀ ಸೀತಾರಾಮ ಕಲ್ಯಾಣಕ್ಕೆ ಮಾಂಗಲ್ಯ, ರೇಷ್ಮೆವಸ್ತ್ರಗಳನ್ನು ತಿ.ತಿ.ದೇ. ಪರವಾಗಿ ನೀಡುತ್ತಿರುವ ತಿರುಮಲ ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀ ಶ್ರೀನಿವಾಸರಾಜು, ರವರು



ಶ್ರೀ ಸೀತಾರಾಮ ಪಟ್ಟಾಭಿಷೇಕಕ್ಕೆ ಸ್ವರ್ಣ ಕಿರೀಟವನ್ನು ತಿ.ತಿ.ದೇ. ಪರವಾಗಿ ನೀಡುತ್ತಿರುವ ತಿರುಪತಿ ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀ. ಪಿ. ಲಕ್ಷ್ಮೀಕಾಂತಂ, ರವರು




# ಜಲಜ ನಿವಾಸಿನಿಯ ಜಲ ವಿಹಾರೋತ್ಸವಗಳು! (ತೆಪ್ಪೋತ್ಸವಗಳು)


ಮೂಲ: ಜೆ. ಬಾಲಸುಬ್ರಹ್ಮಣ್ಯಂ

ಅನುವಾದ : ಶ್ರೀಮತಿ. ಗೀತಾ


ಜಲಜ ಎಂದರೆ ಪದ್ಮ. ಅದು ಸಹಸ್ರದಳಗಳುಳ್ಳ ಸ್ವರ್ಣ ಪದ್ಮ ಸುಮಾರು ಐದುನೂರು ವರ್ಷಗಳ ಹಿಂದೆ ಶ್ರೀ ವೇಂಕಟೇಶ್ವರನ ತಪೋಫಲವಾಗಿ ಈ ಸ್ವರ್ಣ ಪದ್ಮದಲ್ಲಿ ಸಾಕ್ಷಾತ್ "ಶ್ರೀ ಮಹಾಲಕ್ಷ್ಮಿ" ಅವತರಿಸುತ್ತಾಳೆ. ಪದ್ಮದಲ್ಲಿ ಆವಿರ್ಭವಿಸಿದ ಕಾರಣಕ್ಕೆ ಆಕೆ 'ಪದ್ಮಾವತಿ'ಯೆಂದೂ 'ಅಲ ಮೇಲುಮಂಗ' ಎಂದು ಕರೆಯಲ್ಪಡುತ್ತಾಳೆ.ಆಕೆ ಪುಷ್ಪದ ಮೇಲೆ ಪ್ರಕಾಶಿಸುವ ದಿವ್ಯವನಿತೆ! ಆಕೆಯೇ ಅಲಮೇಲು ಮಂಗ!

ಇವತ್ತೇ ಅಲ್ಲ! ಯಾವತ್ತೂ ಯಾವಾಗಲೂ ಕ್ಷೀರಾಬ್ಧಿ ಕನ್ಯೆಯಾಗಿ, ಜಲನಿವಾಸಿಯಾಗಿ ಅವತರಿಸಿದ ಆ ದೇವಿ ಶ್ರೀ ವೇಂಕಟೇಶ್ವರನ ರಾಣಿಯಾಗಿ ರಾರಾಜಿಸುತ್ತಾಳೆ. ಹೀಗೆ ಕ್ಷೀರಾಬ್ಧಿಕನ್ಯೆಯಾಗಿ, ನೀರಜ ವಾಸಿನಿಯಾಗಿ,ಭೃಗು ಮಹರ್ಷಿ ತನುಜೆಯಾಗಿ, ಭೂಮಿಜೆ (ಸೀತೆ)ಯಾಗಿ ಹೀಗೆ ಅನಂತವಾದ ಕಾಲಕ್ರಮದಲ್ಲಿ ಎಷ್ಟೋ ಬಾರಿ ಅವತರಿಸುತ್ತಾಳೆ.

ಹೀಗೆ ಪರಂಧಾಮನಾದ ಆನಂದನಿಲಯನ ಪಟ್ಟ ದಲಿಸಿ ಶ್ರೀ ಪದ್ಮಾವತಿ ತಾಯಿ ತಿರುಮಲೆಯ ಆನಂದನಿಲಯ ದಲ್ಲಿ ಶ್ರೀನಿವಾಸನ ವಕ್ಷಃಸ್ಥಳದಲ್ಲಿ "ವ್ಯೂಹಲಕ್ಷ್ಮಿ"ಯಾಗಿ ತಿರು ಚಾನೂರು ಕ್ಷೇತ್ರದಲ್ಲಿ 'ಶಾಂತಿನಿಲಯ'ವೆಂಬ ಸ್ವರ್ಣಪೀಠ ದಲ್ಲಿ 'ಪದ್ಮಾವತಿ' 'ಅಲುವೇಲುಮಂಗ' ಎಂಬ ಹೆಸರುಗಳಿಂದ ಅರ್ಚಮೂರ್ತಿಯಾಗಿ ನೆಲೆಗೊಂಡು ಭಕ್ತಿರೆಲ್ಲರಿಗೂ ನೆರಳಾಗಿ ಕೈತುಂಬಾ ಆನಂದವನೀಯುವವಳಾಗಿದ್ದಾಳೆ.

ಇಲ್ಲೊಂದು ಅದ್ಭುತವಾದ ಮಾತು!

ಸೂರ್ಯಸ್ಯ ರಶ್ಮಯೇ ಯದ್ವತ ಊರ್ಮಯಾಶ್ಚಾಂಬುಧೇ ರಿವ
ಸರ್ವೈಶ್ಚರ್ಯ ಪ್ರಭಾವೇನ ಕಮಲಾ ಶ್ರೀಪತೇಃತಥಾ

ಸೂರ್ಯನಿಗೂ-ಸೂರ್ಯಕಿರಣಗಳಿಗೂ,ಸಮುದ್ರನಿಗೂ ಅದರ ಅಲೆಗಳಿಗೂ, ಇರುವ ಬಿಡಲಾರದ ಸಂಬಂಧವೇ ಪರಂ ಧಾಮನಿಗೂ ಶ್ರೀನಿವಾಸನಿಗೂ,ತಿರುಚಾನೂರಿಗೂ-ಪದ್ಮಾ ವತಿಗೂ ಇರುವ ಸಂಬಂಧ.

ಅಂತೆಯೇ ತಿರುಮಲೆಯ ಶ್ರೀನಿವಾಸನ ವಕ್ಷಃಸ್ಥಳದಲ್ಲಿ ನಿತ್ಯವೂ ಸ್ಥಿತಳಾಗಿ,ತಿರುಚಾನೂರಿನ ಅರ್ಚಮೂರ್ತಿಯಾಗಿ ನಿರಂತರವಾಗಿ ಯಾವ ಭಕ್ತರು ಯಾವ ಕಾಲದಲ್ಲಿ ಏನೂ ಕೇಳಿ ದರೂ ಅವೆಲ್ಲವನ್ನು ತೀರಿಸುತ್ತಿರುವ ದಯಾಮಯಿ ಶ್ರೀ ಪದ್ಮಾ ವತಿ ಅಮ್ಮನವರು!

ಗಂಭೀರವಾಗಿದ್ದು ಭಯವನ್ನುಂಟುಮಾಡುವ ಸಮುದ್ರ ರಾಜನ ಕುಮಾರಿಯೇ ಲಕ್ಷ್ಮೀದೇವಿ.ಆದರೂ ಈ ತಾಯಿ ಪ್ರಶಾಂತ ಸ್ವರೂಪಿಣಿಯಾಗಿ ದರ್ಶನವೀಯುತ್ತಿರುವ ದಯಾ ಮಯಿ ಲೋಕಮಾತೆ.ಇನ್ನು ಆಕೆಯೊಂದಿಗೆ ಈ ಸಮುದ್ರದಿಂದ ಕೋರಿಕೆಗಳನ್ನು ತೀರಿಸುವ ಕಾಮಧೇನುವೂ ಹುಟ್ಟಿದೆ. ಕಲ್ಪ ವೃಕ್ಷವು ಸಹಾ ಅವತರಿಸಿದೆ.'ಚಿಂತಾಮಣಿ'ಯೂ ಅವತರಿಸಿದೆ.



ಈ ಮೂರಕ್ಕು ಮಿಗಿಲಾಗಿ ಹೆಚ್ಚು ಮಹಿಮೆಗಳನ್ನು ವರಗಳನ್ನು ಪ್ರಸಾದಿಸುವ ಅಮರವಂದಿತೆಯೆಂದು ಹೆಸರು ಪಡೆದಿರುವ ತಾಯಿ ಅಲಮೇಲುಮಂಗ! ಅಷ್ಟೇ ಅಲ್ಲ ಚಂದ್ರನಿಗೆ ಸೋದರಿಯಾಗಿರುವ ಈ ತಾಯಿ ಅಮೃತಕ್ಕು ಸಹಾ ಮಿಗಿಲಾದವಳಾದ್ದರಿಂದ ಅಂತಹ ತಾಯಿ ಭಕ್ತರಿಗೆ ನೆಮ್ಮದಿಯೊಂದಿಗೆ ಆನಂದವನ್ನು ಹಂಚಿ ಕೊಡುವುದರಲ್ಲಿ ಯಾವುದೇ ಕೊರತೆಯನ್ನುಂಟು ಮಾಡಲಾರಳು.

ಶ್ರೀವೈಕುಂಠದಲ್ಲಿರುವ ಕ್ಷೀರಸಮುದ್ರದಲ್ಲಿ ಆದಿಶೇಷ ನೆಂಬ ಸಹಸ್ರಹೆಡೆಯ ಹೆಬ್ಬಾವಿನ ಮೇಲೆ ತನ್ನ ಸ್ವಾಮಿಯೊಂದಿಗೆ ತೇಲಾಡುತ್ತಿರುವ ಸಿರಿದೇವಿ, ಭೂವೈಕುಂಠವಾದ ತಿರುಮಲೆಯಲ್ಲಿ ಶ್ರೀನಿವಾಸನ ಹೃದಯವೆಂಬ ತೆಪ್ಪದಲ್ಲಿ ತೇಲಾಡುವ ಅಲಮೇಲುಮಂಗ! ಇಂದು, ಇವತ್ತಿನ ದಿನ,ವೈಶಾಖದ ಬಿಸಿ ಸಂಪೂರ್ಣವಾಗಿ ತಗ್ಗದ ಜ್ಯೇಷ್ಠಮಾಸದ ಪೌರ್ಣಮಿಯ ಬೆಳದಿಂಗಳ ರಾತ್ರಿಗಳಲ್ಲಿ ತಂಪಾದ ಪದ್ಮಸರೋವರದ ಪುಣ್ಯಜಲದಲ್ಲಿ ಜಲವಿಹಾರ ಮಾಡುತ್ತಾ ದರ್ಶನವನ್ನೀಯುವುದು ಭಕ್ತರ ಭಾಗ್ಯವದೆಷ್ಟೋ ಎಂತಹುದೋ?

ಜಲನಿವಾಸಿನಿಯಾದ ಅಲಮೇಲುಮಂಗ,ಈ ಕಲಿಯುಗದಲ್ಲಿ ಈ ದಿನಕ್ಕೂ ಸಹ ತನ್ನ ತವರಾದ ಪದ್ಮ ಸರೋವರದ ತಂಪಾದ ಜಲದಲ್ಲಿ ವಿಹರಿಸುತ್ತಾ ನನ್ನನ್ನು ಸಂದರ್ಶಿಸಿರಿ! ನೆಮ್ಮದಿಯಿಂದಿರಿ! ಎಂದು ವರಗಳನ್ನು ನೀಡುತ್ತಿರುವ ಪದ್ಮಾವತಿಯನ್ನು ಕಣ್ಣು ಬಡಿಯದೇ, ಬಿಟ್ಟ ಕಂಗಳಿನಿಂದ ದರ್ಶಿಸೋಣ. ದುಪ್ಪಟ್ಟು ಮುಬ್ಬಟ್ಟು ವರಗಳನ್ನು ಹೊಂದಿ ಹರ್ಷಿಸೋಣ. ಹಾಗೆಯೇ ಈ ಜಗನ್ಮಾತೆ ಪಾಲ್ಗೊಳ್ಳುವ ಜಲವಿಹಾರೋತ್ಸವಗಳನ್ನು ಕುರಿತು ತಿಳಿದುಕೊಳ್ಳೋಣ.

ಜ್ಯೇಷ್ಠಮಾಸದಲ್ಲಿ ಏಕಾದಶಿಯಿಂದ ಹುಣ್ಣಿಮೆಯವರೆಗೆ ಐದು ದಿನಗಳವರೆಗೆ ಜರಗುವ ತೆಪ್ಪೋತ್ಸವಗಳಲ್ಲಿ ಪ್ರತಿನಿತ್ಯ ಸಂಜೆಯ ಸಮಯದಲ್ಲಿ ರುಕ್ಮಿಣಿ, ಸತ್ಯಭಾಮೆ ಸಮೇತ ಶ್ರೀಕೃಷ್ಣನು ಪದ್ಮಸರೋವರದಲ್ಲಿ ತೆಪ್ಪದ ಮೇಲೆ ವಿಹರಿಸುವುದಕ್ಕಾಗಿ ತನ್ನ ದೇವಾಲಯದಿಂದ ಛತ್ರ-ಚಾಮರ, ಬಾಜಾ-ಭಜಂತ್ರಿ ವಾದ್ಯಗಳಿಂದ ಶ್ರೀ ಪೀಠ (ತಿರುಚ್ಚಿ)ದ ಮೇಲೆ ಹೊರಟು ಆಲಯದ ಸುತ್ತೂ ಪ್ರದಕ್ಷಿಣಾಕಾರದಲ್ಲಿ ತಿರುಗುತ್ತಾ ಮೆರವಣಿಗೆಗೈದು ಕೊನೆಗೆ ಸರೋವರ ತಲುಪಿ ತೆಪ್ಪವನ್ನೇರುತ್ತಾನೆ. ಬೀಸಿ ಬರುವ ತಂಗಾಳಿಯಲ್ಲಿ ವಿದ್ಯುದ್ದೀಪಗಳ ಕಾಂತಿಯಲ್ಲಿ ವೇದಘೋಷಗಳ ಮಧ್ಯೆ, ಮಂಗಳವಾದ್ಯಗಳು ಮೊಳಗುತಿರಲು ಅನ್ನಮಯ್ಯ ಕೀರ್ತನೆಗಳನ್ನಾಲಿಸುತ್ತಾ ಪಟ್ಟದರಸಿಯರೊಂದಿಗೆ ಶ್ರೀಕೃಷ್ಣಸ್ವಾಮಿ ಶೋಭಾಯ ಮಾನವಾಗಿ ಅಲಂಕರಿಸಿದ ತೆಪ್ಪದಲ್ಲಿ ಮೂರು ಬಾರಿ ಪ್ರದಕ್ಷಿಣೆ ಹಾಕಿ ವಿಹರಿಸುತ್ತಾರೆ. ಸರೋವರದ ಗೋಡೆಯ ನಾಲ್ಕು ಕಡೆಗಳಿಂದಲೂ ಸಾವಿರಾರು ಜನರು ಶ್ರೀ ಕೃಷ್ಣ ನನ್ನು ದರ್ಶಿಸುತ್ತಾರೆ. ತದನಂತರ ತಿರುಚ್ಚಿಯ ಮೇಲೇರಿ ಸ್ವಾಮಿಯು ತನ್ನ ಆಲಯವನ್ನು ಸೇರಿಕೊಳ್ಳುತ್ತಾನೆ.

ಇನ್ನು ಎರಡನೇಯ ದಿನ, ದ್ವಾದಶಿಯ ಸಾಯಂಕಾಲ ತಿರುಚ್ಚಿಯ ಮೇಲೆ ಶ್ರೀದೇವಿ- ಭೂದೇವಿ ಸಮೇತವಾಗಿ ಶ್ರೀ ಸುಂದರರಾಜಸ್ವಾಮಿ ಮೆರವಣಿಗೆಗೈದು ಬಂದು ಸರೋವರದಲ್ಲಿ ತೆಪ್ಪದಲ್ಲಿ ಮೂರು ಬಾರಿ ಪ್ರದಕ್ಷಿಣೆ ಮಾಡಿ, ಪುಷ್ಪಹಾರಗಳನ್ನು ಪರಾಂ ಬರಿಸಿ ತನ್ನ ಆಲಯವನ್ನು ಸೇರಿಕೊಳ್ಳುತ್ತಾನೆ.

ಮೂರನೇಯ ದಿನವಾದ ತ್ರಯೋದಶಿಯ ರಾತ್ರಿ ಬೆಳದಿಂಗಳನಲ್ಲಿ ಪದ್ಮಾವತಿ ಅಮ್ಮನವರು ತಿರುಚ್ಚಿಯ ಮೇಲೆ ಸರ್ವಾಭರಣಗಳಿಂದ ಪುಷ್ಪಹಾರಗಳಿಂದ ಅಲಂಕೃತಗೊಂಡು ಮೆರವಣಿಗೆ ಗೈಯುತ್ತಾ ಪುಷ್ಕರಿಣಿಗೆ ಹೊರಟು ಬಂದು ತೆಪ್ಪೋತ್ಸವಗಳಲ್ಲಿ ಭಾಗವಹಿಸುತ್ತಾರೆ. ಸರೋವರದಲ್ಲಿ ಮೂರು ಸುತ್ತು ಹಾಕಿ ಭಕ್ತರ ನೀರಾಜನವನ್ನು ಸ್ವೀಕರಿಸಿದ ಬಳಿಕ ತಿರುಚ್ಚಿಯ ಮೇಲೆಯೇ ಆಲಯವನ್ನು ತಿರುಗಿ ಸೇರಿಕೊಳ್ಳುತ್ತಾರೆ.

ಇನ್ನು ನಾಲ್ಕನೇ ದಿನ, ಚತುರ್ದಶಿ ದಿನದ ರಾತ್ರಿ ಬೆಳದಿಂಗಳಲ್ಲಿ ಶ್ರೀ ಪದ್ಮಾವತಿ ಅಮ್ಮನವರು ತಿರುಚ್ಚಿಯ ಮೇಲೆ ವೈಭವದಿಂದ ಮೆರವಣಿಗೆಗೈಯುತ್ತಾ ಸರೋವರದ ನೀರಿನಲ್ಲಿ ವೇದನಾದಗಳಿಂದ, ಭಜಂತ್ರಿ - ಸಂಕೀರ್ತನೆಗಳ ಮಧ್ಯೆ ಐದು ಪ್ರದಕ್ಷಿಣೆಗಳನ್ನು ಹಾಕುತ್ತಾ ಆನಂದವನ್ನೀಯುತ್ತಾಳೆ ಜಲವಿಹಾರ ಪೂರ್ತಿಯಾದ ನಂತರ ಸರೋವರದಿಂದ ಶ್ರೀ ಪದ್ಮಾವತಿದೇವಿ ಬಂಗಾರದ ಆನೆಯ ವಾಹನವನ್ನೇರಿ 'ಗಜಲಕ್ಷ್ಮಿ'ಯಾಗಿ ಭಕ್ತರಿಗೆ ದರ್ಶನವೀಯುತ್ತಾ ಆಲಯವನ್ನು ಸೇರಿಕೊಳ್ಳುತ್ತಾರೆ.

ಇನ್ನು ಐದನೇ ದಿನ ಹುಣ್ಣಿಮೆಯ ದಿನ ಪೂರ್ಣ ಚಂದ್ರನ ಬೆಳಕಿನಲ್ಲಿ ಶ್ರೀ ಪದ್ಮಾವತಿ ಅಮ್ಮನವರು. ತಿರುಚ್ಚಿಯ ಮೇಲೆ ಮೆರವಣಿಗೆಗೆ ಸಹಿತ ಬಂದ ನಂತರ ಸುಂದರವಾಗಿ ಅಲಂಕರಿಸಿರುವ ತೆಪ್ಪವನ್ನು ಆರೋಹಿಸಿ, ಪದ್ಮಸರೋವರದ ತಂಪಾದ ಜಲದಲ್ಲಿ ಐದು ಪ್ರದಕ್ಷಿಣೆಯನ್ನು ಹಾಕಿ ನಯನ ಮನೋಹರವಾಗಿ ದರ್ಶನವೀಯುತ್ತಾರೆ. ವೇದಗಾನ, ಭಜಂತ್ರಿ, ಅನ್ನಮಯ್ಯ ಗೀತಾ ಶ್ರವಣಗಳ ನಡುವೆ ಮಂಗಳ ದಿವ್ಯಾರತಿಗಳನ್ನು ಸ್ವೀಕರಿಸುತ್ತಾರೆ.ಬಳಿಕ ಅಲಮೇಲುಮಂಗ ಪುಷ್ಕರಿಣಿಯಿಂದ



ಬಂಗಾರದ ಗರುಡವಾಹನದ ಮೇಲೆ ಮೇಳ ತಾಳಗಳೊಂದಿಗೆ ಭಕ್ತರ ಕೋರಿಕೆಗಳನ್ನಾಲಿಸುತ್ತಾ ರಥಬೀದಿಗಳಲ್ಲಿ ಹೊರಟು ಆಲಯ ವನ್ನು ಪ್ರವೇಶಿಸುವುದರೊಂದಿಗೆ ಐದು ದಿನಗಳ ಜಲವಿಹಾರೋತ್ಸವ ಗಳು ಘನವಾಗಿ ಸಮಾಪ್ತಗೊಳ್ಳು ತ್ತವೆ.

ಹೀಗೆ ತುಂಬು ಹುಣ್ಣಿಮೆಯ ಬೆಳದಿಂಗಳ ಜಲವಿಹಾರದಲ್ಲಿ ಭಕ್ತ ರೆಲ್ಲರಿಗೂ ಆನಂದವನ್ನಿತ್ತ ಚಂದ್ರ ಸಹೋದರಿಯಾದ ಶ್ರೀ ಪದ್ಮಾವತಿ ದೇವಿಯನ್ನು ಕಣ್ಣಾರೆ ಕಂಡು ಮನಸಾರೆ ಹೀಗೆ ಪ್ರಾರ್ಥಿಸೋಣ.



ಅಜ್ಞಾನತಮಿರ ಹರತು, ಶುದ್ಧ ಜ್ಞಾನ ಪ್ರಕಾಶಿಕಾ
ಸರ್ವೇಶ್ವರ ಪ್ರದಮೇಸ್ತು, ತ್ವತ್ಕಲಾಮಯಸಂಸ್ಥಿತಾ

ಸ್ವಚ್ಛವಾದ ಬೆಳದಿಂಗಳ ಬೆಳಕಲ್ಲಿ ವಿಹರಿಸುತ್ತಾ, ಅಜ್ಞಾನದ ಕತ್ತಲೆ ಯನ್ನು ತೊಲಗಿಸಿ, ನಿರ್ಮಲಜ್ಞಾನವೆಂಬ ಬೆಳಕನ್ನು ಬೆಳಗಿಸಿ ಸಮಸ್ತ ಸಂಪದಗಳನ್ನು ಪ್ರಸಾದಿಸಬಲ್ಲ ಓ ಅಲಮೇಲುಮಂಗಾ! ನಿನ್ನ ತೇಜಸ್ಸಿ ನಲ್ಲಿನ ಒಂದೇ ಒಂದು ಕಿರಣವನ್ನು ನನ್ನಲ್ಲಿ ಪ್ರವೇಶಿಸುವಂತೆ ಅನುಗ್ರಹಿಸು ತಾಯೇ!

ಓಂ ಶ್ರೀಯೈ ನಮಃ

## ಶ್ರೀ ಸುಂದರರಾಜಸ್ವಾಮಿ ಅವತಾರೋತ್ಸವ

ಶ್ರೀ ಪದ್ಮಾವತಿ ಅಮ್ಮನವರ ಆಲಯದ ಪ್ರಾಂಗಣದಲ್ಲೇ ದಕ್ಷಿಣಕ್ಕೆ ಪೂರ್ವಾಭಿಮುಖವಾಗಿ ಶ್ರೀ ಸುಂದರರಾಜಸ್ವಾಮಿ ಆಲಯವಿದೆ. 15-16 ನೇ ಶತಮಾನದ ಮೊದಲಿಗೂ ಪ್ರಾಚೀನವಾದ ಈ ದೇವಾಲಯದ ಗರ್ಭ ಗುಡಿಯಲ್ಲಿ ತಿರುಮಲೆಯ ಶ್ರೀ ವೇಂಕಟೇಶ್ವರ ಸ್ವಾಮಿಯನ್ನು ನೆನಪಿಸುವ ಶ್ರೀ ಸುಂದರರಾಜಸ್ವಾಮಿಯು ಎಂಟು ಅಡಿಯೆತ್ತರದ ಶಿಲಾ ವಿಗ್ರಹಮೂರ್ತಿ ಕಂಡು ಬರುತ್ತದೆ. ನೇರವಾದ ಬೆಳ್ಳನೆಯ ನಾಮಗಳಿಂದ, ಶಂಖಚಕ್ರಗಳಿಂದ ವರಮುದ್ರಾ ಹಸ್ತಗಳಿಂದ, ಚತುರ್ಭುಜನಾದ ಅತ್ಯಂತ ಸುಂದರಮೂರ್ತಿಯಾಗಿ ಸಾರ್ಥಕ ನಾಮಧೇಯನಾಗಿ ವಿರಾಜಿಸುತ್ತಿರುವ ಶ್ರೀ ಸುಂದರರಾಜಸ್ವಾಮಿಯ ಎರಡೂ ಕಡೆಯಲ್ಲಿ ಶ್ರೀದೇವಿ, ಭೂದೇವಿಯರ ಮೂಲ ಮೂರ್ತಿಗಳು ದರ್ಶಿಸುತ್ತವೆ. ಎಷ್ಟೋ ವರ್ಷಗಳ ನಂತರ ಈ ಆಲಯ ಮಹಂತರ ಪಾಲನೆಯಲ್ಲಿ 1906 ಜ್ಯೇಷ್ಠ ಮಾಸದಲ್ಲಿ ಉತ್ತರಾಭಾದ್ರ ನಕ್ಷತ್ರದ ದಿನದಂದು ಜೀರ್ಣೋದ್ಧಾರ ಮಾಡಲಾಗಿದೆ. ಆ ದಿನದಂದು ಅವತಾರೋತ್ಸವದ ಹೆಸರಿನಲ್ಲಿ ಮೂರು ದಿನಗಳವರೆಗೆ ಗರ್ಭಾಲಯದ ಶಿಖರದ ಮೇಲೆ ಬಂಗಾರ ಕಳಸದ ಸ್ಥಾಪನೆ ಮಹಾಕುಂಭಾಭಿಷೇಕ ನಿರ್ವಹಿಸಲಾಗುತ್ತದೆ. ಮತ್ತೆ ಒಂದು ವರುಷದ ಬಳಿಕ 2006 ಜೂನ್ (ಜ್ಯೇಷ್ಠ) ಮಾಸದಲ್ಲಿ ಉತ್ತರಾಭಾದ್ರ ನಕ್ಷತ್ರದಂದು ಕೊನೆಗೊಳ್ಳುವಂತೆ ಮೂರು ದಿನಗಳವರೆಗೆ "ಮಹಾಅವತಾ ರೋತ್ಸವಗಳ"ನ್ನು ನಿರ್ವಹಿಸಲಾಗುತ್ತದೆ. ಆ ದಿನದಿಂದ ಪ್ರತಿವರ್ಷ ಜ್ಯೇಷ್ಠಮಾಸದಲ್ಲಿ ಮೂರು ದಿನಗಳವರೆಗೆ "ವಾರ್ಷಿಕ ಅವತಾರೋತ್ಸವಗಳು" ಜರುಗುತ್ತಿರುವುದು ವಿಶೇಷವೇ ಈ ಸಂವತ್ಸರ 2019 ಜೂನ್ 23 ರಿಂದ 25 ರ ವರೆಗೆ ಮೂರು ದಿನಗಳ ವರೆಗೆ ಶ್ರೀ ಸುಂದರರಾಜಸ್ವಾಮಿಯವರಿಗೆ ವಾರ್ಷಿಕ ಅವತಾರೋತ್ಸವಗಳು ನಿರ್ವಹಿಸಲಾಗುತ್ತದೆ.

ಈ ಮೂರೂ ದಿನಗಳೂ ಸ್ನಪನ-ತಿರು ಮಂಜನ,ಅರ್ಚನೆ,ನಿವೇದನೆಗಳೊಂದಿಗೆ ಸಾಯಂ ಕಾಲದಲ್ಲಿ ಮೆರವಣಿಗೆಗಳನ್ನು ನಿರ್ವಹಿಸಲಾಗು ತ್ತದೆ. ಮೊದಲ ದಿನ ಸಂಜೆ ಶ್ರೀದೇವಿ - ಭೂದೇವಿ ಸಮೇತ





ಶ್ರೀ ಸುಂದರರಾಜಸ್ವಾಮಿ ದೊಡ್ಡಶೇಷ ವಾಹನದಲ್ಲಿ, ಎರಡನೇ ಮೂರನೇ ದಿನ ಸಂಜೆ ಶ್ರೀ ಸುಂದರ ರಾಜಸ್ವಾಮಿ ಯೊಬ್ಬರೇ ಕ್ರಮೇಣ ಹನುಮದ್ವಾಹನ, ಗರುಡವಾಹನಗಳಲ್ಲಿ ಮೆರವಣಿಗೆ ಹೊರಡುತ್ತಾರೆ.

**ಶ್ರೀ ಕೃಷ್ಣಸ್ವಾಮಿ ಆಲಯ**

ಶ್ರೀ ಪದ್ಮಾವತಿಮಾತೆಯ ಆಲಯಕ್ಕೆ ಹೊಂದಿಕೊಂಡು ದಕ್ಷಿಣಕ್ಕೆ ಶ್ರೀ ಬಲರಾಮ ಕೃಷ್ಣರ ಆಲಯವಿದೆ. ಕುರುಕ್ಷೇತ್ರ ಸಂಗ್ರಾಮದ ಕಾಲದಲ್ಲಿ ಬಲರಾಮನು ಯಾತ್ರೆ ಮಾಡುತ್ತಾ, ಇಲ್ಲಿನ ಶುಕ ಮಹರ್ಷಿಯ ಆಶ್ರಮಕ್ಕೆ ಬಂದಿದ್ದಾನೆ. ಸಮರದ ನಂತರ ಅಣ್ಣನನ್ನು ಹುಡುಕುತ್ತಾ ಶ್ರೀ ಕೃಷ್ಣನೂ ಸಹಾ ಇಲ್ಲಿಗೆ ಬಂದು ಸೇರಿದ್ದಾನೆ. ಶ್ರೀ ಶುಕಮಹರ್ಷಿ ಅವರಿಬ್ಬರಿಗೂ ಆತಿಥ್ಯವನ್ನು ನೀಡಿ ಅದಕ್ಕೆ ಕುರುಹಾಗಿ ಇಬ್ಬರನ್ನು ಇಲ್ಲಿಯೇ ನೆಲಗೊಳ್ಳಬೇಕೆಂದು ಪ್ರಾರ್ಥಿಸಿದ್ದಾನೆ. ಈ ಘಟ್ಟವನ್ನು ಸ್ಮರಿಸುತ್ತಾ ನೆಲೆನಿಂತಿರುವ ಅತಿ ಪ್ರಾಚೀನವಾದ ಶ್ರೀಬಲರಾಮ ಕೃಷ್ಣರ ಸನ್ನಿಧಿ ಈ ದೇವಾಲಯ! ಈ ಗುಡಿಯಲ್ಲಿ ರುಕ್ಮಿಣಿ ಸತ್ಯಭಾಮೆಯರ ಸಮೇತ ಶ್ರೀ ವೇಣುಗೋಪಾಲ ಸ್ವಾಮಿಯನ್ನು ಉತ್ಸವ ಮೂರ್ತಿಯಾಗಿ ನೆಲೆಗೊಂಡಿರುವ ಈ ಸ್ವಾಮಿಯವರು ಪ್ರತಿನಿತ್ಯ ಜರಗುವ ತೆಪ್ಪೋತ್ಸವದಲ್ಲಿ ಪಾಲ್ಗೊಂಡು ನಯನ ಮನೋಹರವಾಗಿ ಜಲವಿಹಾರ ಮಾಡುತ್ತಾರೆ.





## ತಿರುಮಲೆ ತಿರುಪತಿ ದೇವಸ್ಥಾನಗಳು

## 'ಸಪ್ತಗಿರಿ' ಸ್ವರ್ಣೋತ್ಸವ ಸಂಚಿಕೆಯ ರಚನೆಗಳಿಗೆ ಆಹ್ವಾನ!!

ತಿರುಮಲೆ ತಿರುಪತಿ ದೇವಸ್ಥಾನವು ಆಧ್ಯಾತ್ಮಿಕ ಸಚಿತ್ರಮಾಸ ಪತ್ರಿಕೆ "ಸಪ್ತಗಿರಿ". ಕಲಿಯುಗ ಪ್ರತ್ಯಕ್ಷ ದೈವವಾದ ಶ್ರೀ ವೇಂಕಟೇಶ್ವರ ಸ್ವಾಮಿಯ ವೈಭವವನ್ನು, ತಿರುಮಲೆ ಕ್ಷೇತ್ರದ ದಿವ್ಯತ್ವವನ್ನು ಪ್ರತಿ ತಿಂಗಳು ಪಾಠಕರಿಗಾಗಿ "ಸಪ್ತಗಿರಿ"ಯು ನೀಡುತ್ತಿದೆ. ಆರು ಭಾಷೆಗಳಲ್ಲಿ ಪ್ರಚುರಣೆಗೊಳ್ಳುತ್ತಿರುವ ಆಧ್ಯಾತ್ಮಿಕ ಧಾರ್ಮಿಕ ಪತ್ರಿಕೆಗಳಲ್ಲಿ ಒಂದಾಗಿದೆ. ಈ ಪತ್ರಿಕೆಯು ಜಿಜ್ಞಾಸೆಯುಳ್ಳವರಿಗೆ,ಮಹಿಳೆಯರಿಗೆ, ಬಾಲರರಿಗೆ ... ಹೀಗೆ ತಾರತಮ್ಯವಿಲ್ಲದೆ ಎಲ್ಲರಿಗೂ ಉಪಯುಕ್ತವಿರುವ ಪತ್ರಿಕೆ ಇದು. "ಸಪ್ತಗಿರಿ" ಪಾಠಕರೆಲ್ಲರ ಗೌರವವನ್ನು ಪಡೆದಿದೆ. ಕಾಲ ಪ್ರವಾಹದಲ್ಲಿ ಪುರೋಭಿವೃದ್ಧಿಯ ಕಡೆಗೆ 50 ನೇ ವರ್ಷದೊಳಗೆ ಪ್ರವೇಶಿಸುತ್ತಿದೆ. ಈ ಸಂದರ್ಭವಾಗಿ "ಸಪ್ತಗಿರಿ" ಮಾಸಪತ್ರಿಕೆಯನ್ನು ಒಂದು ಪ್ರತ್ಯೇಕ ಸಂಚಿಕೆಯಾಗಿ ಪ್ರಚುರಿಸಬೇಕೆಂದುಕೊಳ್ಳುತ್ತಿದೆ ಸಪ್ತಗಿರಿ. ಪಾಠಕರಿಂದ ಸಪ್ತಗಿರಿ ಮಾಸಪತ್ರಿಕೆಯ ಬಗ್ಗೆ ತಮ್ಮ ಅನುಭೂತಿಯನ್ನು ತಮ್ಮ ರಚನೆಗಳ ರೂಪದಲ್ಲಿ ಕಳಿಸಬೇಕಾಗಿ ಕೋರಲಾಗಿದೆ. ಅದನ್ನು ಪರಿಶೀಲಿಸಿ "ಸಪ್ತಗಿರಿ"ಯಲ್ಲಿ ಪ್ರಚುರಿಸಲಾಗುತ್ತದೆ.

**ನಿಮ್ಮ ರಚನೆಗಳನ್ನು ಅಂಚೆ ಮೂಲಕ ಕಳುಹಿಸಬೇಕಾದ ವಿಳಾಸ :**

ಪ್ರಧಾನ ಸಂಪಾದಕರು, ಸಪ್ತಗಿರಿ ಕಾರ್ಯಾಲಯ, ತಿ.ತಿ.ದೇ., ಪ್ರೆಸ್ ಕಾಂಪೌಂಡ್, ಕೆ.ಟಿ. ರಸ್ತೆ , ತಿರುಪತಿ - 517507.

ಕನ್ನಡದಲ್ಲಿ ಡಿ.ಟಿ.ಪಿ. ಮಾಡಿ ಮೇಯಿಲ್ ಮುಖಾಂತರ ಕಳುಹಿಸುವವರು ಅನು ಫಾಂಟ್ಸ್(ಅಥವಾ) ಎಂ.ಎಸ್. ವರ್ಡ್‌ನಲ್ಲಿ ಯೂನೀಕೋಡ್‌ಫಾಂಟ್‌ನಲ್ಲಿ ಟೈಪ್ ಮಾಡಿದ ಫೈಲ್ ಅನ್ನು ಪಿ.ಡಿ.ಎಫ್. ಮಾಡಿ **kannadasapthagiri50years@gmail.com** ಎನ್ನುವ ಮೇಯಿಲ್‌ಗೆ ಕಳುಹಿಸಬೇಕಾಗಿ ಕೋರಲಾಗಿದೆ.

- ಪ್ರಧಾನ ಸಂಪಾದಕರು.

ನಮ್ಮ ದೇವಾಲಯ

# ಶ್ರೀ ಪ್ರಸನ್ನ ವೆಂಕಟೇಶ್ವರ ಸ್ವಾಮಿಯವರ ಆಲಯ

- ಮೂಲ. ಶ್ರೀಮತಿ. ಪಿ. ಲಲಿತಾ ಕೃಷ್ಣಮೂರ್ತಿ
- ಅನುವಾದ. ಶ್ರೀಮತಿ. ಎಸ್. ಸುರೇಖ

ಅಪ್ಪಲಾಯಗುಂಟದಲ್ಲಿ ಶ್ರೀ ಪ್ರಸನ್ನ ವೆಂಕಟೇಶ್ವರ ಸ್ವಾಮಿ ಸಾವಿರಾರು ಕೈಗಳಿಂದ ಭಕ್ತರಿಗೆ ಅನೇಕ ಕಾರ್ಯಗಳನ್ನು ನೆರವೇರಿಸುತ್ತಿರುವ ಅಭಯಹಸ್ತದಿಂದ ಭಕ್ತರಿಗೆ ದರ್ಶನವನ್ನು ನೀಡುತ್ತಿರುವುದು ತುಂಬಾ ವಿಶೇಷ. ಭಕ್ತರ ಪಾಲಿಗೆ ತಿರುಮಲೆ ಶ್ರೀವೆಂಕಟೇಶ್ವರಸ್ವಾಮಿ. ತಿರುಪತಿಗೆ 15 ಕಿ.ಮೀ ದೂರದಲ್ಲಿರುವ ಬೆಟ್ಟದ ನಡುವೆ,ಸುತ್ತು ಹಚ್ಚ ಹಸಿರಿನ ಹೊಲಗದ್ದೆಗಳ ನಡುವೆ,ದೊಡ್ಡ ತಾವರೆ ಕುಂಟೆಯಂತಹ ಆಹ್ಲಾದಕರವಾದ ಪರಿಸರ ವಾತಾವರಣದಲ್ಲಿ ನೆಲಸಿದ ಗ್ರಾಮ ಅಪ್ಪಲಾಯಗುಂಟ.

## ಸ್ಥಳಪುರಾಣ

ಕಲಿಯುಗ ಪ್ರಾರಂಭದಲ್ಲಿ ಸುಮಾರು 5000 ವರ್ಷಗಳ ಕೆಳಗೆ ನಾರಾಯಣವನವನ್ನು ಪರಿಪಾಲಿಸುವ ಆಕಾಶ ರಾಜನ ಮಗಳು ಪದ್ಮಾವತಿಯನ್ನು ಪರಿಣಯವಾಗಿ, ತಿರುಮಲೆಗೆ ಹೋಗುವ ಮುನ್ನ ಶ್ರೀ ವೆಂಕಟೇಶ್ವರಸ್ವಾಮಿ ಪದ್ಮಾವತಿ ಸಮೇತನಾಗಿ ಅಪ್ಪಲಾಯಗುಂಟ ಸಮೀಪದಲ್ಲಿ ಬೆಟ್ಟಗಳ ನಡುವೆ, ವಿಹರಿಸಿದ್ದಾರೆ. ಸ್ವಲ್ಪಕಾಲದ ನಂತರ ಅಲ್ಲಿರುವ ಯೋಗಬೆಟ್ಟದಲ್ಲಿ ಸಿದ್ಧಯ್ಯ ಎನ್ನುವ ಯೋಗಿ ಶ್ರೀ ಸ್ವಾಮಿಯವರ ಬಗ್ಗೆ ತಪಸ್ಸು ಮಾಡಿದನು. ಆತನ ತಪಸ್ಸಿಗೆ ಮೆಚ್ಚಿ ಶ್ರೀ ವೆಂಕಟೇಶ್ವರನು ಪ್ರತ್ಯಕ್ಷವಾಗಿ ದರ್ಶನವನ್ನು ನೀಡಿದರು. ಆ ಯೋಗಿಯ ಕೋರಿಕೆಯ ಮೇಲೆ ಅಂದಿನಿಂದ ಸ್ವಾಮಿಯವರು ಆ ಬೆಟ್ಟದ ಕೆಳಗೆ ಪ್ರಸನ್ನ ವೆಂಕಟೇಶ್ವರ ಸ್ವಾಮಿಯಾಗಿ ನೆಲಸಿದನು. ಅಂದಿನಿಂದ ಯೋಗಿಯ ಬೆಟ್ಟ ಇಂದು ವೇಮುಲಕೊಂಡವಾಗಿ ಕರೆಯಲ್ಪಟ್ಟಿದೆ.

ಒಂದು ಸಾರಿ ಅಪ್ಪಲಯ್ಯ ಎನ್ನುವ ಯಾತ್ರಿಕನು ತಿರುಮಲೆಗೆ ಹೋಗುತ್ತಾ ಪ್ರಸುತ್ತ ಅಪ್ಪಲಾಯಗುಂಟ ಇದ್ದ ಕಡೆ ಸ್ವಲ್ಪ ಹೊತ್ತು ವಿಶ್ರಮಿಸಿದನು. ನಂತರ ನಿದ್ರೆಯಿಂದ ಎದ್ದು ತಿರುಮಲೆಗೆ ಹೋಗುತ್ತಾ,ತನ್ನ ಹತ್ತಿರ ಇದ್ದ ಹಣದ ಚೀಲವನ್ನು ಅಲ್ಲಿಯೇ ಮರೆತು ಹೋದರಂತೆ.ದಾರಿಯಲ್ಲಿ 'ಜ್ಞಾಪಕ ಬಂದು ಸ್ವಾಮಿ! ಏಡುಕೊಂಡಲವಾಡ! ನನ್ನ ಹಣದ ಚೀಲ ಸಿಕ್ಕಿದರೆ ಪ್ರಜೆಗಳ ಯೋಗ್ಯಕ್ಕೆ ಶಾಶ್ವತಕಾರ್ಯಗಳು ಅಲ್ಲಿ ಮಾಡುತ್ತೇನೆಂದು ಹರಕೆ ಹೊತ್ತನು. ತಾನು ಮಲಗಿದ ಸ್ಥಳದಲ್ಲಿಯೇ ಹಣದ ಚೀಲವು ಯಥಾಸ್ಥಿತಿಯಲ್ಲಿ ದೊರಕಿತು. ಅದರಲ್ಲಿ ಪ್ರಸನ್ನ ವೆಂಕಟಾಚಲಪತಿಗೆ ಎದುರಾಗಿ ಭೂಮಿಯನ್ನು ಹಗೆಸಿ ಒಂದು ಗುಂಟವನ್ನು ತೆಗೆಸಿದನು. ಆದು ಅಪ್ಪಲಯ್ಯ ತೆಗೆಸಿದ ಗುಂಟ ಆದ್ದರಿಂದ 'ಅಪ್ಪಲಯ್ಯಗುಂಟ'ಎಂದು ಕರೆಯಲ್ಪಟ್ಟಿತು. ಕಾಲ ಕ್ರಮೇಣ ಜನವ್ಯವಹಾರದಲ್ಲಿ 'ಅಪ್ಪಲಾಯಗುಂಟ' ಎಂದು ಕರೆಯಲ್ಪಡುತ್ತದೆ.

ಮತ್ತೊಂದು ಕಥನವೇನೆಂದರೆ....

ಪೂರ್ವ ಆ ಊರಿನ ಗ್ರಾಮಸ್ಥರು ಸ್ವಾಮಿಯವರ ಆಲಯ ಪಕ್ಕದಲ್ಲಿ ಒಂದು ಕೆರೆಯನ್ನು ಕೆತ್ತಿಸಬೇಕೆಂದು ಮುಂದೆ ಬಂದರು! ಕೆಲಸ ಮೊದಲು ಮಾಡಿದಾಗಿನಿಂದ ಕೆಲಸದವರಿಗೆ ಆ ದಿನದ ಕೂಲಿ ಆ ದಿನವೇ ನೀಡುತ್ತಿದ್ದರಂತೆ. ಹೀಗೆ ಸಾಲ ಇಲ್ಲದೆ ಕೊನೆಯವರೆಗೂ ಆ ಕೆರೆಯನ್ನು ಹಗೆಯಲಾಯಿತು! ಹೀಗೆ ಸಾಲವನ್ನು ಮಾಡದೇ ಕೆರೆಯನ್ನು ಹಗೆಸಲಾದ ಕಾರಣ 'ಅಪ್ಪುಲೆನಿಗುಂಟ' ಎಂದು ಕರೆಯಲ್ಪಟ್ಟಿತು. ನಂತರ,ಜನವ್ಯವಹಾರದಲ್ಲಿ ಅಪ್ಪುಲೇನಿಗುಂಟ ಹೋಗಿ ಅಪ್ಪಲಾಯಗುಂಟವಾಗಿ ಕರೆಯಲ್ಪಟ್ಟು ಕೊನೆಗೆ ಆ ಹಳ್ಳಿಗೆ ಅದೇ ಹೆಸರು ಸ್ಥಿರವಾಯಿತು.





ಮೇಲೆ ಹೇಳಿದ ಎರಡು ಕಥನದಲ್ಲಿ ಎರಡನೆಯದು ಸತ್ಯವೆಂದು ಹೇಳಬಹುದು. ಹೇಗೆಂದರೆ ಪ್ರಾಚೀನಕವಿಗಳ ಬರವಣಿಗೆ ಯಲ್ಲಿ, ಶಾಸನದಲ್ಲಿ, 'ಅಪ್ಪುಲೇನಿಗುಂಟ' ಎನ್ನುವ ಹೆಸರು ಸಂಸ್ಕೃತೀಕರಿಸಿ 'ಅನೃಣ ಸರೋವರ'ಎನ್ನುವ ಹೆಸರಿನಿಂದ ಪ್ರಯೋ ಗಿಸಲಾಗಿದೆ.

**ಚರಿತ್ರೆ ವಿಶೇಷಗಳು**

ಸುಮಾರು ಸಾವಿರವರ್ಷಗಳ ಮೇಲೆ ಚಾರಿತ್ರಿಕ ಪ್ರಸಿದ್ಧಿ ಹೊಂದಿದ ಕಾರ್ವೇಟಿನಗರ ಪ್ರಭುವಿನ ಪಾಲನೆಯಲ್ಲಿ ಈ ಅಪ್ಪಲಾಯ ಗುಂಟ ಗ್ರಾಮವು ಇದ್ದ ಹಾಗೇ ಶಾಸನಾಧಾ ರಾಗಲು ಸ್ಪಷ್ಟವನ್ನು ಮಾಡುತ್ತಿದೆ. ಇವರ ರಾಜ್ಯಕ್ಕೆ ವಾಯುವ್ಯ ದಿಕ್ಕಿನಲ್ಲಿ, ದಕ್ಷಿಣದಿಕ್ಕಿನಲ್ಲಿ ಉತ್ತರಾರ್ಕಾಡು, ಪೂರ್ವ ದಿಕ್ಕಿನಲ್ಲಿ ಚೆಂಗಲ್ಪಟ್ಟು ಜಿಲ್ಲಾ, ಈಶಾನ್ಯದಿಕ್ಕಿನಲ್ಲಿ ಶ್ರೀಕಾಳಹಸ್ತಿ ರಾಜ್ಯವು ವಿಸ್ತರಿಸಲಾಯಿತು. ಅಂದರೆ ತಿರು ಮಲೆ,ತಿರುಚಾನೂರು,ನಾಗಲಾಪುರಂ, ನಾರಾ ಯಣವರಂ,ತಿರುತ್ತಣಿ,ಷೋಲಿಂಗರ್ ಅನೇಕ ಆಲಯಗಳು, ಕ್ಷೇತ್ರಗಳು ಇನ್ನೂ 900 ಗ್ರಾಮ ಗಳು ಇವರ ಆಳ್ವಿಕೆಯಲ್ಲಿ ಇದ್ದ ಚರಿತ್ರೆ ತಿಳಿಸುತ್ತದೆ. ಅಷ್ಟೇ ಅಲ್ಲದೆ ತಿರುಮಲೆ, ತಿರುಪತಿ, ತಿರುಚಾನೂರು ಅಪ್ಪಲಾಯಗುಂಟ ಆಲಯ ಉತ್ಸವಗಳ ಮೆರವಣಿಗೆಯಲ್ಲಿ ಕಾರ್ವೇಟಿನಗರ ಪ್ರಭುಗಳು ಪ್ರಧಾನ ಪಾತ್ರವಹಿಸಿದ್ದಾರೆ. ಅವರು ತಿರುಮಲೆ ಶ್ರೀ ಸ್ವಾಮಿಯವರಿಗೆ ಒಂದು ರತ್ನಕಿರೀಟ, ಸೂರ್ಯ ಕಠಾರಿ ಎನ್ನುವ ನಂದಕಖಡ್ಗಾವನ್ನು ಸಮರ್ಪಿಸಲಾಯಿತು ಎಂದು ತಿಳಿಯುತ್ತದೆ.

ಕಾರ್ವೇಟಿ ನಗರ ಪ್ರಭುವಿನಲ್ಲಿ ಕಟಾರಿ ಸಾಳ್ವಮಾಕರಾಜ ಶ್ರೀ ವೆಂಕಟ ಪೆರುಮಾಳ್‌ರಾಜು ಅತ್ಯಂತ ಪ್ರಸಿದ್ಧನು.ಶ್ರೀ ವೆಂಕಟೇಶ್ವರಸ್ವಾಮಿಯ ಪರಮ ಭಕ್ತನು. ಈ ಪ್ರಭುವು ಅಪ್ಪಲಾಯಗುಂಟ ಪ್ರಸನ್ನ ವೆಂಕಟೇಶ್ವರ ಸ್ವಾಮಿಯ ವರಿಗೆ ಎಷ್ಟೋ ಮಣಿಮಾಣಿಕ್ಯಗಳು ಕೊಟ್ಟನು, ಉತ್ಸವಗಳು, ನಿರ್ವಹಿಸಿ ದನು. ಈ ವೆಂಕಟಪೆರುಮಾಳು ರಾಜು 1750 ರ ಸಂವತ್ಸರದಲ್ಲಿ ಕಾಣಿಕೆ ಯಾಗಿ ಸಮರ್ಪಿಸಿದ ಎರಡು ದೀಪಸ್ತಂಭಾಗಳು ಸುಮಾರು 5 ಅಡಿಗಳ ಎತ್ತರ ಇದೆ.ಇವತ್ತಿಗೂ ಅಪ್ಪಲಾಯಗುಂಟ ಆಲಯದಲ್ಲಿ ನೋಡಬಹುದು. ಇದು ಹಾಕಿಸಿದ ಶಾಸನದ ಎಡಗಡೆ ಖಡ್ಗ ಗುರುತ್ತಿನ, ಆ ಖಡ್ಗಾಕ್ಕೆ ಎರಡು ಕಡೆಯಲ್ಲಿಯೂ ಸೂರ್ಯಚಂದ್ರ ಮುದ್ರೆಗಳು, ಖಡ್ಗದ ಒಳಗೆ ವರಾಹಾಮುದ್ರೆ ಚಿತ್ರಿಸಲಾಗಿದೆ.

ಈ ಮಾಕರಾಜು ವೆಂಕಟಪೆರುಮಾಳುರಾಜು ಕವಿ, ಪಂಡಿತರೇ ಅಲ್ಲದೆ ಪೋಷಕನು ಕೂಡ. ಇವನು ವಿಜಯನಗರ ಪ್ರಭುಗಳ ಮಾದರಿಯಾಗಿ ಅಷ್ಟ ದಿಗ್ಗಜರನ್ನು, ಕವಿಗಳನ್ನು ತನ್ನ ಆಸ್ಥಾನದಲ್ಲಿ ಪೋಷಿಸಿದರು.ಅವರಲ್ಲಿ ಸಾರಂಗ ಪಾಣಿ ಪ್ರಸಿದ್ಧ ವಾಗ್ಗೇಯಕಾರನು.ಈತ ಹಾಡಿದ ಹಾಡುಗಳು ಸಾರಂಗಪಾಣಿ ಪದಗಳಾಗಿ ಪ್ರಸಿದ್ಧಿ ಹೊಂದಿದೆ.ಈ ಸಾರಂಗಪಾಣಿ ಪದಗಳಲ್ಲಿ ಅಪ್ಪಲಾಯ ಗುಂಟ ಪ್ರಸನ್ನ ವೆಂಕಟೇಶ್ವರಸ್ವಾಮಿಯವರ ಸ್ಥಳ ಮಾಡಿ ಕೊಂಡನು. ತಾಳ್ಳಪಾಕ ಅನ್ನಮಾಚಾರ್ಯರ ಮೊಮ್ಮಗ ಚಿನತಿರುಮಲಾಚಾರ್ಯರು ಕೀರ್ತಿಸಿದ ಪ್ರಸನ್ನ ವೆಂಕಟೇಶ್ವರನ ಕೀರ್ತನೆಗಳಲ್ಲೂ ಸ್ವಾಮಿಯ ಪಕ್ಕದಲ್ಲಿ ಅಲಮೇಲುಮಂಗ, ಗೋದಾಲಕ್ಷ್ಮಿ ಆಲಯವಿದೆ. ಅಷ್ಟೇ ಅಲ್ಲ 'ಪ್ರಸನ್ನ ವೆಂಕ ಟಾಚಲಪತಿ' ಎನ್ನುವ ಹೆಸರು ಇನ್ನು ಎಲ್ಲಿಯೂ ಕಂಡು ಬರುವುದಿಲ್ಲ. ಇತ್ತೀ ಚಿನ ಕಾಲದವರೆಗೆ ಅಂದರೆ ಆಂಗ್ಲೀಯರ ಕಾಲದವರೆಗೆ ಈ ಅಪ್ಪಲಾಯ ಗುಂಟ ಆಲಯಕ್ಕೆ ಕಾರ್ವೇಟಿನಗರ ರಾಜರುಗಳು ಧರ್ಮಕರ್ತರಾಗಿದ್ದರು. ಸ್ವಾತಂತ್ರದ ನಂತರ ಉಮ್ಮಡಿ ಮದ್ರಾಸು ರಾಷ್ಟ್ರದಲ್ಲಿ ಸ್ವಲ್ಪದ ಕಾಲದವರೆಗೆ



ಈ ಆಲಯವು ತಿರುತ್ತಣಿ ಆಲಯ ನಿರ್ವಹಣೆಯಲ್ಲಿತ್ತು. ಆಂಧ್ರಪ್ರದೇಶ ಏರ್ಪಾಟಾದ ನಂತರ ಆಂಧ್ರಪ್ರದೇಶ್ ದೇವಾದಾಯ ಶಾಖೆಯ ಅಧೀನದಲ್ಲಿದೆ. ಅನಂತರ 1988 ರಲ್ಲಿ ಸೆಪ್ಟೆಂಬರ್ 23 ನೇ ದಿನಾಂಕದಂದು ತಿರುಮಲೆ ತಿರುಪತಿ ದೇವಸ್ಥಾನಗಳ ಅಧೀನದಲ್ಲಿ ಸೇರಿಸಲಾಗಿದೆ.

**ಆಲಯ ನಿರ್ಮಾಣ ಶೈಲಿ**

ಪೂರ್ವಾಭಿಮುಖವಾಗಿ ನಿರ್ಮಿಸಲಾದ ಈ ಆಲಯದ ಸುತ್ತು ಇಟ್ಟಿಕೆಗಳಿಂದ ವಿಶಾಲವಾದ ಪ್ರಾಕಾರವು ಇದೆ. ಪ್ರವೇಶ ದ್ವಾರದಲ್ಲಿ ಮಹಾದ್ವಾರಗೋಪುರ ಕಟ್ಟುವುದಕ್ಕೆ ಸುಲಭವಾಗಿ ನಿರ್ಮಿಸಲಾದ ಕಲ್ಲಿನ ಸ್ಥೂಪ ಮಾತ್ರವೇ ಹಾಗೆಯೇ ನಿಂತು ಹೋಗಿದೆ. ಪ್ರವೇಶದ್ವಾರ ದಾಟಿದ ನಂತರ ಹತ್ತು ಅಡಿಯ ದೂರದಲ್ಲಿ ಧ್ವಜಸ್ತಂಭ,ಅದರ ಪಕ್ಕದಲ್ಲಿ ಗರುಡನ ಮಂಡಪವು ಪಶ್ಚಿಮಾಭಿಮುಖವಾಗಿ ಅಂದರೆ ಶ್ರೀ ಪ್ರಸನ್ನ ವೆಂಕಟೇಶ್ವರನಿಗೆ ಅಭಿಮುಖವಾಗಿ ಇದೆ. ಈ ಗರುತ್ಮಂತನ ವಿಗ್ರಹ ತಿರುಮಲೆ, ತಿರುಪತಿ ಆಲಯದಲ್ಲಿದೆ. ಮೊದಲ ಪ್ರಧಾನ ಪ್ರಕಾರದ ಅಸಂಪೂರ್ತಿಯಾಗಿ ನಿಂತಿರುವ ಮತ್ತೊಂದು ಆಲಯದ ಸುತ್ತೂ ಇದೆ. ಇದರ ಎತ್ತು ಕೇವಲ ಎರಡು ಅಡಿ ಮಾತ್ರವೇ ಇರುತ್ತದೆ. ಈ ಎರಡನೇ ಪ್ರಾಕಾರದೊಳಗೆ ಪ್ರದಕ್ಷಿಣ ಆವರಣದಲ್ಲಿ ಸ್ವಾಮಿಯವರ ಗರ್ಭಾಲಯದ ನೈರುತಿಮೂಲೆಯಲ್ಲಿ ಶ್ರೀ ಪದ್ಮಾವತಿ ಅಮ್ಮನವರ ಚಿಕ್ಕದೇವಸ್ಥಾನ,ವಾಯುವ್ಯ ಮೂಲೆಯಲ್ಲಿ ಎತ್ತರವಾಗಿ ಶ್ರೀ ಗೋದಾಲಕ್ಷ್ಮಿ (ಅಂಡಾಳ್) ದೇವಸ್ಥಾನ ಇದೆ. ಇಲ್ಲಿಯ ಪದ್ಮಾವತಿ ಅಮ್ಮನವರ ವಿಗ್ರಹ ತಿರುಚಾನೂರಿಗಿಂತ ದೊಡ್ಡದಾಗಿರುತ್ತದೆ.

ಪ್ರಾಕಾರಗಳ ಮಧ್ಯೆ ಗರುಡನಮಂದಿರಕ್ಕೆ ಎದುರಿಗೆ ಪ್ರಧಾನಆಲಯ ಇದೆ. ಇದು ಮುಖಮಂಡಪ, ಅಂತರಾಳಂ, ಗರ್ಭಾಲಯ ಎಂದು ಮೂರು ಭಾಗಗಳಾಗಿ ನಿರ್ಮಿಸಲಾಗಿದೆ.

ಚತುರಸ್ರಾಕಾರ ಹೊಂದಿದ ಮುಖಮಂಡಪದಲ್ಲಿ 16 ಕಲ್ಲಿನ ಸ್ತಂಭಗಳಿವೆ. ಈ ಮುಖಮಂಡಪ ಮಧ್ಯದಲ್ಲಿ ಮೂಲ ಮೂರ್ತಿಯ ಎದುರಿಗೆ ನಾಲ್ಕು ಸ್ತಂಭಗಳ ಮಧ್ಯದಲ್ಲಿ ಚತುರಸ್ರಾಕಾರದ ವೇದಿಕೆ ಇದೆ. ಈ ವೇದಿಕೆಯ ಮೇಲೆ ಉತ್ಸವ ಮೂರ್ತಿಗಳ ಕೋಲವು, ಕಲ್ಯಾಣವನ್ನು ನಿರ್ವಹಿಸಲಾಗುತ್ತದೆ. ಈ ಮಂಡಪದಲ್ಲಿ ಉತ್ತರದಿಕ್ಕಿನಲ್ಲಿರುವ ವೇದಿಕೆಯ ಮೇಲೆ ಆಳ್ವಾರರ ವಿಗ್ರಹಗಳು ಇದೆ. ಇಲ್ಲಿ ರಾಮಾನುಜರ ವಿಗ್ರಹವೂ ಇದೆ. ಮುಖಮಂಡಪ ದಾಟಿದ ನಂತರ ಚಿಕ್ಕ ಅಂತರಾಳ ವಿದೆ. ಅದರ ನಂತರ ಗರ್ಭಾಲಯ ಅಂತರಾಳಕ್ಕಿಂತ ಅರ್ಧ ಅಡಿ ಎತ್ತರದಲ್ಲಿ ಏರ್ಪಾಟು ಮಾಡಲಾಗಿದೆ. ಗರ್ಭಾಲಯದಲ್ಲಿ ಶ್ರೀ ಪ್ರಸನ್ನ ವೆಂಕಟೇಶ್ವರ ಸ್ವಾಮಿಯವರ ಎತ್ತರವಾದ ವಿಗ್ರಹ ಪ್ರತಿಷ್ಠಿಸಲಾಗಿದೆ. ತಿರುಮಲೆಯಲ್ಲಿರುವ ಸ್ವಾಮಿಯಂತೆ ಚತುರ್ಭುಜಗಳನ್ನು ಹೊಂದಿ ಶಂಖ ಚಕ್ರಗಳು ಧರಿಸಿ ಕಟಿ ಹಸ್ತದೊಂದಿಗೆ ವಿರಾಜಿಸುತ್ತಿದ್ದಾನೆ. ತಿರುಮಲೆ ಸ್ವಾಮಿಯವರು ವರದ ಅಸ್ತ್ರದವನಾಗಿ ದರ್ಶನವನ್ನು ನೀಡುತ್ತಿರುವಾಗ ಅಪ್ಪಲಾಯ ಗುಂಟಸ್ವಾಮಿ ಪ್ರಸನ್ನನಾಗಿ ದರ್ಶನವನ್ನು ನೀಡುತ್ತಿದ್ದಾನೆ. ತಿರುಮಲೆ ಸ್ವಾಮಿಯವರ ಹೃದಯದ ಮೇಲೆ ಶ್ರೀಮಹಾಲಕ್ಷ್ಮಿ ಅಮ್ಮನವರ ದ್ವಿಭುಜಮೂರ್ತಿ ಕೊಲುವಾಗಿರುವಾಗ,ಅಪ್ಪಲಾಯ ಗುಂಟಸ್ವಾಮಿಯವರ ಹೃದಯದಲ್ಲಿ ಮಹಾಲಕ್ಷ್ಮೀದೇವಿಗೆ ಸಂಕೇತವಾಗಿ 'ಶ್ರೀವತ್ಸ' ಚಿಹ್ನೆ ಇದೆ.

ತಿರುಮಲೆ ಕ್ಷೇತ್ರದಂತೆ ಇಲ್ಲಿಯೂ ಕೂಡ ವೈಖಾನಸ ಆಗಮ ಪ್ರಕಾರ ಅರ್ಚನೆ ಜರುಗಿಸಲಾಗುತ್ತದೆ. ಈ ಗರ್ಭಾಲಯದಲ್ಲಿ ಮೂಲಮೂರ್ತಿ ಅಲ್ಲದೆ ಶ್ರೀದೇವಿ ಭೂದೇವಿ ಸಮೇತ ಪ್ರಸನ್ನ ವೆಂಕಟೇಶ್ವರಸ್ವಾಮಿಯವರ ಉತ್ಸವ ವಿಗ್ರಹಗಳು ಸುಮಾರು 3 ಅಡಿ ಎತ್ತರವಿದೆ. ಇದಲ್ಲದೆ ಚಕ್ರತ್ತಾಳ್ವಾರರು, ವಿಷ್ವಕ್ಸೇನರು ಭಾಷ್ಯಕಾರರ ಉತ್ಸವ ವಿಗ್ರಹಗಳು ಕೂಡಾ ಈ ಆಲಯದಲ್ಲಿ ಇವೆ.





ತಿರುಮಲೆ ತಿರುಪತಿ ಆಲಯದಂತೆ ಅಪ್ಪಲಾಯಗುಂಟ ಗರ್ಭಾಲಯದ ಮೇಲೆ ಏಕಾಕಲಶ ಗೋಪುರವನ್ನು ನಿರ್ಮಿಸಲಾಗಿದೆ. ಮುಖಮಂಡಪ, ಅಂತರಾಳಂ ಗರ್ಭಾಲಯ ಈ ಮೂರನ್ನೂ ಎರಡು ಅಡಿ ಎತ್ತರವಾದ ಒಂದೇ ಅಧಿಷ್ಠಾನದ ಮೇಲೆ ನಿರ್ಮಿಸ ಲಾಗಿದೆ. ಮೊದಲ ಪ್ರಾಕಾರ ದೊಳಗೆ ಪ್ರವೇಶದ್ವಾರದ ಎಡಗಡೆ ಆಗ್ನೇಯ ಮೂಲೆಗೆ ಅಡುಗೆಶಾಲೆ, ಯಾಗಶಾಲೆಗಳು ಇವೆ. ಈ ಅಡುಗೆ ಶಾಲೆಯಲ್ಲಿ ತಿರುಮಲೆಯಲ್ಲಿರುವಂತೆ ಮಾಲಿಕ ವಿಗ್ರಹ ಇದೆ.

**ಜೆ. ಬಾಲಸುಬ್ರಹ್ಮಣ್ಯಂ ರವರ 'ಶ್ರೀ ಪ್ರಸನ್ನ ವೇಂಕಟೇಶ್ವರ ಸ್ವಾಮಿ ಆಲಯ - ಅಪ್ಪಲಾಯಗುಂಟ 'ಎಂಬ ಪುಸ್ತಕದ ಆಧಾರವಾಗಿ ತೆಗೆದುಕೊಳ್ಳಲಾಗಿದೆ.**

ಪ್ರಾಕಾರವನ್ನು ದಾಟಿ ಆಲಯಕ್ಕೆ ಎದುರುಗಡೆ ಸುಮಾರು ನೂರುಗಜದೂರದಲ್ಲಿ ಶ್ರೀ ಪ್ರಸನ್ನ ಆಂಜನೇಯ ಸ್ವಾಮಿಯವರ ಆಲಯವಿದೆ. ಮುಖಮಂಡಪ, ಗರ್ಭಾಲಯ ಎಂದು ಎರಡು ಭಾಗಗಳಾಗಿ ವಿಭಜಿಸಲಾದ ಈ ಆಲಯದಲ್ಲಿ ತಿರುಮಲೆ ತಿರುಪತಿ ಆಲಯಕ್ಕೆ ಎದುರುಗೆ ಇದ್ದಹಾಗೇ ಇಲ್ಲಿಯೂ ಕೂಡ ಎತ್ತರವಾದ ಅಂಜನೇಯ ಸ್ವಾಮಿ ಕೈಗಳು ಜೋಡಿಸಿ ಶ್ರೀ ಪ್ರಸನ್ನ ವೆಂಕಟೇಶ್ವರನಿಗೆ ಅಭಿಮುಖವಾಗಿ ನಿಂತಿದ್ದಾನೆ. ಈ ಪ್ರಸನ್ನಾಂಜನೇಯಸ್ವಾಮಿ ಇಷ್ಟಾರ್ಥವನ್ನು ಪ್ರಸಾದಿಸುತ್ತಾ ಪ್ರತಿ ಭಾನುವಾರ ಪಂಚಾಮೃತಾಭಿಷೇಕ, ಪೂಲಂಗಿಸೇವೆಗಳನ್ನು ನಡೆಸಿಕೊಳ್ಳುತ್ತಿದ್ದಾರೆ. ಶ್ರೀ ಪ್ರಸನ್ನ ವೆಂಕಟೇಶ್ವರ, ಅಂಜನೇಯಸ್ವಾಮಿ ಆಲಯದ ಮಧ್ಯ ದಕ್ಷಿಣ ದಿಕ್ಕಿಗೆ ವಿಶಾಲವಾದ ವಾಹನ ಮಂಡಪ ಇದ್ದ ಹಾಗೆ ತಿಳಿಯುತ್ತದೆ. ಅದು ಶಿಥಿಲವಾಗಿದೆ. ಪ್ರಸ್ತುತ ಆದ್ದರಿಂದ ವಾಹನಗಳನ್ನು ಆಲಯ ಮುಖಮಂಡಪದಲ್ಲಿ ಇಡುತ್ತಿದ್ದಾರೆ.

## ಉತ್ಸವಗಳು

ಪ್ರತಿ ವರ್ಷ ಜ್ಯೇಷ್ಠಮಾಸದಲ್ಲಿ ಶ್ರವಣನಕ್ಷತ್ರದ ದಿನ ಮುಗಿಯುವಂತೆ ಹತ್ತು ದಿನಗಳಲ್ಲಿ ಅಪ್ಪಲಾಯಗುಂಟ ವೆಂಕಟೇಶ್ವರನ ಬ್ರಹ್ಮೋತ್ಸವಗಳು ವೈಭವವಾಗಿ ನಡೆಯುತ್ತದೆ. ಇದರಲ್ಲಿ ಗರುಡೋತ್ಸವ - ರಥೋತ್ಸವ ಅತ್ಯಂತ ಪ್ರಧಾನ ಉತ್ಸವಗಳು. ಕೊನೆಯ ದಿನ ಶ್ರವಣ ನಕ್ಷತದಂದು ದೇವಾಲಯಕ್ಕೆ ಈಶಾನ್ಯದಿಕ್ಕಿನಲ್ಲಿರುವ ಕೆರೆಯಲ್ಲಿ (ಅಪ್ಪ ಲಾಯಗುಂಟ) ಚಕ್ರಸ್ನಾನ ನಡೆಯುತ್ತದೆ. ಬ್ರಹ್ಮೋತ್ಸವಗಳಲ್ಲಿ ಪ್ರತಿದಿನ ಡೋಲೋತ್ಸವ ನಡೆಯುತ್ತದೆ. ವೈಕುಂಠ ಏಕಾದಶಿ ದಿನ ಮೆರವಣಿಗೆ ವೈಕುಂಠದ್ವಾದಶಿ ದಿನ ಚಕ್ರಸ್ನಾನ ನಡೆಯುತ್ತದೆ. ಯುಗಾದಿ ದಿನ ಆಸ್ಥಾನ, ಕೊಲುವು, ಪಂಚಾಂಗ ಶ್ರವಣ ವೈಭವವಾಗಿ ನಡೆಯುತ್ತದೆ. ಪ್ರತಿ ಶುಕ್ರವಾರ ಅಭಿಷೇಕ ನಡೆಯುತ್ತದೆ. ಆಣಿವಾರ ಆಸ್ಥಾನ, ದೀಪಾವಳಿ ಆಸ್ಥಾನಂ ನಡೆಯುತ್ತದೆ. ಪವಿತ್ರೋತ್ಸವಗಳು, ರಥ ಸಪ್ತಮಿಯ ಮೆರವಣಿಗೆ ನಡೆಯುತ್ತದೆ.

ಇಂತಹ ಪ್ರಸಿದ್ಧವಾದ, ವಿಶೇಷ ಪ್ರಾಶಸ್ತ್ಯವಿರುವ ಶ್ರೀ ಪ್ರಸನ್ನ ವೆಂಕಟೇಶ್ವರಸ್ವಾಮಿಯವರನ್ನು ದರ್ಶಿಸಿ ಪುನೀತರಾಗೋಣ.


## ಪಾಠಕರಿಗೆ ವಿಜ್ಞಪ್ತಿ

ಸಪ್ತಗಿರಿ ಮಾಸಪತ್ರಿಕೆ ನಿಮಗೆ ಸಕಾಲದಲ್ಲಿ ತಲುಪದಿದ್ದರೆ ಪ್ರಧಾನ ಸಂಪಾದಕ ಕಾರ್ಯಾಲಯಕ್ಕೆ ಕೆಲಸದ ದಿನಗಳಲ್ಲಿ ಕರೆ ಮಾಡಬೇಕು. ನಂತರವೇ ನಿಮಗೆ ಮತ್ತೊಂದು ಪತ್ರಿಕೆಯನ್ನು ಕಳಿಸುತ್ತಾರೆ. ಕೆಳಗಿನ ವಿವರಗಳಲ್ಲಿರುವ ದೂರವಾಣಿ ಸಂಖ್ಯೆಗೆ ಕರೆ ಮಾಡಿ. ನಿಮ್ಮ ಚಂದಾ ನಂಬರ್, ಮತ್ತು ನಿಮ್ಮ ವಿಳಾಸ, ನಿಮ್ಮ ಊರಿನ ಪಿನ್‌ಕೋಡ್ ನಂಬರ್, ನಿಮ್ಮ ದೂರವಾಣಿ ನಂಬರ್ ಅನ್ನು ವಿವರವಾಗಿ ತಿಳಿಸಬೇಕು.....

**ಪ್ರಧಾನ ಸಂಪಾದಕರ ಕಾರ್ಯಾಲಯದ**

**ದೂರವಾಣಿ ಸಂಖ್ಯೆ : 0877-2264543**




ಮುಂದುವರಿಯುವುದು-

47 ನೇ ಸಂಖ್ಯೆಯ ಶಾಸನದಿಂದ 56 ನೇ ಸಂಖ್ಯೆಯ ಎಲ್ಲ ಶಾಸನಗಳೂ ತ್ರುಟಿತ ಶಾಸನಗಳೇ ಆಗಿದ್ದು ಸುಂದರ ಪಾಂಡ್ಯನ ಪ್ರಶಸ್ತಿಯ ಕೆಲವು ಭಾಗಗಳನ್ನು ತಿಳಿಸುತ್ತವೆ.

ಶ್ರೀ ವೆಂಕಟೇಶ್ವರ ಸ್ವಾಮಿಯ ಆಲಯದ ವಿಮಾನದ ಮೇಲೆ ಸುಂದರ ಪಾಂಡ್ಯದೇವನು ಹೇಮ ಕಲಶವನ್ನು ಸ್ಥಾಪಿಸಿದನೆಂದು 49 ನೆ ಯ ಶಾಸನವು ತಿಳಿಸುತ್ತದೆ.

50 ಹಾಗೂ 52 ನೆ ಯ ಶಾಸನಗಳು ಆತನ ಪಟ್ಟಾಭಿಷೇಕವನ್ನು ಕುರಿತು ಹೇಳುತ್ತವೆ ಎಂದರೆ ಆತ ಕಂಚಿಯಲ್ಲಿ ವೀರಾಭಿಷೇಕ ಮಾಡಿಕೊಂಡದ್ದನ್ನು ತಿಳಿಸಿದರೆ 51 ನೆಯ ಶಾಸನವು ಆತನು ಅಲ್ಲಿ ಕಿರೀಟ ಧಾರಿಯಾದದ್ದನ್ನು ತಿಳಿಸುವುದು.

57 ನೇ ಶಾಸನವು 13 ನೇ ಶತಮಾನದಲ್ಲಿ ವಾನೆಡುತ್ತ ಕೈಯಳಗಿಯರ್ ಯಾನೆ ಪಲ್ಲವರಾಯನು ಬೆಟ್ಟದ ಬುಡದ ಕಪಿಲತೀರ್ಥದಲ್ಲಿ ನಮ್ಮಾಳ್ವಾರ್‌ಗೆ ಒಂದು ಗುಡಿಯನ್ನು ನಿರ್ಮಿಸಿದ್ದನ್ನು ತಿಳಿಸುವುದು. (ಪು - 69. ಸಂ1) ಈ ಆಲಯದಲ್ಲಿಯೇ ಇರುವ 58ನೆಯ ಶಾಸನವು ಆತನು ತಟಾಕದ ಬಳಿಯಿರುವ ಬೋಧಕನಾದ, ದೇವರ ಬಗ್ಗೆ ದಿವ್ಯ ಜ್ಞಾನವನ್ನು ಪಡೆದ ಋಷಿಯೆಂದೂ, ಬ್ರಹ್ಮವಿದ್ಯೆಯ ದೀಕ್ಷೆಯನ್ನು ಸಹಾನುಭೂತಿಯಿಂದ ಜನರಿಗೆ ನೀಡುವವನೆಂದೂ ವಿವರಿಸುವುದು. 165 ನೆ ಯ ಶಾಸನವು ತಿರುಮಲೆಯ ಬೆಟ್ಟದ ಬುಡದಲ್ಲಿ ವಾಸವಾಗಿರುವ ಈತ ಶ್ರೀವೈಷ್ಣವರಲ್ಲಿ ಗೌರವಾನ್ವಿತ ಪೆರುಮಕ್ಕಳ್ - ಹಿರಿಯ - ಎಂದೂ ತಿಳಿಸುವುದು. 59 ನೇ ಶಾಸನದಿಂದಾಗಿ ತಿರುವೆಂಕಟಮುಡೈಯಾನನ ಸನ್ನಿಧಿಯಲ್ಲಿ ಒಂದು ನಂದಾದೀಪ ಶಾಶ್ವತವಾಗಿ ಬೆಳಕು ನೀಡುತ್ತಿರಬೇಕೆಂದು ಒಂದು ದೀಪವನ್ನು ನೀಡುತ್ತ 33 ಹಸುಗಳನ್ನೂ ಒಂದು, ಗೂಳಿಯನ್ನೂ, ದೀಪಕ್ಕೆ ಬೇಕಾಗುವ ತುಪ್ಪಕ್ಕೆಂದು ನೀಡಿದ ವಿಷಯ ತಿಳಿದುಬರುವುದು. ಒಂದು ದೀಪವನ್ನು ಬೆಳಗಿಸಲು ಈ ಮೊದಲು ಮೂವತ್ತು ಅಥವಾ ನಲವತ್ತು ಕಳಂಜು ತೂಕದ ಚಿನ್ನವನ್ನು ನೀಡುವ ಸಂಪ್ರದಾಯದಿಂದ ದೂರವಾದ ಹೊಸ ಪದ್ಧತಿಯಲ್ಲಿ ಮಾಡಿದ ದಾನವಿದು. ತೆಲುಗು ಪಲ್ಲವ ರಾಜ ವಿಜಯಗಂಡ ಗೋಪಾಲ ದೇವನ (ಕ್ರಿ.ಶ. 1250 -1285) ಆಡಳಿತದ 9 ನೆ ಯ ವರ್ಷದಲ್ಲಿ ಒಬ್ಬಾನೊಬ್ಬ ಅಣ್ಣನ್ ಪೆರುಮಾಳ್ ಪ್ರಿಯನ್ ಮಾಡಿದ ಸಮರ್ಪಣೆ ಇಲ್ಲಿ ದಾಖಲೆಯಾಗಿರುವುದು. ಹುಸುಗಳ ದಾನದಿಂದಾಗಿ ಆಲಯಕ್ಕೆ ಹೆಚ್ಚಿನ ಪ್ರಯೋಜನವಾಗಿರಬೇಕು. ಕಾರಣ ಹಸುವಿನ ಹಾಲು ಮೊಸರುಗಳನ್ನು ನಿವೇದನಗಳಲ್ಲಿಯೂ ಬಳಸಲಿಕ್ಕೆ ಬರುವುದು.

61 ನೆಯ ಶಾಸನವು ತಿರುಪತಿಯ ಗೋವಿಂದರಾಜ ಸ್ವಾಮಿಗೆ ಪ್ರತಿನಿತ್ಯ ತಿರುಮೊಳಿ ಹಾಡುವಾಗ ಹಲವು ನಿವೇದನೆಗಳಿಗಾಗಿ ತಿರುಮೊಳಿ ಪಡಿಯನ್ನು , ವೈಕಾಸಿ ತಿಂಗಳಿನಲ್ಲಿ ಈ ದೇವರಿಗೆ ಮಾಡುವ ಉತ್ಸವ ಕಾಲದಲ್ಲಿ ನಿವೇದನೆಗಳನ್ನು ಮಾಡಲೆಂದೂ, ತಿರುಮಲೆಯ ಶ್ರೀ ವೆಂಕಟೇಶ್ವರಸ್ವಾಮಿಗೆ ನಿತ್ಯ ನಿವೇದನೆ ಮಾಡಬೇಕೆಂದು ಚಿತ್ತಿರೈ ತಿಂಗಳಿನಲ್ಲಿ ತಿರುಮಲೆಯಲ್ಲಿ ಸ್ವಾಮಿಗೆ ನಡೆಯುವ ಉತ್ಸವದಲ್ಲಿ ನಿವೇದನೆಗಳನ್ನು ಸಮರ್ಪಿಸಬೇಕೆಂದೂ ತಿಳಿಸುವುದು. ವಿಜಯಗಂಡ ಗೋಪಾಲನ (ಕ್ರಿ.ಶ. 1264 ಅಥವಾ ಕ್ರಿ.ಶ. 1284) ಆಡಳಿತದ ನಾಲ್ಕನೆಯ ವರ್ಷದಲ್ಲಿ ಈ ಶಾಸನ ಪ್ರಕಟವಾಯಿತು.

ಚಾಲುಕ್ಯ-ಚೋಳ ರಾಜನಾದ ಒಂದನೇ ಕುಲೋತ್ತುಂಗ ಚೋಳನ - (ಕ್ರಿ.ಶ. 1120) ಮರಣಾನಂತರ ತಿರುಪತಿ ನಗರದ

ಪಶ್ಚಿಮದಲ್ಲಿರುವ ನರಸಿಂಹ ತೀರ್ಥದಲ್ಲಿನ ಪಶ್ಚಿಮದ ಮೆಟ್ಟಿಲ ಮೇಲೆ ಒಂದು ಬೃಹದಾಕಾರದ ಕಲಿಶಿಲೆಯ ಗೋವಿಂದರಾಜಸ್ವಾಮಿ ವಿಗ್ರಹವನ್ನು ಕಾಣಬಹುದು. ಇದು ಮೊದಲಿಗೆ ಗೋವಿಂದರಾಜಸ್ವಾಮಿ ಆಲಯದಲ್ಲಿ ಪೂಜೆಗೊಳ್ಳುತ್ತಿದ್ದಿತೆಂದೂ,ಯಾವುದೋ ಕಾರಣದಿಂದಾಗಿ ತ್ರುಟಿತವಾದದ್ದರಿಂದ ಈ ಕೆರೆಯ ದಂಡೆಯಲ್ಲಿ ತಂದಿಡಲಾಯಿತೆಂದೂ ನಂಬಲಾಗಿದೆ. ಇದು ಆಲಯದಲ್ಲಿದ್ದದ್ದು ಯಾವಾಗ? ಇಲ್ಲಿಗೆ ಬಂದದ್ದು ಯಾವಾಗ ಎಂಬ ವಿವರಗಳು ತಿಳಿದಿಲ್ಲ. ಈಗಿರುವ ಗಾರೆಯ ಕವಚ ಹೊದ್ದಿರುವ ಸಣ್ಣ ವಿಗ್ರಹವು ಚೋಳರಾಜನಿಂದ ಸಮುದ್ರಕ್ಕೆ ಸೆಯಲ್ಪಟ್ಟು ಅಲ್ಲಿಂದ ಹೊರತಂದು. ಇಲ್ಲಿ ಸ್ಥಾಪನೆಯಾಗಿರುವಂತಹದ್ದು, ಪ್ರಾಯಶಃ ಈ



ವಿಗ್ರಹಕ್ಕೆ ಪರ್ಯಾಯವಾಗಿರಬಹುದು. ಆದರೆ ಈ ಬಗ್ಗೆ ಶಾಸನಗಳಲ್ಲಿ ಯಾವುದೇ ಹೇಳಿಕೆಯೂ ಇಲ್ಲ. 40 ನೇ ಶಾಸನದಲ್ಲಿ ಈ ಆಲಯದ ವಿಗ್ರಹವು ಸುಧಾ ಮೂರ್ತಿಯೆಂದು ಮಾತ್ರವೇ ಹೇಳಲಾಗಿದೆ. "ತಿರುಪತಿಯಿಲ್ ಚಿತ್ರ ಮೇಳಿವಿಣ್ಣಗರಾನ ಶ್ರೀ ಗೋವಿಂದ ಪ್ಪೆರುಮಾಳ್ ಕೋವಿಲ್" ಎಂದಿದೆ. ಬೃಹತ್ ವಿಗ್ರಹ ತ್ರುಟಿತವಾಗಲು ಕ್ರಿ.ಶ. ಸುಮಾರು 1310 ರಲ್ಲಿ ಈ ಭಾಗವನ್ನು ಧಾಳಿಯಿಟ್ಟು ಕೊಳ್ಳೆ ಹೊಡೆದ ಮಲ್ಲಿಕಾಫರನ ದಕ್ಷಿಣ ದಂಡಯಾತ್ರೆಯ ಸಮಯದಲ್ಲಿಯಾಗಲೀ, ಷಹಜಹಾನನ ಕಾಲದಲ್ಲಿ ದಕ್ಷಿಣದ ರಾಜ್ಯಪಾಲನಾಗಿದ್ದ ಔರಂಗಜೇಬನ ಕಾಲದಲ್ಲಿಯಾಗಲೀ ಅಥವಾ ಗೋಲ್ಕೊಂಡದ ಸುಲ್ತಾನ ಅಬ್ದುಲ್ಲನ ಕಾಲದಲ್ಲಿಯಾಗಲೀ ನಡೆದ ಮುಸಲ್ಮಾನ ಧಾಳಿಯೇ ಕಾರಣವಾಗಿರಬಹುದು.

(ಈ ಮಾತಿಗೆ ಬುಡವಿಲ್ಲವೆಂದು ಮೇಲುನೋಟಕ್ಕೆ ಹೇಳಬರುತ್ತದೆ. ಗೋವಿಂದರಾಜನನ್ನು ಮುರಿದ ಮಂದಿ ತಿರುಮಲೆಯಪ್ಪನನ್ನು ಬಿಡುತ್ತಿದ್ದರೇ! ರಮೇಶನ್ ಅವರು ನಂತರ ಗುರುತಿಸುವಂತೆ ಮಲ್ಲಿಕಾಫರನ ಧಾಳಿಯ ಹಾದಿಯಲ್ಲಿ ತಿರುಮಲೆ ತಿರುಪತಿ ಪ್ರಾಂತ್ಯಗಳು ಬರಲಿಲ್ಲ. ಹಾಗಾಗಿಯೇ ಶ್ರೀರಂಗದ ಉತ್ಸವ ವಿಗ್ರಹಗಳನ್ನು ತಿರುಮಲೆಯ ಆಲಯದ ರಂಗನಾಯಕ ಮಂಟಪದಲ್ಲಿ ಇಡಲಾಯಿತು. ನಂತರ ವಿಜಯನಗರದ ಆಡಳಿತಕಾಲದಲ್ಲಿ ಅದನ್ನು ಸ್ವಸ್ಥಳಕ್ಕೆ ಸಾಗಿಸಲಾಯಿತು. ಅನುವಾದಕ.)

ಗೋವಿಂದರಾಜಸ್ವಾಮಿಯ ಆಲಯದ ಉತ್ಸವ ವಿಗ್ರಹಗಳು ಮೊದಲಿಗೆ ಪಾರ್ಥಸಾರಥಿ ಆಲಯದ ಉತ್ಸವ ವಿಗ್ರಹಗಳೇ ಆಗಿರಬೇಕು.

ತಿರುಮಲೆಯ ಆಲಯದ ಮೂಲ ಮೂರ್ತಿ ಶ್ರೀ ವೆಂಕಟೇಶ್ವರ ಸ್ವಾಮಿಯನ್ನು ಹೋಲುವ ಬೆಳ್ಳಿಯ ವಿಗ್ರಹ ಮಣವಾಳ ಪೆರುಮಾಳರನ್ನು ಸ್ಥಾಪಿಸಿದ ಸಾಮವೈರಾಣಿ ಆ ವಿಗ್ರಹವನ್ನು ಆಪಾದ ಮಸ್ತಕ ಆಭರಣಗಳಿಂದ ಅಲಂಕರಿಸಿ, ಅದಕ್ಕೆ ನಂದಾದೀಪದ ಏರ್ಪಾಡು ಮಾಡಿ. ನಿತ್ಯ ನಿವೇದನಕ್ಕೆ ಪ್ರಾವಧಾನ ಮಾಡಿ, ಈ ವಿಗ್ರಹಕ್ಕೆ ಪುರಟ್ಟಾಸಿ ಮಾಸದಲ್ಲಿ ಹನ್ನೊಂದು ದಿನಗಳ ಉತ್ಸವವನ್ನೂ ಮಾರ್ಗಳಿ ಮಾಸದಲ್ಲಿ ಇನ್ನೊಂದು ಉತ್ಸವವನ್ನೂ ಏರ್ಪಡಿಸಿ ಇದರ ವೆಚ್ಚಗಳಿಗೆಂದು ಬಹುವಾಗಿ ಭೂಮಿದಾನ ನೀಡಿದಳು. (8 ಹಾಗೂ 9 ಕ್ರಮಸಂಖ್ಯೆಯ ಶಾಸನಗಳು) ಕ್ರಿ.ಶ. 1264 ಅಥವಾ 1274 ಕ್ಕೆ ಸಮನಾದ ವಿಜಯಗಂಡ ಗೋಪಾಲನ ಆಡಳಿತದ 14 ನೆಯ ಅಥವಾ 24 ನೆಯ ವರ್ಷದಲ್ಲಿ ತಮಿಳಿನ ಚಿತ್ತಿರೈ ಮಾಸದಲ್ಲಿ ಒಂದು ಉತ್ಸವವನ್ನು ಏರ್ಪಡಿಸಿದುದನ್ನು 61 ನೆಯ ಶಾಸನದಲ್ಲಿ ಕಾಣುತ್ತೇವೆ. ಶ್ರೀ ವೆಂಕಟೇಶ್ವರ ಉತ್ಸವಗಳು ವಿಜಯನಗರ ಸಾಮ್ರಾಜ್ಯದ ಆರಂಭ ಕಾಲಕ್ಕೆ 7 ರ ಸಂಖ್ಯೆಗೆ ಏರಿ ಕ್ರಮೇಣ ತಿಂಗಳಿಗೆ ಒಂದರಂತೆ ಹತ್ತರವರೆಗೆ ಏರಿದವು. ಮಿಕ್ಕ ಎರಡು ತಿಂಗಳು ಎಂದರೆ ವೈಕಾಸಿ ಆನಿ ಮಾಸಗಳಲ್ಲಿ ತಿರುಪತಿಯ ಗೋವಿಂದರಾಜಸ್ವಾಮಿಗೆ ಉತ್ಸವಗಳು ನಡೆಯುತ್ತಿದ್ದವು. ತಿರುಮಲೆಯಲ್ಲಿ ವೆಂಕಟೇಶ್ವರಸ್ವಾಮಿಗೆ ನಡೆಯುವ 7 ಅಥವಾ 10 ಉತ್ಸವಗಳಲ್ಲಿ ಪುರಟ್ಟಾಸಿ ಹಾಗೂ ಪಂಗುಣಿ ಮಾಸಗಳಲ್ಲಿ

ಮಾತ್ರವೇ ಉತ್ಸವದ ಎಂಟನೆಯ ದಿನ ರಥವನ್ನು ಬಳಸಲಾಗುತ್ತಿತ್ತು ಎಂದು ತೋರುತ್ತದೆ. (96, 113 - ಸಂ-2) (ಗೋವಿಂದ ರಾಜಸ್ವಾಮಿಯ ವಿಷಯದಲ್ಲಿ ನಡೆದಂತೆಯೇ ತಿರುಮಲೆಯ ವೆಂಕಟೇಶ್ವರ ಸ್ವಾಮಿಯ ವಿಷಯದಲ್ಲಿಯೂ ಹತ್ತೊಂಬತ್ತನೆಯ ಶತಮಾನದ ಆರಂಭದಲ್ಲಿ ಪುರಟ್ಟಾಸಿ ಉತ್ಸವವನ್ನು ಮಾತ್ರವೇ ಉಳಿಸಿಕೊಂಡು ಮಿಕ್ಕೆಲ್ಲ ಉತ್ಸವಗಳನ್ನು ನಿಲ್ಲಿಸಲಾಯಿತು. ಪುರಟ್ಟಾಸಿ ಉತ್ಸವ ಮಾತ್ರ ಇಂದಿಗೂ ನಡೆದು ಬಂದಿದೆ.)

62 ನೇ ಶಾಸನವು 3 ಗಂಡಗೋಪಾಲನ್ ಮಾಡಗಳ (ರಾಜನ ಹೆಸರನ್ನು ಆ ಮೂಲಕ ಆತನ ಪ್ರಭಾವ ಪ್ರಾಬಲ್ಯಗಳನ್ನು ಸೂಚಿಸುವ ಚಿನ್ನದ ನಾಣ್ಯ) ಠೇವಣಿಯಿಟ್ಟು ಒಂದು ನಂದಾದೀಪ ಹಾಗೂ ಒಂದು ಅಪ್ಪ ಪಡಿ (ಅಕ್ಕಿ, ಬೆಲ್ಲಗಳ ತುಪ್ಪದಲ್ಲಿ ಕರಿದ ತಿನಿಸು)ಯ ನೈವೇದ್ಯದ ಏರ್ಪಾಡು ಮಾಡಿದುದನ್ನು ತಿಳಿಸುವುದು.

ವಿಜಯಗಂಡ ಗೋಪಾಲನ ರಾಣಿ ದೇವರಸಿಯರು ತಿರುವೆಂಕಟ ಮುಡೈಯಾನ್‌ಗೆ ಮೂರು ನಂದಾದೀಪಗಳನ್ನು ಬೆಳಗಲೆಂದು ಹಸುಗಳನ್ನು ದಾನವಾಗಿ ನೀಡಿದ ವಿಷಯವನ್ನು 63 ಹಾಗೂ 64 ನೆಯ ಶಾಸನಗಳು ತಿಳಿಸುತ್ತವೆ.

ಪುರಾಟ್ಟಾಸಿ ತಿಂಗಳಿನ ಉತ್ಸವ ಸಮಯದಲ್ಲಿ ಒಂದು ದೀಪವನ್ನೂ, ಬೆಳಗಿಸಲು 32 ಹಸುಗಳನ್ನೂ ಒಂದು ಗೂಳಿಯನ್ನು ದಾನ ನೀಡಿ, ಶ್ರೀ ವೆಂಕಟೇಶ್ವರ ಸ್ವಾಮಿಯ ಸನ್ನಿಧಿಯಲ್ಲಿ ಶಾಶ್ವತ ನಂದಾದೀಪ, ಕರ್ಪೂರ ದೀಪಗಳಿಗಾಗಿ 15 ಮಾಡಗಳ ಧನವನ್ನೂ ನೀಡಿದ ವಿಷಯವನ್ನು 67 ನೇ ಶಾಸನವು ತಿಳಿಸುವುದು.

68 ಹಾಗೂ 69 ನೆಯ ಶಾಸನಗಳು ಶ್ರೀ ವೆಂಕಟೇಶ್ವರಸ್ವಾಮಿಗೆ ಬೆಳಗಿನ ಸಂಧಿಯಲ್ಲಿ - ಎರಡು ಪೂಜೆಗಳ ನಡುವಿನ ವಿರಾಮ ಸಮಯದಲ್ಲಿ - ಹಲವು ನೈವೇದ್ಯ ನೀಡಲೆಂದು 450 ವರಾಹ ಪಣಂಗಳನ್ನು (ವರಾಹ ಮುದ್ರೆಯಿರುವ ತಾಮ್ರ ಅಥವಾ ಬೆಳ್ಳಿಯ ನಾಣ್ಯ)ನೀಡಿದ ವಿಷಯವನ್ನು ತಿಳಿಸುವುದು. 68 ನೆ ಯ ಶಾಸನವು 'ಉಚ್ಚೈಯಿಲ್ ನಿನ್ರ ನಾರಾಯಣನ್' ತೂಕದ ಮಾನದಂಡವನ್ನು ವೆಂಕಟೇಶ್ವರ ಸ್ವಾಮಿಯ ನಿವೇದನೆಯಲ್ಲಿ ಬಳಸುವ ಅಕ್ಕಿಯ ತೂಕವನ್ನು ಕುರಿತು ತಿಳಿಸುತ್ತದೆ.

ಹೀಗೆಂದರೆ - ಯಾರು ಶಿಖರಾಗ್ರದಲ್ಲಿ ನಿಂತವನೋ ಆ ಹರಿ - ನಾರಾಯಣ - ಅವನು ಎಂದರ್ಥ. 74 ರಲ್ಲಿ ಕೇವಲ 'ನಿನ್ರಾನ್' ಎಂಬುದನ್ನು ಮಾತ್ರ ಬಳಸಲಾಗಿದೆ. ನಂತರದ ಕಾಲದಲ್ಲಿ ಇದನ್ನು ಮಲೈಕುನಿಯ ನಿನ್ರಾನ್ ಕಲ್ ಎಂದು ಪರಿವರ್ತಿಸಲಾಯಿತು. ಎಂದರೆ ಮರಕ್ಕಾಲ್ ಅಥವಾ ತೂಂಬು. ಮಲೈಕುನಿಯ ನಿನ್ರ ಪೆರುಮಾಳರನ್ನು ಆತನ ಉಭಯ ನಾಯಕಿಯರೊಡನೆ ಸೇರಿಸಿ 13 ನೇ ಶತಮಾನದ ಪ್ರಥಮಾರ್ಥದಲ್ಲಿ ಹೊರತಂದಾಗ ಬಳಸಲಾಯಿತು. ಗೋವಿಂದರಾಜಸ್ವಾಮಿ ಆಲಯದಲ್ಲಿ ಬಳಸುತ್ತಿದ್ದ ತೂಕದ ಹೆಸರು ಚಾಲುಕ್ಯ ನಾರಾಯಣನ್ ಕಲ್.

70 ನೇ ಶಾಸನವು ವಿಕ್ರಮಾದೇವಿ ಪುರದ ಸಾಲಿಯ (ನೇಕಾರ) ರಿಂದ 450 ವರಾಹ ಪಣದ ಠೇವಣಿಯಾಗಿಟ್ಟು, ಆಲಯದ ಶ್ರೀ ಭಂಡಾರದಿಂದ ಪ್ರತಿನಿತ್ಯ ಒಂದು ತಿರುಪ್ಪೋನಕಕ್ಕೆ (ಹೆಸರು ಬೇಳೆ - ಮೆಣಸು - ಉಪ್ಪುಗಳನ್ನು ಬೆರೆಸಿ ಬೇಯಿಸಿ ಮಾಡಿದ ಅನ್ನ - ಬೋನ - ಈಗಿನ ಅರ್ಥದಲ್ಲಿ ಉಪ್ಪೊಂಗಲು - ಹುಗ್ಗಿ) ಬೇಕಾದ ಸರಂಜಾಮು ಸರಬರಾಜು ಆಗಬೇಕು ಎಂದು ತಿಳಿಸುವುದು.

71 ಹಾಗೂ 72 ನೇ ಶಾಸನಗಳು ಅರ್ಧ ನಂದಾದೀಪ ಹಾಗೂ ಎಂಟನೇ ಒಂದು ನಂದಾದೀಪಕ್ಕೆಂದು ಪ್ರಾಯಶಃ ಒಟ್ಟಿಗೆ ಒಂದು ನಂದಾದೀಪಕ್ಕೆ 164 ರಲ್ಲಿನ ಎಂಟನೇ ಮೂರು ಭಾಗದ ದೀಪಕ್ಕೆ ಸೇರಿಸಿದಂತೆ ಹಲವು ಸಾಲಿಯರು - ನೇಕಾರರು - ಮಾಡಿದ ಏರ್ಪಾಡನ್ನು ತಿಳಿಸುವುದು.

73 ನೇ ಶಾಸನದಲ್ಲಿ ವಿಕ್ರಮಾದೇವಿ ಪುರದ ಸಾಲಿಯರ - ನೇಕಾರ - ಹೆಸರಿನಲ್ಲಿ ಮೂರು ಮಾಡೈ ಪಣವನ್ನು ನೀಡಿ ಉತ್ಸವ ಸಮಯದಲ್ಲಿ ಉತ್ಸವ ವಿಗ್ರಹಗಳು ಒಂದಾನೊಂದು ಮಂಟಪದಲ್ಲಿ ವಿಶ್ರಾಂತಿ ಪಡೆಯುವಾಗ ನಿವೇದನೆ ಮಾಡಬೇಕೆಂದು ತಿಳಿಸಲಾಗಿದೆ. ಆಲಯದ ಹೊರಗಡೆ ನಿರ್ಮಾಣವಾದ ಮಂಟಪವೊಂದರಲ್ಲಿ ಉತ್ಸವ ವಿಗ್ರಹಗಳು ವಿಶ್ರಾಂತಿ ಪಡೆಯುವುದು, ನಿವೇದನೆಯಾಗುವುದುಗಳನ್ನು ತಿಳಿಸುವ ಮೊದಲನೆಯ ಶಾಸನವಿದು.

(ಸಶೇಷ)






# ಭಕ್ತ ಧ್ರುವ ಚರಿತ್ರೆ

ಡಾ॥ ವೈಷ್ಣವಾಂಘ್ರಿಸೇವಕ್‌ದಾಸ್
ಅನುವಾದ : ಡಿ.ಎಸ್.ಬದ್ರಿನಾಥ್

ದೇವದೇವನ ಅಂಶನಾದ ಬ್ರಹ್ಮನ ಏಕೈಕ ಪುತ್ರ ಸ್ವಾಯಂಭುವ ಮನು.ಆತನ ಪತ್ನಿ ಶತರೂಪ ಆತನ ಜೇಷ್ಠ ಪುತ್ರ ಪ್ರಿಯವ್ರತನು.ಎರಡನೇ ಪುತ್ರನು ಉತ್ತಾನಪಾದನು. ಉತ್ತಾನ ಪಾದ ಎರಡನೇ ಪುತ್ರನೇ ಆದರೂ ಆತನ ಹೆಸರು ಚರಿತ್ರೆಯಲ್ಲಿ, ಭಾಗವತದಲ್ಲಿ ಅಗ್ರಸ್ಥಾನದಲ್ಲಿರುತ್ತದೆ. ಇದು ವಿದುರ-ಮೈತ್ರೇಯರ ಸಂವಾದದಲ್ಲಿಯೂ ಚರ್ಚಿಸಲ್ಪಟ್ಟಿದೆ. ಮೈತ್ರೇಯನು ಮೊದಲು ಉತ್ತಾನಪಾದನ ಕುರಿತು ಚರ್ಚಿಸಲು ಕಾರಣ ಭಕ್ತಧ್ರುವನು. ಧ್ರುವನಿಗೆ ಉಂಟಾದ ಭಗವದ್ದರ್ಶನ, ಓದುವವರಿಗೆ ಕೇಳುವ ವರಿಗೆ ಹೃದಯದಲ್ಲಿ ವಿಶುದ್ಧ ಭಕ್ತಿಯನ್ನು ಉದ್ದೀಪನ ಮಾಡುವ ಭಕ್ತ ಧ್ರುವನ ಚರಿತೆಯು ಎಲ್ಲರಿಗೂ ಎಷ್ಟೋ ಪ್ರಸನ್ನತೆಯನ್ನುಂಟು ಮಾಡುತ್ತದೆ.

ಉತ್ತಾನಪಾದನಿಗೆ ಇಬ್ಬರು ಪತ್ನಿಯರು. ದೊಡ್ಡವಳು ಸುನೀತಿ ಚಿಕ್ಕವಳು ಸುರುಚಿ. ಸುನೀತಿಯ ಮಗನೇ ಭಕ್ತ ಧ್ರುವನು. ಇನ್ನು ಸುರುಚಿಗೆ 'ಉತ್ತಮ' ನೆಂಬ ಮಗನು. ಒಂದು ಸಾರಿ ಉತ್ತಾನಪಾದನು ಸುರುಚಿಯ ಮಗನಾದ ಉತ್ತಮನನ್ನು ತೊಡೆಯ ಮೇಲೆ ಕೂರಿಸಿಕೊಂಡು ಮುದ್ದಿಸುತ್ತಿದ್ದಾನೆ. ಅದನ್ನು ನೋಡಿದ ಸುನೀತಿಯ ಮಗನಾದ ಧ್ರುವನು ಸಹಾ ತಂದೆಯ ತೊಡೆಯೇರಲು ಪ್ರಯತ್ನಿಸಿದ್ದಾನೆ.ತಂದೆ ತೊಡೆಯ ಮೇಲೇರಲೆಂದು ಮಗನು ಆಶಿಸುವುದು ಸಹಜವೇ ಅಲ್ಲವೇ! ಆದರೆ ಉತ್ತಾನಪಾದನು ಧ್ರುವನ ಆಸೆಗೆ ನ್ಯಾಯವೊದಗಿಸಲಿಲ್ಲ.ಆದರೂ ಧ್ರುವನು ತಂದೆಯ ತೊಡೆಯೇರಲು ಪ್ರಯತ್ನಿಸುತ್ತಲೇ ಇದ್ದಾನೆ.ಆಗ ಸುರುಚಿ ಇದನ್ನು ಗಮನಿಸಿ ರಾಜ ತನ್ನ ಕಡೆಗೆ ಇರುವ ನೆಂಬ ಗರ್ವದಿಂದ ಕಠೋರವಾಗಿ ಈ ರೀತಿ ನುಡಿ ದಿದ್ದಾಳೆ.

"ಬಾಲಕ! ರಾಜನ ತೊಡೆಯ ಮೇಲೆ ಆಗಲೀ, ಸಿಂಹಾಸನದ ಮೇಲೆ ಆಗಲೀ ಕೂರಲು ನಿನಗೆ ಅರ್ಹತೆ ಯಿಲ್ಲ. ನೀನು ರಾಜಕುಮಾರನೇ ಆದರೂ ನನ್ನ ಹೊಟ್ಟೆ ಯಲ್ಲಿ ಜನಿಸಿಲ್ಲವಾದ್ದರಿಂದ ತಂದೆಯ ತೊಡೆ ಮೇಲೆ ಕೂರುವ ಅರ್ಹತೆಯನ್ನು ನೀನು ಕಳೆದು ಕೊಂಡಿದ್ದೀಯೆ. ಆದ್ದರಿಂದ ನೀನು ಮಾಡುವ ಪ್ರಯತ್ನ ವಿಫಲವಾಗದೇ ಇರುವುದಿಲ್ಲ.ಒಂದು ವೇಳೆ ನೀನು ರಾಜ ಸಿಂಹಾಸನವನ್ನು ಪಡೆಯಬೇಕೆಂದು ಕೊಂಡರೆ ತಪಸ್ಸು ಮಾಡಿ ನಾರಾ ಯಣನನ್ನು ಒಲಿಸಿ. ಆ ದೇವದೇವನ ಅನುಗ್ರಹ ಹೊಂದಿದ ನಂತರ ನೀನು ನನ್ನ ಗರ್ಭದಲ್ಲಿ ಜನಿಸ ಬೇಕಾ ಗುತ್ತದೆ."

ಮಲತಾಯಿಯ ಮಾತುಗಳು ಧ್ರುವನ ಹೃದಯ ವನ್ನು ನುಚ್ಚು ನೂರುಮಾಡಿವೆ.ಬಾಲಕನೇ ಆದರೂ ಕ್ಷತ್ರಿಯ ಹೃದಯವಾದುದರಿಂದ ಪೌರುಷದಿಂದ ಆತನು ಆ ಅವಮಾನವನ್ನು ಸಹಿಸಿಕೊಂಡಿದ್ದಾನೆ.ಹೊಡೆತ ತಿಂದ ಹಾವಿನಂತೆ ದೀರ್ಘ ಶ್ವಾಸದಿಂದ ನಿಂತು ಬಿಟ್ಟಿದ್ದಾನೆ. ಚಿಕ್ಕ ಬಾಲಕನೆಂಬುದನ್ನು ಸಹಾ ಸುರುಚಿ ಗ್ರಹಿಸದೇ ಈ ರೀತಿ ಯಾಗಿ ನುಡಿದುದನ್ನು ಕೇಳಿ ಉತ್ತಾನಪಾದನೂ ಸಹಾ ಏನೂ ಮಾತನಾಡದೇ ಹೋಗಿದ್ದಾನೆ.ತನ್ನ ತಂದೆಯಿಂದ ಯಾವುದೇ ತರಹದ ಮಾತು ಬಾರದಿರುವುದನ್ನು ಕಂಡು ಧ್ರುವನು ಬಿಕ್ಕಿ ಬಿಕ್ಕಿ ಅಳುತ್ತಾ ತನ್ನ ಹೆತ್ತ ತಾಯಿ ಸುನೀತಿ

ಬಳಿಗೆ ಹೊರಟು ಹೋಗಿದ್ದಾನೆ. ಕೋಪದಿಂದ ಆ ಮಗುವಿನ ತುಟಿಗಳು ಕಂಪಿಸುತ್ತಿವೆ. ಕಣ್ಣುಗಳಿಂದ ಧಾರಾಕಾರವಾಗಿ ನೀರು ಸುರಿಯುತ್ತಿದೆ. ಮುಖ ಬಾಡಿದೆಲೆಯಂತೆ ಆಗಿದೆ. ದುಃಖಿತನಾದ ತನ್ನ ಸುತನನ್ನು ಸುನೀತಿ ತನ್ನ ಬಡಲಿಗೆ ಎತ್ತಿ ಕೊಂಡಿದ್ದಾಳೆ. ಅಷ್ಟರಲ್ಲೇ ಅಂತಃಪುರ ಜನರೆಲ್ಲಾ ಅಲ್ಲಿ ನಡೆದು ದೆಲ್ಲವನ್ನು ವಿವರಿಸಿದ್ದಾರೆ. ಅದನ್ನು ಕೇಳಿದ ಸುನೀತಿಗೆ ದುರ್ಭರವಾದ ದುಃಖವುಂಟಾಗಿದೆ. ಆದರೂ ನಡೆದು ಹೋದ ದಕ್ಕೆಲ್ಲಾ ಪ್ರತಿಕ್ರಿಯಸಲು ಆಕೆಗೆ ಏನೂ ತೋಚದಾಗಿದೆ. ಆದರೂ ಕೂಡಲೇ ಆಕೆಯು ತನ್ನ ಜವಾಬ್ದಾರಿಯನ್ನು ನೆನೆದು ಪುತ್ರನಿಗೆ ಮಾರ್ಗದರ್ಶನವೀಯಲು ಮುಂದಾಗಿದ್ದಾಳೆ.

''ವತ್ಸಾ! ಬೇರೆಯವರಿಗೆ ಕೆಡುಕನ್ನು ಮಾತ್ರ ಬಯಸಬೇಡ. ಇತರರಿಗೆ ದುಃಖವನ್ನು ಕೊಡುವವರು ಕಡೆಗೆ ಅಂತಹ ದುಃಖವನ್ನೇ ಹೊಂದುತ್ತಾರೆ. ನಿಜದಲ್ಲಿ ನಿನ್ನ ಮಲತಾಯಿಯ ಮಾತು ಸತ್ಯವೇ. ನನ್ನನ್ನು ನಿನ್ನ ತಂದೆ ಪತ್ನಿಯಂತಲ್ಲ ಕನಿಷ್ಠ ಪಕ್ಷ ದಾಸಿಯಾಗಿಯೂ ಪರಿಗಣಿಸಿಲ್ಲ. ಅಂತಹ ದುರದೃಷ್ಟೆಯಾದ ನನ್ನ ಹೊಟ್ಟೆಯಲ್ಲಿ ನೀನು ಹುಟ್ಟಿರುವೆ. ಸುರುಚಿಯ ಮಾತುಗಳು ಕಠೋರವಾದರೂ ಅರ್ಥಗರ್ಭಿತವಾದುವು. ಉತ್ತಮನಂತೆಯೇ ನೀನೂ ಸಹಾ ರಾಜ್ಯ ಸಿಂಹಾಸನವನ್ನು ಅಲಂಕರಿಸಬೇಕೆಂದು ಕೊಂಡಲ್ಲಿ ಸುರುಚಿ ಹೇಳಿದ ಮಾತಿನಂತೆ ಈ ಕೂಡಲೇ ಭಗವಂತನ ಪಾದಪದ್ಮ ಸೇವೆಯಲ್ಲಿ ನಿರತನಾಗು.ಭಗವತ್ಪಾದ ಪದ್ಮ ಸೇವೆಯಿಂದಲೇ ನಿನ್ನ ಮುತ್ತಾತನಾದ ಬ್ರಹ್ಮದೇವನು ವಿಶ್ವರಚನೆಯನ್ನು ಮಾಡಿದ್ದಾನೆ. ನಿನ್ನ ತಾತನಾದ ಸ್ವಾಯಂಭು ಮನುವು ಸಹಾ ಯಜ್ಞದ ಮೂಲಕ ದೇವದೇವನನ್ನು ಸಂತೃಪ್ತಿ ಪಡಿಸಿ ಭೌತಿಕಸುಖವನ್ನು ಹೊಂದಿದ್ದೇ ಅಲ್ಲದೇ, ಕಡೆಗೆ ಮುಕ್ತಿಯನ್ನು ಹೊಂದಿದ್ದಾನೆ. ಪುತ್ರಾ! ಜನ್ಮ ಮೃತ್ಯುಗಳ ವಲಯದಿಂದ ಹೊರಬರಲು ಕೋರುವವರು ದೇವದೇವನ ಪಾದಪದ್ಮ ಸೇವೆಯನ್ನೇ ಆಶ್ರಯಿಸುತ್ತಾರೆ. ಆದ್ದರಿಂದ ನೀನೂ ಕೂಡಾ ಅನನ್ಯವಾದ ಭಕ್ತಿಯಿಂದ ಭಗವಂತನನ್ನು ಆಶ್ರಯಿಸು. ನಿನ್ನ ದುಃಖವನ್ನು ಶಮನಗೊಳಿಸುವವರು ಪದ್ಮಾಕ್ಷನಾದ ಭಗವಂತನೇ ಹೊರತು ಅನ್ಯರಲ್ಲ. ಬ್ರಹ್ಮಾದಿ ದೇವತೆಗಳು ಲಕ್ಷ್ಮಿದೇವಿಯನ್ನು ಒಲಿಸಿಕೊಳ್ಳಲು ಯತ್ನಿಸುತ್ತಿದ್ದರೆ ಆಕೆ ಮಾತ್ರ ಭಗವಂತನ ಸೇವೆಗೆ ಸದಾ ಸನ್ನದ್ಧಳಾಗಿರುತ್ತಾಳೆ.''

ಸುನೀತಿ ತನ್ನ ಮಗನಿಗೆ ಮಾಡಿದ ಉಪದೇಶ ಮಹತ್ತರ ವಾದುದು. ಮಕ್ಕಳನ್ನು ಭಕ್ತಿಮಾರ್ಗದಲ್ಲಿ ನಿಲ್ಲಿಸುವ ತಾಯ್ತಂದೆ ಯರು ನಿಜವಾದ ತಾಯ್ತೆಂದೆಯರು.ಇಲ್ಲಿ ಸುನೀತಿ ತನ್ನ ಮಗ ನಿಗೆ ಉತ್ತಮವಾದ ದುಃಖೋಪಶಮನದ ಮಾರ್ಗವನ್ನು ತೋರಿದ್ದಾಳೆ. ಸತ್ಯವೆಂದರೆ ಮನುಷ್ಯನು ಭಗವದಾಶ್ರಮದಲ್ಲಿ ಸೇರಿದರೆ ಕೋಟಿ ಮಾತೆಯರ ಅಪ್ಯಾಯಮಾನತೆಯನ್ನು ಪಡೆಯಬಲ್ಲರು.ಭಕ್ತರ ದುಃಖ ಶಮನಕ್ಕೆ ಶ್ರೀಕೃಷ್ಣನೇ ಸರ್ವಸಮರ್ಥನು. ತಾಯಿಯ ಮಾತನ್ನು ಕೇಳಿದ ಧ್ರುವನು ದೃಢನಿಶ್ಚಯವಾಗಿ ಮನೆಬಿಟ್ಟು ಅರಣ್ಯಮಾರ್ಗವನ್ನು ಹಿಡಿದಿದ್ದಾನೆ.ಇದನ್ನು ತಿಳಿದ ನಾರದಮುನಿ ಹೌಹಾರಿದ್ದಾನೆ. ದಾರಿಯಲ್ಲಿಯೇ ಭೇಟಿ ಮಾಡಿ ತನ್ನ ಹಸ್ತ ಕಮಲಗಳಿಂದ ಧ್ರುವನ ಶಿರವನ್ನು ತಾಗಿ ಆಶೀರ್ವಾದಿಸಿದ್ದಾನೆ. ಆದರೂ ಆ ಬಾಲನ ಧೃಡಸಂಕಲ್ಪವನ್ನು ಕೊಂಚ ಪರೀಕ್ಷಿಸಲು. ಹೀಗೆ ನುಡಿದಿದ್ದಾನೆ.

"ಬಾಲಕ! ಚಿಕ್ಕಮಕ್ಕಳಿಗೆ ಆಟ ಪಾಠಗಳು ಮುಖ್ಯವಾದು ವಲ್ಲವೇ? ಮಲತಾಯಿಯ ಮಾತನ್ನು ಹಿಡಿಸಿಕೊಳ್ಳುವುದೇಕೆ? ಎಲ್ಲವೂ ದೈವವಶದಿಂದಲೇ ಜರುಗುವುದಾದ್ದರಿಂದ ಅನುಕೂಲ - ಪ್ರತಿಕೂಲ ಎರಡರ ಪರಿಸ್ಥಿತಿಗಳಲ್ಲೂ ಸಂತೃಪ್ತಿ ಪಡಬೇಕು. ತಾಯಿಯ ಮಾತನನುಸರಿಸಿ ತಪಸ್ಸಿಗಾಗಿ ಹೊರಟಿದ್ದೀಯೆ. ಆದರೆ ಅದು ಸಾಮಾನ್ಯರಿಗೆ ಅಸಾಧ್ಯವಾದುದು. ಭಗವಂತ ನನ್ನು ಒಲಿಸಿಕೊಳ್ಳುವುದು ನೀನಂದುಕೊಂಡಷ್ಟು ಸುಲಭವಾದು ದಲ್ಲ. ನಿರಂತರ ಸಮಾಧಿಮಗ್ನರಾದ ಯೋಗಿಗಳಿಗೇ ಭಗ ವದನುಭೂತಿ ಸಾಲು ಜನ್ಮಗಳಿಗೂ ಧಕ್ಕಲಾರದ್ದು. ಆದ್ದರಿಂದ ಈ ಪ್ರಯತ್ನವನ್ನು ನಿಲ್ಲಿಸಿ ಮನೆಗೆ ಹೊರಡು ದೊಡ್ಡವನಾದ ಮೇಲೆ ಯೋಗಾಭ್ಯಾಸದ ದ್ವಾರ ಈ ಕಾರ್ಯವನ್ನು ಸಾಧಿಸ ಬಹುದು".

ನಾರದಮುನಿಯ ಮಾತನ್ನಾಲಿಸಿದ ಧ್ರುವನು ಇದಕ್ಕೆ ಸಮ್ಮತಿಸಲಿಲ್ಲ.ತನ್ನ ಹೃದಯದಲ್ಲಿ ಈ ಉಪದೇಶ ನಿಲ್ಲಲಾರ ದೆಂದೂ, ಕ್ಷತ್ರಿಯನಾದ ಕಾರಣಕ್ಕೆ ಮಲತಾಯಿಯ ಕುಹಕ ವಾಕ್ಯಗಳನ್ನು ಸಹಿಸುವ ಗುಣ ತನ್ನಲಿಲ್ಲವೆಂದು ನಿಖರವಾಗಿ ಹೇಳಿ ಬಿಟ್ಟಿದ್ದಾನೆ. ಮೂರು ಲೋಕಗಳಲ್ಲಿ ಇದುವರೆಗೆ ಯಾರು ಸಾಧಿಸಲಾಗದ ದಿವ್ಯವಾದ ಸ್ಥಾನವನ್ನು ತಾನು ಪಡೆಯಲಾಸಿ ಸುತ್ತಿರುವುದಾಗಿಯೂ ಅದನ್ನು ತಲುಪಲು ಸರಿಯಾದ ಮಾರ್ಗ ವನ್ನು ತೋರಿಸಬೇಕೆಂದು ಧ್ರುವನು ದೇವರ್ಷಿ ನಾರದರಲ್ಲಿ ಕೋರಿದ್ದಾನೆ. ಸಮಸ್ತ ಜೀವಿಗಳ ಕಲ್ಯಾಣಕ್ಕಾಗಿ ವಿಶ್ವವನ್ನೆಲ್ಲಾ ಪರ್ಯಟಿಸುವ ನಾರದಮುನಿ ತನಗೂ ಸಹಾ ಉತ್ತಮ ಲಾಭ ವನ್ನುಂಟು ಮಾಡಬೇಕೆಂದು ಬೇಡಿಕೊಂಡಿದ್ದಾನೆ. ಬಾಲಕನ ವಿನಮ್ರವಾದ ವಿನಂತಿಯನ್ನು ಕೇಳಿ ನಾರದರು ದಯಾಳುಗಳಾ ಗಿದ್ದಾರೆ.ಅಸಮಾನ ಕಾರುಣ್ಯದಿಂದ ಅವರಾಗ ಧ್ರುವನಿಗೆ ಮಾರ್ಗದರ್ಶನ ಮಾಡಿದ್ದಾರೆ.

"ಕೃಷ್ಣ ಭಕ್ತಿಯ ಕೈಹಿಡಿಯೆಂದು ನಿನ್ನ ತಾಯಿ ಸುನೀತ ಮಾಡಿದ ಉಪದೇಶವು ಯಥೋಚಿತವಾಗಿದೆ.ಆದ್ದರಿಂದ ಕೃಷ್ಣಭಕ್ತಿಯಲ್ಲೇ ನೀನು ನೆಲೆಗೊಳ್ಳಬೇಕು.ಧರ್ಮಾರ್ಥ

ಕಾಮಗಳನ್ನು ಕಡೆಗೆ ಮೋಕ್ಷವನ್ನು ಆಶಿಸುವ ಪ್ರತಿಯೊಬ್ಬರೂ ಶ್ರೀ ಹರಿಯ ಭಕ್ತಿಯಲ್ಲೇ ನೆಲೆನಿಲ್ಲಬೇಕಾಗುತ್ತದೆ.ಬಾಲಕಾ! ವತ್ಸಾ! ನೀನು ಯಮುನಾ ನದಿತೀರದಲ್ಲಿರುವ ಮಧುವನಕ್ಕೆ ತೆರಳು ಪ್ರತಿದಿನ ಆ ನದಿಯಲ್ಲಿ ಮೂರೂ ಹೊತ್ತು ಸ್ನಾನ ಮಾಡಿ ಅಷ್ಟಾಂಗಯೋಗದ ದ್ವಾರ ಸಮಾಧಿ ಸ್ಥಿತಿಯನ್ನು ಹೊಂದು.ಸಚ್ಚಿದಾನಂದ ಸ್ವರೂಪನಾದ ಶ್ರೀ ಕೃಷ್ಣ ಭಗವಂತನನ್ನು ನೀನು "ಓಂ ನಮೋ ಭಗವತೇ ವಾಸುದೇವಾಯ" ಎಂಬ ಮಂತ್ರದಿಂದ ಧ್ಯಾನಿಸು. ಈ ದ್ವಾದಶಾಕ್ಷರ ಮಂತ್ರ ಶ್ರೀ ಕೃಷ್ಣನ ಸೇವೆಗಾಗಿಯೇ ಇರುವುದು ಶ್ರೀ ಕೃಷ್ಣ ಮೂರ್ತಿಯನ್ನು ಪ್ರತಿಷ್ಠಾಪಿಸಿ ನಿತ್ಯ ಪೂಜಾ ಕೈಂಕರ್ಯಗಳನ್ನು ಮಾಡುತ್ತಾ,ಪುಷ್ಪಗಳನ್ನು,ಫಲಗಳನ್ನು ತುಳಸಿ ದಳಗಳನ್ನು ಸಮರ್ಪಿಸು. ಈ ವಿಧವಾಗಿ ಮಾಡುತ್ತಿದ್ದರೆ ನಿನಗೆ ಭಗವದ್ದರ್ಶನ ಉಂಟಾಗುತ್ತದೆ."

ನಾರದಮುನಿ ಈ ರೀತಿಯಾಗಿ ಉಪದೇಶ ಮಾಡುತ್ತಲೇ ಧ್ರುವನು ಪರಮಾನಂದದಿಂದ ಆತನಿಗೆ ಪ್ರದಕ್ಷಿಣೆ ನಮಸ್ಕಾರಗಳನ್ನು ಮಾಡಿದ್ದಾನೆ.ನಂತರ ನಾರದರು ಉತ್ತಾನ ಪಾದರಾಜನ ಬಳಿಗೆ ಹೋಗಿ ಈ ಪರಿಸ್ಥಿತಿಯನ್ನೆಲ್ಲಾ ಸಮೀಕ್ಷಿಸಿದ್ದಾರೆ. ಧ್ರುವನು ವನಕ್ಕೆ ತೆರಳಿದ ನಂತರ ಉತ್ತಾನ ಪಾದನಿಗೆ ಬುದ್ಧಿ ಬಂದಿದೆ. ಚಿಕ್ಕ ಮಡದಿಯ ಮೇಲಿನ ಪ್ರೇಮದಿಂದ ಸದ್ಗುಣ ಸಂಜಾತನಾದ ಧ್ರುವನನ್ನು ತಾನು ಆದರಿಸದೇ ಹೋದದ್ದಕ್ಕೆ ಆತ ಬಾಧೆಪಟ್ಟಿದ್ದಾನೆ. ಸುಕುಮಾರನಾದ ಧ್ರುವನು ಕಾಡಿನಲ್ಲಿ ಎಂತಹ ಕಷ್ಟಗಳ ಪಾಲಾಗುತ್ತಾನೋ ಎಂದು ವ್ಯಸನಕ್ಕೊಳಗಾಗಿದ್ದಾನೆ. ಕ್ರೂರಮೃಗಗಳು ಆತನನ್ನು ಬದುಕಗೊಡುತ್ತವೆಯೋ ಎಂದು ಪರಿತಪಿಸಿದ್ದಾನೆ. ಆದರೆ ನಾರದರು ರಾಜನ ಸಂಶಯವನ್ನು ಸಂಪೂರ್ಣವಾಗಿ ನಿವಾರಿಸಿದ್ದಾನೆ.ಧ್ರುವನು ಪ್ರಸ್ತುತ ಭಗವಂತನ ರಕ್ಷಣೆಯಲ್ಲಿದ್ದಾನೆಂದೂ, ಆತನಿಗೆ ಯಾವುದೇ ಭಯವಿಲ್ಲವೆಂದೂ ಜಗತ್ತಿನಲ್ಲಿ ಇದುವರೆಗೆ ಯಾರೂ ಸಾಧಿಸದ ಕಾರ್ಯವನ್ನು ಆತನು ಸಾಧಿಸಲನುವಾಗುತ್ತಿದ್ದಾನೆಂದೂ, ಧ್ರುವನಿಂದ ಉತ್ತಾನ ಪಾದನ ಕೀರ್ತಿಯು ವಿಸ್ತರಿಸಲಿದೆಯೆಂದೂ ನಾರದರು ಹೇಳಿದ್ದಾರೆ.

ಇನ್ನು ಇತ್ತ ಧ್ರುವನು ಗುರೂಪದೇಶಾನಂತರ ಯಮುನಾ ತೀರದಲ್ಲಿರುವ ಮಧುವನಕ್ಕೆ ತೆರಳಿ,ಸ್ನಾನಾನಂತರ ಉಪವಾಸ ಮಾಡಿದ್ದಾನೆ. ತನಗೆ ಉಪದೇಶವಾದ ರೀತಿಯಲ್ಲೇ ಭಗವದ್ದರ್ಚನೆಯಲ್ಲಿ ನಿರತನಾಗಿದ್ದಾನೆ. ಮೊದಲನೇ ತಿಂಗಳಲ್ಲಿ ಆತನು ಮೂರುದಿನಕ್ಕೊಮ್ಮೆ ಹಣ್ಣು - ಕಾಯಿಗಳನ್ನು ತಿನ್ನುತ್ತಾ ದೇವದೇವನನ್ನು ಆರಾಧಿಸಿದ್ದಾನೆ. ಎರಡನೇ ಮಾಸದಲ್ಲಿ ಆತನು ಆರು ದಿನಗಳಿಗೊಮ್ಮೆ ಅಗಳುಗಳನ್ನು, ತೃಣಗಳನ್ನು ತಿಂದು ದೇವತಾರ್ಚನೆಯನ್ನು ಮಾಡಲು ಅಭ್ಯಸಿಸಿದ್ದಾನೆ. ಮೂರನೇ ತಿಂಗಳಲ್ಲಿ ಒಂಭತ್ತು ದಿನಗಳಿಗೊಮ್ಮೆ ಒಂದು ಬಾರಿ ನೀರನ್ನು ಕುಡಿದು ಪೂರ್ತಿಯಾಗಿ ಸಮಾಧಸ್ತನಾಗಿ ಭಗವದ್ದರ್ಶನದಲ್ಲಿ ನೆಲೆನಿಂತಿದ್ದಾನೆ. ನಾಲ್ಕನೆ ತಿಂಗಳು ಪ್ರಾಣಾಯಾಮದಲ್ಲಿ ಸ್ಥಿತವಾಗಿ ಹನ್ನೆರಡು ದಿನಗಳಿಗೊಮ್ಮೆ ಕೇವಲ ಗಾಳಿಯನ್ನು ಕುಡಿದು ಕಂಬದಂತೆ ಸ್ತಬ್ದನಾಗಿ ಒಂಟಿಕಾಲಲ್ಲಿ ನಿಂತು ಪರಬ್ರಹ್ಮನ ಧ್ಯಾನದಲ್ಲಿ ಮಗ್ನನಾಗಿದ್ದಾನೆ. ಇಂದ್ರಿಯಗಳು ಹಾಗೂ ಇಂದ್ರಿಯಾರ್ಥಗಳನ್ನು ಸಂಪೂರ್ಣವಾಗಿ ನಿಗ್ರಹಿಸಿ ಮನಸ್ಸನ್ನು ಕೇವಲ ನಾರದ ವರ್ಣಿತ ಭಗವದ್ರೂಪದ ಮೇಲೆಯೇ ಏಕಾಗ್ರವನ್ನಾಗಿ ಮಾಡಿದ್ದಾನೆ.ಇದರಿಂದ ಮೂರು ಲೋಕಗಳು ಕಂಪಿಸಿ ಹೋಗಿವೆ.ಧ್ರುವನು ಒಂಟಿಕಾಲಲ್ಲಿ ನಿಂತು ತುಳಿದ ನೆಲವು ಕುಸಿದಂತೆ, ಹಡಗಿನಲ್ಲಿರುವ ಆನೆ ಭಾರಕ್ಕೆ ಹಡಗು ಅತ್ತಿತ್ತ ಕಂಪಿಸುವಂತೆ ಸ್ವಲ್ಪ ಭೂಮಿ ತಗ್ಗುಬಿದ್ದಿದೆ. ಧ್ರುವನ ವಾಯು ಸ್ತಂಭನದಿಂದ ಲೋಕಪಾಲರ ಶ್ವಾಸವೇ ನಿಂತು ಹೋಗಿದೆ. ಎಲ್ಲರೂ ಓಡುತ್ತಾ ಶ್ರೀಹರಿಯನ್ನು ಆಶ್ರಯಿಸಿದ್ದಾರೆ. ತಮ್ಮನ್ನು ರಕ್ಷಿಸಬೇಕೆಂದು ಬೇಡಿಕೊಂಡಿದ್ದಾರೆ.


ದೇವತೆಗಳ ಚಿಂತೆಗೆ ಕಾರಣವನ್ನು ತಿಳಿಯುತ್ತಲೇ ಭಗವಂತನು ಅವರೆಲ್ಲರಿಗೂ ಆಶ್ವಾಸನೆಯನ್ನಿತ್ತು ಭಕ್ತಧ್ರುವನ ಕಾರಣದಿಂದಲೇ ಈ ಉತ್ಪಾತವುಂಟಾಗಿದೆಯೆಂದು ವಿವರಿಸಿದ್ದಾನೆ. ಆ ಮಗುವಿಗೆ ತನ್ನ ದರ್ಶನವನ್ನೀಯುವುದಾಗಿ ಹೇಳಿ ಎಲ್ಲವನ್ನು ಸಜ್ಜುಗೊಳಿಸುವುದಾಗಿ ಹೇಳಿ ಆ ಲೋಕ ಪಾಲಕರನ್ನು ಹಿಂತಿರುಗಿ ಕಳಿಸಿದ ನಂತರ ಗರುಡಾ ರೂಢನಾಗಿ ಮಧುವನಕ್ಕೆ ಹೋಗಿದ್ದಾನೆ. ಈ ವನದಲ್ಲಿಯ ಯಮುನಾ ತೀರದ ಕಡೆಯಲ್ಲಿ ಧ್ಯಾನಮಗ್ನನಾಗಿದ್ದ ಧ್ರುವನ ಹೃದಯದಲ್ಲಿ ದರ್ಶನ ಕೊಟ್ಟು ಆ ಭಗವದ್ರೂಪ ಮಾಯವಾಗಿದೆ. ಭಗವದ್ದರ್ಶನದಿಂದ ಧ್ರುವನು ಪುಲಕಿತಗೊಂಡಿದ್ದಾನೆ. ವಿಚಲಿತನಾದ ಧ್ರುವನು ಕಣ್ತೆರೆದು ನೋಡಿದ್ದಾನೆ-ಅಷ್ಟೆ; ಅದೇ ಅದೇ.. ಅಲ್ಲಿಯವರೆಗೂ ಹೃದಯದಲ್ಲಿ ದರ್ಶನಕೊಟ್ಟ ರೂಪವೇ ಎದುರಿಗೆ ದರ್ಶನವಿತ್ತಿದೆ.ಆ ದರ್ಶನ ಧ್ರುವನನ್ನು ರೋಮಾಂಚನಗೊಳಿಸಿದೆ. ಬಹು ಸಂಭ್ರಮದಿಂದೊಡಗೂಡಿ ಸಾಷ್ಟಾಂಗ ನಮಸ್ಕಾರಗಳನ್ನು ಮಾಡಿದ್ದಾನೆ. ಭಗವಂತನ ಪಾದಪದ್ಮಗಳನ್ನು ಚುಂಬಿಸುವಂತೆ, ಬಾಹುಗಳಿಂದ ದೇವದೇವನನ್ನು ಆಲಂಗಿಸುವಂತೆ, ಕಣ್ಣುಗಳಿಂದ ಆತನ ರೂಪ ಸುಧೆಯನ್ನು ಪಾನಗೈಯುವಂತೆ ಧ್ರುವನು ಪರವಶದಿಂದ ಭಗವಂತನನ್ನು ನೋಡುತ್ತಲೇ ನಿಂತಿದ್ದಾನೆ. ಬಾಯ್ತುಂಬಾ ಭಗವಂತನನ್ನು ಕೀರ್ತಿಸಬೇಕೆಂದು ಅಂದು ಕೊಂಡಿದ್ದಾನೆ. ಆದರೆ ಬಾಯಿಂದ ಮಾತುಗಳೇ ಹೊರಡಲೊಲ್ಲವು. ಆಗ ಶ್ರೀಹರಿಯೇ ತನ್ನ ಶಂಖವನ್ನು,ಆ ಬಾಲಕನ ಕಪಾಳಕ್ಕೆ ತಾಗಿಸಿದ್ದಾನೆ.ಅದರಿಂದ ವೇದಸಾರಗಳು ಧ್ರುವನಿಗೆ

ಆವಾಹನಗೊಂಡಿವೆ.ಭಗವದತ್ತವಾದ ಜ್ಞಾನದಿಂದ ಭಕ್ತ ಧ್ರುವನು ಭಗವಂತನನ್ನು ಸ್ತುತ್ತಿಸಿದ್ದಾನೆ. ದಿವ್ಯವಾದ ವರವನ್ನು ಪಡೆಯಬೇಕೆಂಬ ವಾಂಛೆಯಿಂದ ತಪಸ್ಸನ್ನು ಆರಂಭಿಸಿದ ಧ್ರುವನಿಗೆ ಭಗವದ್ದರ್ಶನದಿಂದ ಆ ಆಸೆಯೇ ಹೊರಟು ಹೋಗಿದೆ.ಭಗವತ್ಸೇವೆಗಿಂತಲೂ ಮಿಗಿಲಾದ ವರವು ಮತ್ತೊಂದಿಲ್ಲ ಎಂದೆನಿಸಿ ಬಿಟ್ಟಿದೆ.

ಭಕ್ತಧ್ರುವನ ಪ್ರಾರ್ಥನೆಯಿಂದ ಸಂತುಷ್ಟನಾದ ಭಗವಂತನು ಆತನಿಗೆ ದಿವ್ಯವಾದ ವರಗಳನ್ನು ನೀಡಿದ್ದಾನೆ. “ರಾಜಕುಮಾರ! ಧ್ರುವಾ ಪರಮ ದುರ್ಲಭವಾದ ವರವನ್ನು ನಾನು ನಿನಗೆ ಕೊಡುತ್ತಿದ್ದೇನೆ. ಕಲ್ಪಾಂತರದಲ್ಲಿ ಪ್ರಳಯಾನಂತರ ಸಹ ನೀನು ಉಳಿದು ಕೊಂಡೇ ಇರುವೆ ಧ್ರುವ ಲೋಕವನ್ನು ನಾನು ನಿನಗೆ ಬಿಟ್ಟು ಕೊಡುತ್ತಿದ್ದೇನೆ. ಸಮಸ್ತ ಗ್ರಹನಕ್ಷತ್ರಗಳು ಅದಕ್ಕೆ ನಿರಂತರವಾಗಿ ಪ್ರದಕ್ಷಿಣೆ ಹಾಕುತ್ತಿರುತ್ತವೆ. ನಿನ್ನ ತಂದೆಯ ನಂತರ ನೀನು ಮೂನ್ನೂರ ಹದಿನಾರು ವರ್ಷಗಳ ಕಾಲ ರಾಜ್ಯಭಾರ ಮಾಡುತ್ತಿಯೆ. ನಿನ್ನ ಇಂದ್ರಿಯ ಪಟುತ್ವವು ಎಂದೂ ಕುಗ್ಗುವುದಿಲ್ಲ. ನಿನಗೆ ವೃದ್ಧಾಪ್ಯವೂ ಬಾರದು. ನಿನ್ನ ಸೋದರನಾದ ಉತ್ತಮನು ಒಂದು ಸಾರಿ ಅಡವಿಯಲ್ಲಿ ಬೇಟೆಗೆ ಹೋಗಿ ಒಬ್ಬ ಯಕ್ಷನಿಂದ ಕೊಲ್ಲಲ್ಪಡುತ್ತಾನೆ. ಪುತ್ರನ ಮರಣದ ಸುದ್ಧಿ ಕೇಳಿ ನಿನ್ನ ಮಲತಾಯಿ ಸುರುಚಿ ತನ್ನ ಪುತ್ರನನ್ನು ಅರಸುತ್ತಾ ಅರಣ್ಯಕ್ಕೆ ಉನ್ಮತ್ತಳಾಗಿ ಹೋಗಿ ಕಾಳ್ಗಿಚ್ಚಿನಲ್ಲಿ ಭಸ್ಮಗೊಳ್ಳುತ್ತಾಳೆ. ಯಜ್ಞಗಳಿಗೆಲ್ಲಾ ಹೃದಯವು ನಾನೇ. ಸಮಸ್ತ ಯಜ್ಞಗಳಿಂದ ನೀನು ನನ್ನನ್ನು ಪೂಜಿಸುತ್ತೀಯೆ. ಇಹಲೋಕದಲ್ಲಿ ಸಮಸ್ತ ಸೌಖ್ಯಗಳನ್ನು ಅನುಭವಿಸಿ ಅಂತ್ಯದಲ್ಲಿ ನೀನು ನನ್ನನ್ನೇ ಹೊಂದುವೆ ಸರ್ವಲೋಕ ನಿವಾಸಿಗಳಿಂದ ನಮಸ್ಕರಿಸಲ್ಪಡುವ ನೀನು ಧ್ರುವ ಲೋಕ ಸೇರಿ ಈ ಭೌತಿಕ ಜಗತ್ತಿಗೆಂದಿಗೂ ಹಿಂತಿರುಗಿ ಬರಲಾರೆ” ಎಂದು ಭಗವಂತನು ಧ್ರುವನನ್ನು ಆಶೀರ್ವಾದಿಸಿದನು. ತದನಂತರ ಭಕ್ತಧ್ರುವನು ನೋಡು ನೋಡುತ್ತಲೇ ಭಗವಂತನು ಗರುಡವಾಹನನಾಗಿ ತನ್ನ ಧಾಮಕ್ಕೆ ಹೊರಟು ಹೋಗಿದ್ದಾನೆ.

ಧ್ರುವಲೋಕವೇ ಭೌತಿಕಜಗತ್ತಿನಲ್ಲಿ ವಿಷ್ಣುಧಾಮ. ಅದರಲ್ಲಿ ಕ್ಷೀರಸಾಗರ.ಆ ಸಾಗರದಲ್ಲಿ ಶ್ವೇತದ್ವೀಪವೆಂಬ ಸುಪ್ರಸಿದ್ಧ ದ್ವೀಪವಿದೆ.ಇದು ಸಪ್ತ ಋಷಿ ಮಂಡಲದ ಮೇಲಿದೆ.ಧ್ರುವಲೋಕ ಸಾಕ್ಷಾತ್ ವಿಷ್ಣು ಲೋಕವೇ ಆದ್ದರಿಂದ ಸಕಲ ಲೋಕಗಳಿಂದ, ಸಕಲ ಲೋಕನಿವಾಸಿಗಳಿಂದ ಪೂಜೆಗೊಳ್ಳುವಂತಹುದೂ ಹೌದು.ಪ್ರಳಯ ಸಮಯ ಕಾಲದಲ್ಲಿ ಕೂಡಾ ಧ್ರುವಲೋಕ ಇತರ ವೈಕುಂಠ ಲೋಕಗಳಂತೆ ನಾಶ ರಹಿತದ್ದಾಗಿರುತ್ತದೆ. ಭಕ್ತಧ್ರುವನ ಚರಿತೆಯು ಎಷ್ಟೋ ಸ್ಫೂರ್ತಿದಾಯಕವಾದುದು.ಆಕರ್ಷಣೀಯವಾದುದು.ಶ್ರೀ ಚೈತನ್ಯ ಮಹಾಪ್ರಭು ಭಕ್ತ ಧ್ರುವನ ಚರಿತೆಯನ್ನು, ಭಕ್ತ ಪ್ರಹ್ಲಾದನ ಚರಿತೆಯನ್ನು ನಿತ್ಯವೂ ಕೇಳಿ, ಓದಿ ಪುಳಕಿತ ಗೊಳ್ಳುತ್ತಿದ್ದರೆಂದು ಹೇಳಲಾಗಿದೆ.ಭೌತಿಕ ಸಂಪತ್ತುಗಳ ದ್ವಾರ ಹೇಗೆ ವೈರಾಗ್ಯವನ್ನು ಹೊಂದಬಹುದೋ, ಯಾವ ರೀತಿಯಲ್ಲಿ ತೀವ್ರವಾದ ತಪಸ್ಸಿನ ಮೂಲಕ ಭಕ್ತಿಯನ್ನು ವೃದ್ಧಿಸಿಕೊಂಡು ಭಗವದ್ದರ್ಶನವನ್ನು ಹೊಂದಬಹುದೋ ಸಾಧಕನು ಧ್ರುವ ಚರಿತೆಯ ಮೂಲಕ ಅದನ್ನು ಕಲಿತುಕೊಳ್ಳಬಹುದು, ಧ್ರುವ ಚರಿತೆಯನ್ನು ಕೇಳುವುದರಿಂದ ಮನುಷ್ಯನ ಹೃದಯದಲ್ಲಿ ಭಗವಂತನ ಕುರಿತು ಭಕ್ತಿ ಮೊಳೆಯುತ್ತದೆ.ಭಗವಂತನೊಂದಿಗೆ ಪ್ರತ್ಯಕ್ಷ ಸಂಬಂಧ ಹೊಂದಲು ಮನಸು ಹಾತೊರೆಯುತ್ತದೆ. ಈ ರೀತಿಯಾಗಿ ಭಕ್ತನು ಉತ್ತಮವಾದ ಭಕ್ತಿ ಯೋಗ ಸ್ಥಿತಿಯನ್ನು ತಲುಪುತ್ತಾನೆ. ಬಾಲ್ಯದಲ್ಲಿಯೇ ಭಗವದ್ದರ್ಶನ ಹೊಂದಿದ ಧ್ರುವನು ಧನ್ಯನು. ತನ್ನ ಸುತನಿಗೆ ಉತ್ತಮ ಬೋಧನೆಯ ಮೂಲಕ ಭಗವದ್ದರ್ಶನಾವಕಾಶವನ್ನು ಕಲ್ಪಿಸಿಕೊಟ್ಟ ಸುನೀತ ಅದಕ್ಕೂ ಮಿಗಿಲಾದ ಧನ್ಯವಂತಳು. ಕಡೆಗೆ ಇಬ್ಬರೂ ಜೀವನದ ಪರಿಪೂರ್ಣತೆಯನ್ನು ಹೊಂದಿದ್ದಾರೆ. ಎಲ್ಲರಿಗೂ ಮಾರ್ಗದರ್ಶಕರಾಗಿದ್ದಾರೆ. ಹರೇ ಕೃಷ್ಣ!


# ಹೆಲ್ಮೆಟ್ ತಪ್ಪದೇ ಧರಿಸಬೇಕು



**ತಿರುಪತಿಯಿಂದ ತಿರುಮಲೆಗೆ, ತಿರುಮಲೆಯಿಂದ ತಿರುಪತಿಗೆ ದ್ವಿಚಕ್ರವಾಹನದಲ್ಲಿ ಹೋಗಬಯಸುವ ಪ್ರಯಾಣಿಕರು, ಭಕ್ತರು ತಪ್ಪದೇ ಹೆಲ್ಮೆಟ್‌ನ್ನು ಧರಿಸಬೇಕು. ಇದರಿಂದ ಅಪಘಾತಗಳನ್ನು ತಡೆಯಬಹುದು.**

**ಹೆಲ್ಮೆಟ್ ಧರಿಸಿ ವಾಹನ ನಡೆಸಿ**



# ಹಿಮಾಲಯ ಮತ್ತು ಆಧ್ಯಾತ್ಮ ಒಂದು ಚಿಂತನೆ

-ಶ್ರೀಮತಿ. ನಂ. ನಾಗಲಕ್ಷ್ಮೀ

ಪ್ರಕೃತಿ ಇಲ್ಲಿ ಪ್ರಶಾಂತ, ಆದರೆ ನಿಗೂಢ, ಆಕರ್ಷಕ, ಆದರೆ ಅರ್ಥಪೂರ್ಣ,ರೌದ್ರ,ಜೊತೆಗೆ ರಮಣೀಯ. ಅಗೋಚರವಾದ ಅಸಂಖ್ಯ ರಹಸ್ಯಗಳನ್ನು ತನ್ನ ಗರ್ಭದಲ್ಲಿಟ್ಟುಕೊಂಡ ಅಡಗುದಾಣ. ಇಲ್ಲಿದೆ ಗಾಢ ಮೌನ. ಎಲ್ಲೆಲ್ಲೂ ಸ್ಥಿತ ಪ್ರಜ್ಞತೆಯನ್ನು ಸಾರುತ್ತಿರುವ ಅಗೋಚರ ಶಕ್ತಿಯಿರುವ ಅನುಭವ.ನೋಡುತ್ತಿರುವವರಲ್ಲಿ ಅರ್ಥವ್ಯಾಪ್ತಿ ಮೀರಿದ ಮಿಶ್ರಭಾವ ತರಂಗಗಳ ಹೊಯ್ದಾಟ. ಇವೆಲ್ಲ ಇಲ್ಲಿನ ಅಂಗುಲ ಅಂಗುಲದಲ್ಲಿ, ಕಣಕಣದಲ್ಲಿ, ಕ್ಷಣ ಕ್ಷಣಕ್ಕೂ ಹೊರಹೊಮ್ಮುವ ಮೌನ ಸಂದೇಶಗಳು, ಎಲ್ಲಕ್ಕಿಂತ ಹೆಚ್ಚಾಗಿ ಮಾನವ ತನ್ನನ್ನು ತಾನು ಅರಿತುಕೊಳ್ಳುವ ಅದ್ಭುತವಾದ ಜ್ಞಾನಕೇಂದ್ರ. ಪ್ರಕೃತಿಯೇ ಇಲ್ಲಿ ಕಲಿಸುವ ಗುರು, ಕಲಿಯುವ ಪಾಠಗಳು ಹಲವಾರು. ಲೌಕಿಕ ಪ್ರಪಂಚದ ವ್ಯವಹಾರಗಳಿಂದ ಸಂಪೂರ್ಣವಾಗಿ ಭಿನ್ನವಾದ ಬೇರೆಯೇ ನೆಲೆಗೆ ಕೊಂಡೊಯ್ದು ಆಧ್ಯಾತ್ಮ ಪ್ರಪಂಚದ ಸ್ತರದ ಕಡೆಗೆ ದಾರಿ ತೋರುವ ವಿಶಿಷ್ಟ ಶಕ್ತಿಯೊಂದರ ಮಾರ್ಗದರ್ಶನ ಇಲ್ಲಿ ಲಭ್ಯ. ಆ ಶಕ್ತಿಯ ಸ್ವರೂಪ ಯಾರಿಗೂ ತಿಳಿಯದಾದರೂ ಅಂತಹ ಒಂದು ಶಕ್ತಿ ಇಲ್ಲಿದೆಯೆಂಬ ಭಾವವನ್ನು ಮೂಡಿಸುವ ವಿಶೇಷ ಸ್ಥಳವೇ ಈ ಹಿಮಾಲಯವೆಂಬ ಅದ್ಭುತವಾದ ಪ್ರದೇಶ ಅದಕ್ಕೇ ಈ ಕವಿವಾಣಿಯ ಅರ್ಪಣೆ ಸೂಕ್ತವೆನಿಸುತ್ತದೆ.

ಶ್ರೀವಿಷ್ಣುವಿಶ್ವಾದಿಮೂಲ ಮಾಯಾಲೋಲ,
ದೇವ ಸರ್ವೇಶ ಪರಬೊಮ್ಮನೆಂದು ಜನಂ॥
ಆವುದನು ಕಾಣದೊಡಮಳ್ತಿಯಿಂ ನಂಬಿಹುದೊ।
ಆ ವಿಚಿತ್ರಕೆ ನಮಿಸೊ ಮಂಕುತಿಮ್ಮ ॥

ಡಿ.ವಿ.ಜಿ.

ಆ ದೇವನೆಂಬ ಶಕ್ತಿಗೆ ನಾವು ಹಲವು ರೂಪಗಳನ್ನು ಕಲ್ಪಿಸಿರಬಹುದು.ಹಲವು ಹೆಸರುಗಳನ್ನು ನೀಡಿರಬಹುದು. ಮಾನವ ಶಕ್ತಿಗೆ ಮೀರಿದ ಶಕ್ತಿ ಸ್ವರೂಪಿಯೆಂದು ಭಾವಿಸಿರಬಹುದು. ಆದರೆ, ಕಣ್ಣಿಗೆ ಕಾಣದ ಆ ಅದ್ಭುತವಾದ ಒಂದು ಮಹಾಶಕ್ತಿಯ ಕಿಂಚಿತ್ ದರ್ಶನ ಈ ರೂಪದಲ್ಲಿ ಸಾಕ್ಷಾತ್ಕರಿಸಿದೆಯೆಂಬ ಭಾವ ಇಲ್ಲಿ ಮೂಡುವುದು ಸತ್ಯ. ಅದಕ್ಕೇ ಈ ಪರಿಸರದಲ್ಲಿ ಅನುಭವವೇದ್ಯವಾಗುವ ಭಾವಗಳು ಒಂದೆರಡಲ್ಲ. ಇಲ್ಲಿ ಸೌಂದರ್ಯದ ಆರಾಧಕರು ಕಣ್ತುಂಬಿಕೊಳ್ಳುತ್ತಾರೆ. ಸಂಶೋಧಕರು,ಸಾಹಸಿಗಳು ತಮ್ಮ ಗುರಿ ಸಾಧನೆಯಲ್ಲಿ ಯಶಸ್ವಿಗಳಾದ ಸಮಾಧಾನವನ್ನು ಪರಿಶ್ರಮದೊಂದಿಗೆ ಪಡೆದು ಕೊಳ್ಳುತ್ತಾರೆ. ಆಧ್ಯಾತ್ಮದ ಹಂಬಲವಿದ್ದವರು ಧನ್ಯತೆಯ ಅನುಭವಗಳನ್ನು ತಮ್ಮದಾಗಿಸಿಕೊಳ್ಳುತ್ತಾರೆ. ಬಯಸಿದ್ದನ್ನು ಅವರವರಿಗೆ ನೀಡುವ ಅದ್ಭುತವಾದ ಈ ಹಿಮಾಲಯ ಹಾಕುವ ಸವಾಲು ಅದಕ್ಕೇ ಎಲ್ಲರಲ್ಲಿ ಬೆರಗು ಮೂಡಿಸುತ್ತದೆ, ಭಯ, ಭಕ್ತಿಯಿಂದ ತಲೆಬಾಗಿಸುವಂತೆ ಮಾಡುತ್ತದೆ. ಅದಕ್ಕೇ ಈ ಕವಿವಾಣಿಯನ್ನು ಮತ್ತೆ ಮತ್ತೆ ಇದಕ್ಕೆ ಅನ್ವಯಿಸಬಹುದೆನಿಸುತ್ತದೆ.

"ನಾನೇರುವೆತ್ತರಕೆ ನೀನೇರಬಲ್ಲೆಯಾ? " (ವರಕವಿ ಬೇಂದ್ರೆ)

"ಸತ್ಯಂ ಶಿವಂ ಸುಂದರಂ"ಎಂಬುದರ ದರ್ಶನದ ಜೊತೆಗೇ ವಾಸ್ತವತೆಯ ಕಟು ಅಂಶಗಳ ಪರಿಚಯವೂ ನಮಗಿಲ್ಲಿ ಆಗುತ್ತದೆ. ಈ ಹಿಮಾಲಯಕ್ಕೆ ಹಿಮಾಲಯವೇ ಸಾಟಿ. ಇಲ್ಲಿನ ಭವ್ಯತೆಗೆ,ಗಾಂಭೀರ್ಯಕ್ಕೆ,ಸೌಂದರ್ಯಕ್ಕೆ ಯಾವುದೂ ಸಮವಲ್ಲ.ಇಲ್ಲಿನ ಪ್ರತಿ ಅಂಶವೂ ಮಾನವನ ಮಿತಿಯನ್ನು ಸಾರುತ್ತದೆ. ಇದರ ವಿರಾಟ್ ಸ್ವರೂಪ ಊಹಿಸಲಸಾಧ್ಯ.

ಭಾರತೀಯರಿಗೆ ಇದು ಕೇವಲ ಒಂದು ಪರ್ವತವಷ್ಟೇ ಅಲ್ಲ. ವಿಶ್ವದ ಅನೇಕ ದೇಶಗಳಲ್ಲಿ ಕೂಡ ಪರ್ವತಗಳಿದ್ದರೂ ಹಿಮಾಲಯ ಪರ್ವತ ಮಾತ್ರ ತನ್ನದೇ ಆದ ಹಲವು ವೈಶಿಷ್ಟ್ಯಗಳನ್ನು ಹೊಂದಿದೆ. ಇದು ನಮ್ಮಲ್ಲಿ ಉಂಟುಮಾಡುವ ಭಾವ ವೈವಿಧ್ಯಕ್ಕೆ ಅದರದೇ ಆದ ನೆಲೆಯುಂಟು, ವಿಶೇಷವುಂಟು. ನಮ್ಮ ಪುರಾಣಗಳು ನಮ್ಮ ಧರ್ಮ ಸಂಸ್ಕೃತಿಯ ಮೂಲ ಆಕರಗಳಲ್ಲಿ ಮುಖ್ಯವೆನಿಸಿಕೊಂಡಿವೆ.ಆ ಪುರಾಣಗಳಲ್ಲಿ ಹಿಮಾಲಯಕ್ಕೆ ಮಹತ್ವದ, ಪವಿತ್ರವಾದ ಸ್ಥಾನವನ್ನು ನೀಡಲಾಗಿದೆ.ಇದರ ಭೌಗೋಳಿಕ ಸ್ವರೂಪದ ಅಗಾಧತೆಯೂ ಇಲ್ಲಿ ಸೇರಿಕೊಂಡಿದ್ದು, ಒಂದು ಕಾಲ್ಪನಿಕವೂ ಭಾವ ಪ್ರಧಾನವೂ ಆಗಿದ್ದರೆ,ಮತ್ತೊಂದು ದೃಷ್ಟಿಯಿಂದ ಇದು ವಾಸ್ತವತೆಯ ಚಿತ್ರವನ್ನು ಮುಂದಿಡುತ್ತ ವಿಚಾರ ಪ್ರಧಾನವಾಗಿದ್ದು ಹಲವು ಅಂಶಗಳನ್ನು ಅನಾವರಣ ಮಾಡುತ್ತದೆ.

ಹಿಮಾಲಯ ಒಂದು ಪುಣ್ಯಭೂಮಿ, ದೇವಾನು ದೇವತೆಗಳ ವಾಸಸ್ಥಾನ. ಋಷಿಮುನಿಗಳು ತಪಶ್ಚರ್ಯೆಯಲ್ಲಿ ತೊಡಗಿರುವ ಪುಣ್ಯಕ್ಷೇತ್ರ.ತನ್ನ ಗರ್ಭದೊಳಗೆ ನೂರಾರು ಪುರಾಣ ಕಥೆಗಳನ್ನು ಅಡಗಿಸಿಕೊಂಡಿರುವ ಧರ್ಮಕ್ಷೇತ್ರ. ಇಲ್ಲಿ ಹುಟ್ಟಿ ಇಳಿದು ಬರುವ ನದಿಗಳೆಲ್ಲ ಪುಣ್ಯ ನದಿಗಳು.ದೇವನದಿ ಗಂಗೆಯೂ ಸೇರಿದಂತೆ ಇವೆಲ್ಲವೂ ತಮ್ಮ ತಮ್ಮ ಹಿನ್ನೆಲೆಯಲ್ಲಿ ರೋಚಕವಾದ ಕಥೆಗಳನ್ನು ಹೊಂದಿವೆ. ಬಹುತೇಕ ನದಿಗಳು. ಪೌರಾಣಿಕ ಅಂಶಗಳನ್ನು ಪಡೆದುಕೊಂಡಿವೆ.ಇಲ್ಲಿನ ಸರೋವರಗಳೆಲ್ಲ ದೇವತೆಗಳು ಜಲಕ್ರೀಡೆಯಾಡುವ ಪವಿತ್ರ ತೀರ್ಥಗಳು. ಈ ಎಲ್ಲ ಅಂಶಗಳು ನಮ್ಮಲ್ಲಿ ಧಾರ್ಮಿಕತೆಯ ಮನೋಭಾವವನ್ನು ಮೂಡಿಸುವುದರ ಜೊತೆಗೆ ನಮ್ಮನ್ನು ಲೌಕಿಕ ಅಂಶಗಳ ಆಕರ್ಷಣೆಯಿಂದ ದೂರವುಳಿಯುವ ಆಲೋಚನೆಯನ್ನು ಮೂಡಿಸುತ್ತದೆ.ಇಲ್ಲಿ ಕೇಳುವ ಬೀಸು ಗಾಳಿಯ ಶಬ್ದದಲ್ಲಿ ಓಂಕಾರವೆಂಬ ನಾದತರಂಗದ ಅಲೌಕಿಕತೆಯ ಅನುಭವವನ್ನು ಪಡೆದುಕೊಂಡವರಿದ್ದಾರೆ. 'ಮಾತು ಬೆಳ್ಳಿ ಮೌನ ಬಂಗಾರ' ಎಂಬ ಲೋಕೋಕ್ತಿಯಂತೆ ಶಬ್ದಗಳನ್ನು ಮೀರಿದ ಅಸಂಖ್ಯಾತ ಭಾವ ಸಂವಹನ ಎಲ್ಲಿಂದಲೋ ಬಂದು ನಮ್ಮೊಂದಿಗೆ ಸ್ಪಂದಿಸುತ್ತಿರುವಂತಾಗುತ್ತದೆ. ಇಡೀ ಪರಿಸರದಲ್ಲಿ ಒಂದು ವಿಶೇಷ ಕಂಪನವಿದ್ದು ಅದು ನಮ್ಮಲ್ಲಿ ಒಂದು ಅಪೂರ್ವ ಶಕ್ತಿಯನ್ನು ತುಂಬಿದಂತೆ ಭಾಸವಾಗುತ್ತದೆ. ಬಹುಶಃ ಇದೆಲ್ಲ ಅನುಭವವೇದ್ಯವೇ ಆಗಿರುವುದರಿಂದ ಮತ್ತೊಬ್ಬರಿಂದ ಕೇಳಿ ತಿಳಿಯುವ, ಅರ್ಥ ಮಾಡಿಕೊಳ್ಳುವ ಸಂಗತಿಗಳಾಗುವುದಿಲ್ಲ. ಈ ಕಂಪನದ ಕಾರಣವೂ ವಿವರಿಸಲಾಗದ ಒಂದು ಅದ್ಭುತ ಶಕ್ತಿಯ ಪ್ರಭಾವವಿರಬಹುದು. ಅಥವಾ ಯಾವುದೋ ವೈಜ್ಞಾನಿಕ ರಹಸ್ಯವೊಂದರ ನಿಗೂಢ ಸತ್ಯವೊಂದರ, ಆವಿಷ್ಕಾರಗೊಂಡಿರದ ಒಂದು ವಿಶೇಷ ಸಂಗತಿಯಾಗಿರಬಹುದು, ಇಲ್ಲವೇ ನಮ್ಮ ಪೌರಾಣಿಕ ಸಂಗತಿಗಳ ಹಿನ್ನೆಲೆ ನಮ್ಮಲ್ಲಿ ಬೆಳೆಸಿರುವ ಭಾವ ಪ್ರಪಂಚದ ತುಣುಕುಗಳಾಗಿರಬಹುದು.ಒಟ್ಟಿನಲ್ಲಿ ಈ ಪರಿಸರವು "ಅವರವರ ಭಾವಕ್ಕೆ ಅವರವರ ಭಕುತಿಗೆ" ಎಂಬಂತೆ ಹಲವು ರೀತಿಗಳಲ್ಲಿ ತನ್ನ ಪ್ರಭಾವವನ್ನು ಬೀರುತ್ತಿರುವುದು ಎಂದಿನಿಂದಲೂ ಕೇಳುತ್ತ ಬಂದಿರುವ ಮಾತು.

ಈ ಎಲ್ಲ ಅಂಶಗಳು ಹಿಮಾಲಯದ ಬಗ್ಗೆ ನಮ್ಮಲ್ಲಿ ಕುತೂಹಲದೊಂದಿಗೆ ಗೌರವವನ್ನು, ಭಕ್ತಿಯನ್ನು ಮೂಡಿಸುತ್ತ ಆರಾಧಿಸುವಂತೆ ಮಾಡುತ್ತದೆ. ಇದರ ಅಗಾಧ ಸ್ವರೂಪವೇ ನಾವಿಲ್ಲಿಗೆ ಪ್ರವೇಶಿಸುತ್ತಿದ್ದಂತೆಯೇ ಒಂದು ಆಧ್ಯಾತ್ಮಿಕ ಪ್ರಪಂಚಕ್ಕೆ ಕಾಲಿಟ್ಟ ಭಾವವನ್ನು ಮೂಡಿಸುತ್ತದೆ. ಆದ್ದರಿಂದಲೇ ಇರಬಹುದು.ಹಿಂದೂಗಳೆಲ್ಲ ಬೇರೆ ಬೇರೆ ಪಂಥಗಳಿಗೆ ಸೇರಿದ್ದರೂ ಕೂಡ ಇಲ್ಲಿನ ನೆಲದ ಬಗ್ಗೆ ಪೂಜ್ಯಭಾವವನ್ನು ಮೂಡಿಸುತ್ತದೆ. ಮನಸ್ಸಿನ ಕಲ್ಮಶ ಭಾವಗಳನ್ನು ದೂರಮಾಡಿ ಆತ್ಮ ಪರೀಕ್ಷೆ ಮಾಡಿಕೊಳ್ಳುವ ಮೂಲಕ ವ್ಯಕ್ತಿತ್ವವನ್ನು ಸಂಸ್ಕಾರಗೊಳಿಸಿಕೊಳ್ಳುವ ಪ್ರಯತ್ನದಲ್ಲಿ ತೊಡಗುವಂತೆ ಪ್ರೇರಣೆ ನೀಡುತ್ತದೆ. ಒಂದು ಅಲೌಕಿಕ ಶಕ್ತಿಯ ಕೈವಾಡವೇ ಇದೆಲ್ಲದರ ಹಿಂದೆ ಇದೆಯೆಂಬ ಅಭಿಪ್ರಾಯವನ್ನು ಮೂಡಿಸುತ್ತದೆ. ಆಸ್ತಿಕರಾದವರಿಗಂತೂ ಇಲ್ಲಿನ ಕಣಕಣವೂ ಪವಿತ್ರವೇ.

ಹಿಮಾಲಯ ಒಂದು ಅಯಸ್ಕಾಂತದಂತೆ. ಒಮ್ಮೆ ಇದನ್ನು ಕಂಡವರು ಮತ್ತೆ ಮತ್ತೆ ಇದರೆಡೆಗೆ ಸೆಳೆಯಲ್ಪಡುತ್ತಾರೆ. ಇದು ತನ್ನಲ್ಲಿ ಹುದುಗಿಸಿಕೊಂಡಿರುವ ರಹಸ್ಯಗಳು ಸಾವಿರಾರು, ಮತ್ತೆ ಮತ್ತೆ ಹೊಸ ಹೊಸ ವಿಚಾರಗಳನ್ನು ನಮಗೆ ತಿಳಿಸುತ್ತವೆ.ಇನ್ನಷ್ಟು, ಮತ್ತಷ್ಟು ತಿಳಿಯಬೇಕೆಂಬ ಜ್ಞಾನ ದಾಹವನ್ನು ಮೂಡಿಸುತ್ತದೆ.ಏಕೆಂದರೆ ಈ ಅಗಾಧ ವೈವಿಧ್ಯಮಯ ಅಂಶಗಳಿಂದ ಕೂಡಿದ ಪ್ರದೇಶದ ದರ್ಶನ ನಮಗಾಗುವುದು ಆ ಸೃಷ್ಟಿಕರ್ತ ಶಕ್ತಿಯ ಲಿಪಿಯ ಒಂದು ಗೆರೆ ಮಾತ್ರ. ಅಷ್ಟಕ್ಕೇ ನಮ್ಮ ಕುಬ್ಜತೆಯ ಅರಿವು ನಮ ಗಾಗುತ್ತದೆ ಮತ್ತು ಈ ಕಿಂಚಿತ್ ದರ್ಶನ ಮಾತ್ರದಿಂದಲೇ ಇದರ ಸ್ವರೂಪಕ್ಕೆ ಒಂದು ಒಳ್ಳೆಯ ಅಥವಾ ರೌದ್ರವೆಂಬ ಹಣೆಪಟ್ಟಿಯನ್ನು ಹಾಕಲಾಗುವುದಿಲ್ಲ. ಅದಕ್ಕೇ ಇದನ್ನು ರಹಸ್ಯಗಳ ಅಡಗುದಾಣವೆನ್ನುವುದು. ಇಲ್ಲಿ ಗೋಚರಿಸುವುದೆ ಅರ್ಧಕತ್ತಲೆ, ಅರ್ಧಬೆಳಕು ,ಅರ್ಧ ಜ್ಞಾನ ಎಂಬ ಅರೆಬರೆ ಮಾಹಿತಿಗಳು.

ಇಲ್ಲಿನ ಮತ್ತೊಂದು ಸ್ವಾರಸ್ಯವೆಂದರೆ ಒಬ್ಬರಲ್ಲಿ ಮೂಡುವ ಭಾವನೆಗಳು ಮತ್ತೊಬ್ಬರಲ್ಲಿಯೂ ಬರುವುದು ಕಡ್ಡಾಯವಲ್ಲ.ಯಾವ ರೀತಿಯಲ್ಲಿ ಜೀವನವೆಂಬುದನ್ನು ಅವರವರ ಭಾವಕ್ಕೆ ತಕ್ಕಂತೆ ಅರ್ಥೈಸಿಕೊಳ್ಳಲಾಗುತ್ತದೆಯೋ ಅದೇ ರೀತಿ ಈ ಪರಿಸರ ಕೂಡ ಹತ್ತು ಹಲವು ವಿಚಾರಗಳಿಗೆ, ದರ್ಶನಗಳಿಗೆ ತೆರೆದುಕೊಂಡಿರುವ ಒಂದು ಅದ್ಭುತ ಜಗತ್ತೆನ್ನ ಬಹುದು.

ಅಧಿ +ಆತ್ಮ - ನಮ್ಮನ್ನು ನಾವು ಅರಿತುಕೊಳ್ಳುವ ಕ್ರಿಯೆ, ಇಲ್ಲಿ ನಿರಂತರವಾಗಿ ನಡೆಯುತ್ತಿರುತ್ತದೆ. ಅಂತರಿಕ್ಷದವರೆಗೂ ಚಾಚಿ ವಿಸ್ತಾರವಾಗಿ ಹರಡಿ ನಿಂತಿರುವ ಹಿಮಾಲಯವನ್ನು ನೋಡುತ್ತಿರುವಂತೆಯೇ ನಮ್ಮ 'ಅಹಂ' ಎಂಬುದು ಸಂಪೂರ್ಣ ಮರೆಯಾಗಿ ನಮ್ಮ ವ್ಯಕ್ತಿತ್ವದ ಅಂದರೆ ಮಾನುಷದ ಮಿತಿಯು ಕ್ಷಣಕ್ಷಣಕ್ಕೂ ನಮ್ಮನ್ನು ಎಚ್ಚರಿಸುತ್ತಿರುತ್ತದೆ. ಕಣಿವೆಯ ತುಂಬ, ಬೆಟ್ಟದ ಮೇಲ್ಮೈಯಲ್ಲಿ ಆವರಿಸಿರುವ ಹಸಿರು ವನರಾಜಿಯ ವೈವಿಧ್ಯ ನಮ್ಮ ಕಣ್ಮನಗಳನ್ನು ತುಂಬುತ್ತ ಜೊತೆ ಜೊತೆಯಲ್ಲಿಯೇ ಅವುಗಳ ಸಹಜೀವನ, ಒಂದಾಗಿರುವುದರ ಮೂಲಕ ಒಂದರೊಡನೊಂದು ಮಿಳಿತವಾಗಿರುವುದರ ಮೂಲಕ ಒಗ್ಗಟ್ಟಿನ ಮಹತ್ತ್ವವನ್ನು ಸಾರುತ್ತದೆ. ಬಾನೆತ್ತರಕ್ಕೂ ಚಾಚಿನಿಂತಿರುವ ಮರಗಿಡಗಳು ಕೂಡ ನಮ್ಮ ಮಿತಿಯನ್ನು ಕುರಿತು ಎಚ್ಚರಿಸುತ್ತದೆ.

ಈ ಎಲ್ಲ ಸೌಂದರ್ಯವನ್ನು ಅಸ್ವಾದಿಸುತ್ತ ತಲ್ಲೀನರಾಗಿರುತ್ತಿದ್ದಂತೆಯೇ ಮರುಕ್ಷಣದಲ್ಲಿ ಇಲ್ಲಿನ ಹವಾಮಾನದ ಅಸ್ಥಿರತೆ ನಮ್ಮಲ್ಲಿ ಬೆರಗು ಮೂಡಿಸುವುದರೊಂದಿಗೇ ನಮ್ಮ ಲೌಕಿಕ ಬದುಕಿನ ಅಸ್ಥಿರತೆಯ ಅರಿವನ್ನೂ ಮೂಡಿಸುತ್ತದೆ. ಇಡೀ ಪ್ರದೇಶವನ್ನು ಕ್ಷಣ ಮಾತ್ರದಲ್ಲಿ ಆವರಿಸುವ ಮೋಡ ಎಲ್ಲವನ್ನು ಮರೆಯಾಗಿಸಿ ಏನೂ ಕಾಣದಂತಾಗಿ ಎಲ್ಲೆಡೆ ಕೇವಲ ಆಕಾಶವೇ ಇರುವಂತೆ ಭಾಸವಾಗುತ್ತದೆ. ಸಾವಿರಾರು ಅಡಿಗಳ ಪ್ರಪಾತವು ನೋಡು ನೋಡುತ್ತಿರುವಂತೆಯೇ ಮಾಯವಾಗಿ ಕೇವಲ ಮೋಡ ಮಾತ್ರವೇ ನಮ್ಮೆದುರಿಗೆ ಕಾಣುತ್ತದೆ.ಭವ್ಯವಾದ ಬೆಟ್ಟ ಸಾಲುಗಳಾಗಲೀ,ಮರಗಿಡಗಳ ಆಸಂಖ್ಯ ರಾಶಿಯಾಗಲೀ ಏನೂ ಇಲ್ಲದಂತಾಗಿ ಬಿಡುತ್ತದೆ. ನಮ್ಮ ಬದುಕಿನ ನಶ್ವರತೆ ಯನ್ನು ಅರಿತುಕೊಳ್ಳಲು ಇದಕ್ಕಿಂತ ಉತ್ತಮ ಉದಾಹರಣೆ ಬೇಕೇ? ಸುಖ - ದುಃಖ, ನೋವು - ನಲಿವು ಯಾವುದೂ ಶಾಶ್ವತವಲ್ಲವೆಂಬ ವಾಸ್ತವತೆಯನ್ನು ಇದು ನಿರೂಪಿಸುತ್ತದೆ.

ಗಂಭೀರವಾಗಿ ನಿಂತ ಪರ್ವತ ಶ್ರೇಣಿಗಳು ಹಂತ ಹಂತವಾಗಿ ಅನಾವರಣಗೊಳ್ಳುತ್ತ ನಮ್ಮ ಮನೋ ಭೂಮಿಕೆಯನ್ನು ಕೂಡ ಊರ್ಧ್ವಮುಖವಾಗಿ ಪರಿಷ್ಕಾರಗೊಳಿ ಸಲು ನೆರವಾಗುವಂತೆ ಕಾಣುತ್ತವೆ. ಋಷಿಮುನಿಗಳು ಅದಕ್ಕೇ ತಮ್ಮ ಆಧ್ಯಾತ್ಮ ಸಾಧನೆಗೆ ಈ ಪರಿಸರವನ್ನು ಆಯ್ಕೆ ಮಾಡಿದ್ದಿರಬೇಕೆಂಬ ವಿಚಾರ ನಮ್ಮಲ್ಲಿ ಮೂಡುತ್ತದೆ. ಆ ಗಂಭೀರ ವಾತಾವರಣದಲ್ಲಿ ನಮ್ಮಲ್ಲಿನ ಸಂಕುಚಿತ ವಿಚಾರಗಳು ಹೆದರಿ ಹಿಂದೆ ಸರಿದು ಮಾಯವಾಗಿ ಬಿಡುತ್ತವೆ. ಒಂದೊಂದು ಶಿಖರವೂ ಒಬ್ಬ ಋಷಿಯ ಸಾಕ್ಷಾತ್ಕಾರವೆನಿಸಿ ಬಿಡುತ್ತದೆ.ಅದಕ್ಕೇ ಇದೊಂದು ಪುಣ್ಯ ಭೂಮಿಯೆಂಬ ಭಾವ ಜಾಗೃತವಾಗುತ್ತದೆ.

ಇನ್ನು ಇಲ್ಲಿ ಹುಟ್ಟಿ ಹರಿದು ಬರುವ ನದಿಗಳ, ಝರಿಗಳ ಸೌಂದರ್ಯ ಕೆಲವು ರಮಣೀಯ, ಕೆಲವು ಭಯಂಕರ ಅವುಗಳ ಲಾಸ್ಯ, ಭೋರ್ಗರೆತ ಚಿತ್ತಾಕರ್ಷಕದ ಜೊತೆಗೇ ಶಕ್ತಿಯ ಸ್ವರೂಪಗಳೂ ಆಗಿ ಕಾಣುತ್ತವೆ. ಸೌಂದರ್ಯದ ಎಲ್ಲ ರೂಪಗಳಲ್ಲಿ ನಮ್ಮೆದುರಿಗೆ ರಾರಾಜಿಸುತ್ತಿರುತ್ತದೆ.ಆ ಚೆಲುವಿಗೆ ಯಾವುದೂ ಸಾಟಿಯಲ್ಲಿ. ಎಲ್ಲ ನದಿಗಳು, ಜಲಧಾರೆಗಳು ಬಹುತೇಕವಾಗಿ ಪೌರಾಣಿಕ, ಧಾರ್ಮಿಕ ಕಥೆಗಳ ಹಿನ್ನೆಲೆಯನ್ನು ಹೊಂದಿರುವುದರೊಂದಿಗೆ ಎಲ್ಲವೂ ಜನರ ಧಾರ್ಮಿಕ ಮನೋಭಾವವನ್ನು ಉತ್ತೇಜಿಸುತ್ತವೆ.

ಹಿಮಾಲಯ ಪ್ರದೇಶದಲ್ಲಿ ಭೂಕುಸಿತ ಸಾಮಾನ್ಯ. ನೋಡುನೋಡುತ್ತಿರುವಂತೆಯೇ ರಸ್ತೆಯೇ ಇಲ್ಲವಾಗಿ ಬಿಡುತ್ತದೆ. ಹಾಗಾಗಿ ಇಲ್ಲಿ ಮನುಷ್ಯನ ಶಕ್ತಿಗಾಗಲೀ, ಜೀವಕ್ಕಾಗಲೀ ಯಾವ ಬೆಲೆಯೂ ಇಲ್ಲ.ಬೆಟ್ಟ ಕಡಿದು ರಸ್ತೆ ಮಾಡುವ ಮನುಷ್ಯನ ಸಾಹಸದ ಕಾರ್ಯವನ್ನು ಕೆಲವೇ ಕ್ಷಣಗಳಲ್ಲಿ ಅದಕ್ಕೆ ಬೆಲೆಯೇ ಇಲ್ಲದಂತೆ ಮಾಡುವ ಇಲ್ಲಿನ ಪರಿಸರ ನಮ್ಮಲ್ಲಿನ ಅಹಂಗೆ ಬಲವಾದ ಪೆಟ್ಟು ನೀಡುವುದು ನಿಜವಾದರೂ ಈ ಸುಂದರ ಪ್ರದೇಶ ಮತ್ತೆ ಮತ್ತೆ ಅಂತಹ ಸಾಹಸಕ್ಕೆ ತೊಡಗುವ ಪ್ರೇರಣೆಯನ್ನೂ ನೀಡುತ್ತದೆ. ಅದಕ್ಕೇ ಮಳೆಯಿರಲಿ, ಛಳಿಯಿರಲಿ, ಮನುಷ್ಯ ಇಲ್ಲಿ ತನ್ನ ಕರ್ತವ್ಯದಲ್ಲಿ ನಿರಂತರವಾಗಿ ತೊಡಗಿರುತ್ತಾನೆ.ಪ್ರತಿಕ್ಷಣ ಪ್ರಕೃತಿಯೊಂದಿಗೆ ಹೋರಾಟ ಮಾಡುತ್ತಾ, ಜೀವವನ್ನು ಪಣಕ್ಕಿಟ್ಟು ಬದುಕುವ ಕೆಚ್ಚನ್ನು ಇದು ಕಲಿಸುತ್ತದೆ. ಇದು ಕವಿ ಮನಸ್ಸುಗಳಿಗೆ ನವನವೋನ್ಮೇಷಶಾಲಿನಿ. ನಿರಂತರ ಸ್ಫೂರ್ತಿಯ ಸೆಲೆ. ನಿತ್ಯ ನೂತನ ಈ ಪ್ರಕೃತಿಯ ಆರಾಧನೆಯೇ ಪರಮನ ಆರಾಧನೆ. ಧನ್ಯ ಹಿಮಾಲಯ!

# ಭಗವದ್ಗೀತೆ ಕೊಡುವ ಅವಿಸ್ಮರಣೀಯ ಜ್ಞಾನ

ಡಾ॥ ವೈಷ್ಣವಾಂಘ್ರಿ ಸೇವಕ್‌ದಾಸ್
ಅನುವಾದ : ಡಿ.ಎಸ್. ಭೂಮಿಕ

ಜ್ಞಾನ, ವಿಜ್ಞಾನವೆಂಬುವು ಎರಡು ಬೇರೆ ಬೇರೆ ಪದಗಳು. ಯಾವುದೇ ವಿಷಯದ ಕುರಿತಾದ ಸಿದ್ಧಾಂತ ಪರ ಅವಗಾಹನವೇ ಜ್ಞಾನ. ಆದರೆ ಈ ಅವಗಾಹನವನ್ನು ಜ್ಞಾನವನ್ನು ಆಮೂಲಾಗ್ರವಾಗಿ ಅಧ್ಯಯನ ಮಾಡುವಂತೇ ಮಾಡುವುದೇ ವಿಜ್ಞಾನ. ಇದನ್ನು ಗೀತೆಯಲ್ಲಿ 'ಸವಿಜ್ಞಾನ'ವೆಂದು ಹೇಳಲಾಗಿದೆ. ಭಗವದ್ಗೀತೆ ಹೇಳುವುದು ಅದರ ಕುರಿತಾದ ಸಿದ್ಧಾಂತವನ್ನೆಲ್ಲ, ವಾಸ್ತವದಲ್ಲಿ ಭಗವದ್ಗೀತೆ ಅತ್ಯಂತ ಕ್ಲಿಷ್ಟಕರವಾದ ಪರಿಸ್ಥಿತಿಯಲ್ಲಿ ಸಿಲುಕಿದ ವ್ಯಕ್ತಿಗೆ ಹೇಳಿರುವಂಥದ್ದು. ಪ್ರತಿಯೊಬ್ಬನೂ ತನ್ನ ಜೀವನದಲ್ಲಾಗಲೀ ತನ್ನ ಕೆಲಸ ಕಾರ್ಯಗಳಲ್ಲಾಗಲೀ ವಿಜಯವನ್ನು ಸಾಧಿಸಬೇಕೆಂದು ಕೊಳ್ಳುತ್ತಾನೆ. ತನ್ನೆಲ್ಲಾ ಕಾರ್ಯಗಳಲ್ಲಿ ವಿಜಯವನ್ನು ಸಾಧಿಸಬೇಕೆಂದು ಕೊಳ್ಳುತ್ತಾನೆ. ತನ್ನೆಲ್ಲಾ ಕಾರ್ಯಗಳಲ್ಲಿ ಸೋಲನ್ನೆಂದೂ ಬಯಸುವುದಿಲ್ಲ. ಆದರೆ ತನಗೆ ಜಯವೆಂಬುದು ಬೇಡವೇ ಬೇಡವೆಂದು ಕೋರಿದ ಏಕೈಕ ವ್ಯಕ್ತಿ ಅರ್ಜುನ. ತನಗೆ ವಿಜಯವಾಗಲಿ, ವಿಜಯದಿಂದುಂಟಾಗುವ ಸುಖವಾಗಲಿ ಬೇಡವೆಂದು ಅರ್ಜುನ ಖಡಾಖಂಡಿತವಾಗಿ ಹೇಳಿದ್ದಾನೆ. ಅಂಥಹ ಮನಸ್ಥಿತಿಯನ್ನು ಹೊಂದಿದ ವ್ಯಕ್ತಿಗೆ ಭಗವದ್ಗೀತೆ ಅದ್ಭುತವಾದ ವಿಜಯವನ್ನು ಕೈಗೂಡಿಸಿದೆ. ಭಗವದ್ಗೀತೆ ಸಾರುವ ಅಮೂಲಾಗ್ರ ಜ್ಞಾನಕ್ಕೆ ಇದೇ ತಕ್ಕ ನಿದರ್ಶನ. ಗೀತಾಜ್ಞಾನವು ಪಲಾಯನ ವಾದಿಗಳನ್ನೆಂದೂ ತಯಾರು ಮಾಡುವುದಿಲ್ಲ.ಮೇಲಾಗಿ ಎಂತಹ ಸಂಕಷ್ಟವಾದ ಪರಿಸ್ಥಿತಿಗಳು ಏರ್ಪಟ್ಟರೂ ಯಾವ ರೀತಿಯಲ್ಲಿ ವಿಜಯವನ್ನು ಖಚಿತವಾಗಿ ಸಾಧಿಸಬಹುದೆಂದು ನಮಗೆ ಕೇಳಿ ಕೊಡುತ್ತದೆ. ಆದ್ದರಿಂದಲೇ ಗೀತಾಜ್ಞಾನ ಅಪಾದಮುಸ್ತಕವಾದ ಜ್ಞಾನ.

ಸ್ವಾಮಿಯ ದರ್ಶನಾರ್ಥ ತಿರುಮಲೆಗೆ ಬರುವ ಭಕ್ತರ ಸೌಕರ್ಯಾರ್ಥ ತಿರುಮಲೆ ತಿರುಪತಿ ದೇವಸ್ಥಾನದವರು ಟೋಲ್ ಫ್ರಿ ನಂಬರ್ ಅನ್ನು ಏರ್ಪಡಿಸಿದ್ದಾರೆ.

ತಿರುಮಲೆ ತಿರುಪತಿ ದೇವಸ್ಥಾನಗಳು
ಟೋಲ್ ಫ್ರಿ ನಂಬರ್
18004254141

ಯಾತ್ರಿಕರು, ಭಕ್ತರು ದೇವಸ್ಥಾನಕ್ಕೆ ಸಂಬಂಧಿಸಿದ ಸೂಚನೆ /ದೂರುಗಳನ್ನು ಮತ್ತು ಇತರ ಸಮಾಚಾರಕ್ಕಾಗಿ ಈ ನಂಬರನ್ನು ಸಂಪ್ರದಿಸಬಹುದು.

ಈ ಅವಕಾಶವನ್ನು ಎಲ್ಲರೂ ಉಪಯೋಗಿಸಿಕೊಳ್ಳಿ!
ತಿರುಮಲೆ ತಿರುಪತಿ ದೇವಸ್ಥಾನವು ಯಾತ್ರಿಕರಿಗೆ ಮತ್ತಷ್ಟು ಸೇವೆಯನ್ನು ನೀಡಲು ನಿಮ್ಮ ಸೂಚನೆಗಳನ್ನು ನೀಡಿರಿ.

ಈ ವಿಷಯವನ್ನು ಸ್ವಲ್ಪ ಸವಿಸ್ತಾರವಾಗಿ ನಿರೂಪಿಸಲು ಗೀತಾಚಾರ್ಯರು ನಮಗೆ ಹಲವು ಕೆಲವು ಕೆಲಸಗಳನ್ನು ಮಾಡಲು ಹೇಳಿದ್ದಾರೆ. ಪ್ರತಿ ವ್ಯಕ್ತಿ ಜೀವನದಲ್ಲಿ ಒಂದಲ್ಲಾ ಒಂದು ಕೆಲಸವನ್ನು ಮಾಡುತ್ತಲೇ ಇರುತ್ತಾನೆ. ಅವು ಅನಿವಾರ್ಯವಾದುವುಗಳು. ಅವೇ ಆಹಾರಸೇವಿಸುವುದು, ನಿದ್ರಿಸುವುದು, ವಿಹಾರಗಳಲ್ಲಿ ಪಾಲ್ಗೊಳ್ಳುವುದು, ನಾನಾ ವಿಧ ವಾದ ಕೆಲಸಗಳನ್ನು ಮಾಡುವುದು.ಅವೇ ಕೆಲಸಗಳನ್ನು ಗೀತೆಯಲ್ಲಿ ಹೇಳಿದ ಪ್ರಕಾರವಾಗಿ ಮಾಡಿದಲ್ಲಿ ವಿಜಯವು ಶತಸಿದ್ಧ; ಆದರೆ ಇವನ್ನು ಇಷ್ಟಬಂದಂತೆ ಮಾಡಿದರೆ ವೈಫಲ್ಯವು ನಿಶ್ಚಯ.ಈ ವಿಷಯವನ್ನೇ ಶ್ರೀ ಕೃಷ್ಣ ಭಗವಾನನು ಎಷ್ಟೋ ಸ್ಪಷ್ಟವಾಗಿ ಹೇಳುತ್ತಾ " ಓ ಅರ್ಜುನಾ! ಮನುಷ್ಯ ಅತಿಯಾಗಿ ತಿಂದರೂ , ಅತಿ ಕಡಿಮೆ ತಿಂದರೂ, ಅತಿಯಾಗಿ ನಿದ್ರಿಸಿದರೂ ಅಗತ್ಯದಷ್ಟು ನಿದ್ರಿಸದಿದ್ದರೂ ಯೋಗಿಯಾಗುವ ಸಾಧ್ಯತೆಯೇ ಇಲ್ಲ" ಎಂದಿದ್ದಾನೆ. (ಭಗವದ್ಗೀತೆ 6 ನೇ ಅಧ್ಯಾಯ 16 ನೇ ಶ್ಲೋಕ).

ಯಾರಾದರೂ ಕಷ್ಟ ಮತ್ತು ಅಪಜಯಗಳನ್ನು ಎದುರಿಸಿದ್ದಾರೆಂದರೆ ಆ ಎರಡರಲ್ಲಿ ಯಾವುದಾದರೊಂದು ಜರಗುವುದೆಂದೇ ಅರ್ಥ. ಈ ಶ್ಲೋಕದ ಮೂಲಕ ಗೀತಾ ಚಾರ್ಯರು ವಿದ್ಯಾರ್ಥಿಗಳಿಗೆ ಎದುರಾಗುವ ಅಪಜಯಗಳ ರಹಸ್ಯವನ್ನು ತಿಳಿಸುತ್ತಾನೆ. ಆದರೆ ಕೇವಲ ಸಮಸ್ಯೆಯನ್ನು ಹೇಳದೇ ದೇವೇಶನು ಅದರೊಂದಿಗೆ ಅದರ ಪರಿಷ್ಕಾರವನ್ನು ಸಹ ತಿಳಿಸಿಕೊಟ್ಟಿದ್ದಾನೆ.ಈ ಪರಿಷ್ಕಾರವು ಎಷ್ಟು ಆಚರಾಣಾತ್ಮಕವಾದುದೆಂದರೆ ಅವುಗಳನ್ನು ಯಾರು ಪಾಲಿಸುತ್ತಾರೋ ಅವರು ಖಚಿತವಾಗಿ ಸರ್ವತ್ರ ವಿಜಯವನ್ನು ಸಾಧಿಸಿ ಸುಖಭಾಗಿಗಳಾಗುತ್ತಾರೆ.

"ಆಹಾರವನ್ನು, ನಿದ್ರೆಯನ್ನು, ವಿಹಾರಗಳನ್ನು, ತಮ್ಮ ಕಾರ್ಯಾಭ್ಯಾಸಗಳನ್ನು ಸಕ್ರಮವಾಗಿ ಮಾಡುವವರು ಯೋಗ ಸಾಧನೆಯ ದ್ವಾರ ಸಮಸ್ತ ಭೌತಿಕ ಕ್ಲೇಶಗಳನ್ನು ತಗ್ಗಿಸಿಕೊಳ್ಳುತ್ತಾರೆ" (ಭಗವದ್ಗೀತೆ 6 ನೇ ಅಧ್ಯಾಯ 17 ನೇ ಶ್ಲೋಕ).

ಅಂದರೆ ಭಗವದ್ಗೀತೆ ಹೇಳಿದಂತೆ, ಮೇಲಿನ ವಿಷಯಗಳನ್ನು ಅರ್ಥಮಾಡಿಕೊಂಡು ಅನುಸರಿಸುವ ವಿದ್ಯಾರ್ಥಿಗಳು ಶಾರೀರಿಕವಾಗಿ ಆರೋಗ್ಯವಂತರಾಗಿ ಮಾನಸಿಕ ಸಮತೋಲನೆಯನ್ನು ಹೊಂದುತ್ತಾರೆ. ಬುದ್ಧಿವಂತರಾಗಿ ಚುರುಕಾಗುತ್ತಾರೆ.ಆತ್ಮಪರರಾಗಿ ಆಧ್ಯಾತ್ಮಿಕ ನಿಷ್ಠಾಪರರಾಗುತ್ತಾರೆ. ನಿಜವಾಗಿ ಇದೇ ಯೋಗವು. ಇದನ್ನು ದೃಷ್ಟಿಯಲ್ಲಿರಿಸಿಕೊಂಡು ನೋಡಿದರೆ ಗೀತೆಯಲ್ಲಿ ಯಾವುದೇ ಆಚರಣೆ ಅಸಾಧ್ಯವಾದ ವಿಷಯವನ್ನು ಹೇಳಿಲ್ಲ.ಗೀತೆಯು ಮನುಷ್ಯನಿಗೆ ಆಹಾರಬೇಕು, ನಿದ್ರೆಯೂ ಬೇಕೆಂದೇ ಹೇಳುತ್ತದೆ. ಕೆಲಸಗಳನ್ನು ತಪ್ಪದೇ ನಿಯಮವಾಗಿ ಮಾಡಬೇಕೆಂದೇ ಹೇಳುತ್ತದೆ. ಈ ರೀತಿಯಾಗಿ ನಮ್ಮ ಜೀವನದ ಪ್ರತಿಯೊಂದು ಅಂಶಕ್ಕೆ ಸಂಬಂಧಿಸಿದ ಅವಶ್ಯಕತೆಗಳನ್ನು ತೆರೆಸರಿಸಿ ಹೇಳುವುದರಲ್ಲಿ ಗೀತೆಗೆ ಸರಿಸಾಟಿಯಾದ ಮತ್ತೊಂದು ಶಾಸ್ತ್ರವೇ ಇಲ್ಲ. ನಮ್ಮನ್ನು ಎಷ್ಟೋ ಪ್ರೇಮದಿಂದ ನೋಡುವ ತಂದೆ ತಾಯಿಯರೂ ಸಹಾ ಗೀತೆಯಷ್ಟು ಮಾರ್ಗದರ್ಶನವನ್ನು ಮಾಡಲಾರರು.

ಆಹಾರದ ವಿಷಯದಲ್ಲಿ ವಿದ್ಯಾರ್ಥಿಗಳು ಶಾಖಾಹಾರಿಗಳಾದಲ್ಲಿ ಬಹಳ ಒಳಿತು. ನಮ್ಮ ದೇಶಕ್ಕೆ ಸ್ವಾಂತ್ರ್ಯವನ್ನು ತಂದು ಕೊಟ್ಟ ಗಾಂಧೀಜಿಯವರು ಶಾಖಾಹಾರಿಯಾಗಿದ್ದರು.ಮಾಜಿ ರಾಷ್ಟ್ರಪತಿಯಾದ ಡಾಕ್ಟರ್ ಅಬ್ದುಲ್ ಕಲಾಂರು ಸಹಾ ಶಾಖಾಹಾರಿಗಳು. ಪ್ರಪಂಚ ಪ್ರಖ್ಯಾತಿ ಹೊಂದಿದ ಐಸಾಕ್ ನ್ಯೂಟನ್ ಶಾಖಾಹಾರಿ ಆದ್ದರಿಂದಲೇ ಶಾಖಾಹಾರದಿಂದ ವಿದ್ಯಾರ್ಥಿಗಳು ಅದೆಷ್ಟೋ ಆರೋಗ್ಯವಂತರಾಗಿ ಮುಂದೆ ಬರುತ್ತಾರೆ. ಹಾಗೆಯೇ ಮನಸ್ಸು ಆಹ್ಲಾದಗೊಳ್ಳುವುದು ವಿಹಾರದಿಂದಲೇ ಆದ್ದರಿಂದ ಪ್ರತಿನಿತ್ಯ ವಿದ್ಯಾರ್ಥಿಗಳು ಹತ್ತಿರವಿರುವ ಶ್ರೀ ವೇಂಕಟೇಶ್ವರ ಸ್ವಾಮಿಯ ಗುಡಿಗೆ ಹೋಗಿ ದರ್ಶನ ಮಾಡಿ, ನಂತರ ಕನಿಷ್ಠ ಅರ್ಧಗಂಟೆ ಸಮಯ ಯಾವುದಾದರೂ ಉಪವನಕ್ಕೆ ತೆರಳಿದಲ್ಲಿ ಮನಸ್ಸು, ದೇಹವು ಚೆನ್ನಾಗಿರುತ್ತವೆ. ನಡುನಡುವೆ ಕಣ್ಣುಗಳು ಭಗವಲೀಲೆಗಳಿಗೆ ಸಂಬಂಧಿಸಿದ, ಬುದ್ಧಿಗೆ ಒರೆ ಹಚ್ಚುವಂತಹ ಉತ್ತಮ ಪುಸ್ತಕಗಳನ್ನು ಕೂಡಾ ಓದಬಹುದು. ಇವು ಕೂಡಾ ಮಾನಸಿಕ ಉಲ್ಲಾಸವನ್ನು ಉಂಟು ಮಾಡುತ್ತದೆ. ನಿದ್ರೆಯನ್ನು ಯಾರೂ ತಡೆ ಹಿಡಿಯಬಾರದು. ನಿದ್ರೆಯ ಸಮಯದಲ್ಲಿ ದೇಹ, ಮೆದುಳು ಸಂಪೂರ್ಣವಾಗಿ ವಿಶ್ರಾಂತಿ ತೆಗೆದುಕೊಂಡು, ಲವಲವಿಕೆ ಯನ್ನು ಪಡೆದು ಮುಂದಿನ ಕೆಲಸಗಳನ್ನು ಮಾಡಲು ಸಿದ್ಧವಾಗುತ್ತವೆ. ಹಾಗೆಯೇ ಕೆಲಸಗಳನ್ನು ಶ್ರದ್ಧೆಯಿಂದ ಮಾಡ ಬೇಕು. ಕೆಲಸಗಳನ್ನು ಬುದ್ಧಿ-ಮನಸ್ಸುಗಳಿಗೆ ತೆಗೆದುಕೊಂಡು ಮಾಡುವುದು ಅವಶ್ಯವೆಂದು ಗೀತಾಚಾರ್ಯರು ಹೇಳುತ್ತಾರೆ.

"ಹಿರಿಯರ ಮಾತು ಅನುಭವಗಳ ಸಾರ" ಎಂಬುದೊಂದು ಗಾದೆ ಮಾತು. ಆಯಾ ಕಾರ್ಯರಂಗದಲ್ಲಿ ಪರಿಣತ ಪಡೆದ ವ್ಯಕ್ತಿಗಳ ಬಡನಾದ ನಾವು ಮಾಡುವ ಕಾರ್ಯ ಕಲಾಪಗಳಲ್ಲಿ ನಮ್ಮನ್ನು ನಿಷ್ಣಾತರನ್ನಾಗಿ ಮಾಡುತ್ತದೆ. ಯಾವುದನ್ನು ಮಾಡಬೇಕು. ಯಾವುದನ್ನು ಮಾಡಬಾರದೆಂಬ ಅರಿವು ಉಂಟಾದರೆ ಆ ಜೀವನವು ಹೂಮಾಲೆಯೊಂದದಿ ಸರಾಗವಾಗಿ ಸಾಗಿ ಸರ್ವತ್ರ ವಿಜಯಗಳನ್ನು ತಂದುಕೊಡುತ್ತದೆ. ಜೀವನ ಸಂಪೂರ್ಣವಾಗಿ ಆನಂದಮಯವಾಗುತ್ತದೆ.

ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ



# ಸ್ವಾಮಿಯ ಆರ್ಜಿತ ಸೇವೆಗಳು - ತಿರುಮಲೆ

## ಆರ್ಜಿತ ಸೇವೆಗಳು/ ಉತ್ಸವಗಳು

| ಸಂ. | ಸೇವೆ / ಉತ್ಸವದ ಹೆಸರು | ದಿನ | ಸೇವಾ / ಪ್ರವೇಶ ಸಮಯ | ಪ್ರವೇಶ | ಟಿಕೆಟ್ಟು ಬೆಲೆ |
|---|---|---|---|---|---|
| | **ಸೇವೆಗಳು** | | | | |
| 1. | ಸುಪ್ರಭಾತ | ಪ್ರತಿದಿನ | ಬೆ. 2.00-3.00 ಗಂ|| | 1 | ರೂ. 120.00 |
| 2. | ತೋಮಾಲ ಸೇವೆ (ಮಂಗಳ, ಬುಧ, ಗುರು) | ಪ್ರತಿದಿನ | ಬೆ. 3.00-3,30 ಗಂ|| | 1 | ರೂ. 220.00 |
| 3. | ಅರ್ಚನೆ (ಮಂಗಳ, ಬುಧ, ಗುರು) | ಪ್ರತಿದಿನ | ಬೆ. 4.00-4.30 ಗಂ|| | 1 | ರೂ. 220.00 |
| | **ನಿತ್ಯ ಉತ್ಸವಗಳು** | | | | |
| 4. | ಕಲ್ಯಾಣೋತ್ಸವ | ಪ್ರತಿದಿನ | ಮ. 10.00-12.00 ಗಂ|| | 2 | ರೂ. 1,000.00 |
| 5. | ಡೋಲೋತ್ಸವ (ಊಂಜಲ್ ಸೇವೆ) | ಪ್ರತಿದಿನ | ಮ. 11.00-1.00 ಗಂ|| | 1 | ರೂ. 200.00 |
| 6. | ಆರ್ಜಿತ ಬ್ರಹ್ಮೋತ್ಸವ | ಪ್ರತಿದಿನ | ಮ. 12.30-2.00 ಗಂ|| | 1 | ರೂ. 200.00 |
| 7. | ವಸಂತೋತ್ಸವ | ಪ್ರತಿದಿನ | ಮ. 2.30-3.00 ಗಂ|| | 1 | ರೂ. 300.00 |
| 8. | ಸಹಸ್ರದೀಪಾಲಂಕರಣ ಸೇವೆ | ಪ್ರತಿದಿನ | ಸಾ. 5.00-5.30 ಗಂ|| | 1 | ರೂ. 200.00 |
| | **ವಾರದ ಸೇವೆಗಳು** | | | | |
| 9. | ವಿಶೇಷಪೂಜೆ | ಸೋಮವಾರ | ಬೆ. 6.00-6,30 ಗಂ|| | 1 | ರೂ. 600.00 |
| 10. | ಅಷ್ಟದಳ ಪಾದಪದ್ಮಾರಾಧನೆ | ಮಂಗಳವಾರ | ಬೆ. 5.00-5.30 ಗಂ|| | 1 | ರೂ. 1,250.00 |
| 11. | ಸಹಸ್ರ ಕಲಶಾಭಿಷೇಕ | ಬುಧವಾರ | ಬೆ. 5.00-5.30 ಗಂ|| | 1 | ರೂ. 850.00 |
| 12. | ತಿರುಪ್ಪಾವಡ ಸೇವೆ | ಗುರುವಾರ | ಬೆ. 5.00-5.30 ಗಂ|| | 1 | ರೂ. 850.00 |
| 13. | ವಸ್ತ್ರಾಲಂಕಾರ ಸೇವೆ | ಶುಕ್ರವಾರ | ಬೆ. 3.00-4.00 ಗಂ|| | 2 (ಗಂಡ ಹೆಂಡತಿ) | ರೂ. 12,250.00 |
| ಅ. | ಪೂರಾಭಿಷೇಕ (12 ವರ್ಷದ ಮಕ್ಕಳನ್ನು ಅನುಮತಿಸುವುದಿಲ್ಲ) | ಶುಕ್ರವಾರ | ಬೆ. 3.00-4.00 ಗಂ|| | 1 | ರೂ. 750.00 |
| 14. | ನಿಜಪಾದ ದರ್ಶನ | ಶುಕ್ರವಾರ | ಬೆ. 4.30-5.30 ಗಂ|| | 1 | ರೂ. 200.00 |
| | **ವಾರ್ಷಿಕ ಸೇವೆಗಳು / ಪ್ರತ್ಯೇಕ ಸಂದರ್ಭ ಸೇವೆಗಳು** | | | | |
| 15. | ತೆಪ್ಪೋತ್ಸವ | ಫೆಬ್ರವರಿ/ ಮಾರ್ಚ್ | ಸಾ.6.00-7-00 ಗಂ|| | 1 | ರೂ. 500.00 |
| 16. | ವಸಂತೋತ್ಸವ | ಮಾರ್ಚ್/ ಏಪ್ರಿಲ್ | ಮ. 1.00-2.00 ಗಂ|| | 1 | ರೂ. 300.00 |
| 17. | ಪದ್ಮಾವತಿ ಪರಿಣಯ | ಮೇ | ಸಾ. 4-00-4.30 ಗಂ|| | 1 | ರೂ. 1,000.00 |
| 18. | ಅಭಿಧೇಯಕ ಅಭಿಷೇಕ | ಜೂನ್ | ಬೆ. 8-00 ಗಂ|| | 1 | ರೂ. 400.00 |
| 19. | ಪುಷ್ಪಪಲ್ಲಕಿ | ಜುಲೈ | ಸಾ. 6-30-7-30 ಗಂ|| | 1 | ರೂ. 200.00 |
| 20. | ಪವಿತ್ರೋತ್ಸವ | ಆಗಸ್ಟ್ | ಬೆ. 8-00-9-00 ಗಂ|| | 1 | ರೂ. 2,500.00 |
| 21. | ಪುಷ್ಪಯಾಗ | ನವೆಂಬರ್ | ಬೆ. 8-00-9-00 ಗಂ|| | 1 | ರೂ. 700.00 |
| 22. | ಕೋಯಿಲ್ ಆಳ್ವಾರ್ ತಿರುಮಂಜನ | ವರ್ಷಕ್ಕೆ 4 ಬಾರಿ | ಬೆ. 10-00-11-00 ಗಂ|| | 1 | ರೂ. 300.00 |

Call Centre : 0877–2233333,
0877–2277777
Toll free : 18004254141,
1800425333333
What's app : 9399399399
e-mail : helpdesk@tirumala.org

ಮೇಲಿನ ಸೇವೆಗಳಿಗೆ ಸಂಬಂಧಿಸಿದ ಆನ್‌ಲೈನ್ ನಲ್ಲಿ ಮಾತ್ರವೇ ಟಿಕ್ಕೆಟ್ ಬುಕ್ ಮಾಡಿಕೊಳ್ಳಬೇಕು.ಇತರ ವಿವರಗಳಿಗೆ : ತಿ.ತಿ.ದೇ. ವೆಬ್‌ಸೈಟ್ : www.ttdsevaonline.com / www.tirumala.org ನು ಸಂಪ್ರದಿಸಬೇಕು.



# ಔಷಧೀಯ ಗುಣಗಳ ನಿಧಿ ಇಂಗು

**ಮೂಲ. ಡಾ॥ ಸಿ. ಮಧುಸೂದನ ಶರ್ಮ**

**- ಅನುವಾದ : ಶ್ರೀಮತಿ.**

ಆಹಾರ ಪದಾರ್ಥಗಳಲ್ಲಿ, ಅಡುಗೆ ಮನೆಯ ತಯಾರಿಕೆಗಳಲ್ಲಿ ರುಚಿಗಾಗಿ, ಪರಿಮಳಕ್ಕಾಗಿ ಉಪಯೋಗಿಸಲ್ಪಡುವ ಅಡುಗೆಶಾಲೆಯ ದ್ರವ್ಯ ಇಂಗು. ಇದೊಂದು ಮೊಗ್ಗಿನಿಂದ ಲಭಿಸುವ ಪದಾರ್ಥ. ಸಂಸ್ಕೃತದಲ್ಲಿ 'ಇಂಗು' ಎಂದು ಇದಕ್ಕೆ ಹೆಸರು. ಅನೇಕ ವ್ಯಾಧಿಗಳನ್ನು ಕುಗ್ಗಿಸುವ ಶಕ್ತಿಯಿರುವ ಕಾರಣಕ್ಕೇ ಇದನ್ನು 'ಸಹಸ್ರವೇಧಿ' ಎಂದೂ ಅಗ್ನಿದೂತನಾಗಿ ಕೆಲಸ ಮಾಡುವುದರಿಂದ 'ದೀಪ್ತಿ' ಎಂದೂ, ಕ್ರಿಮಿಗಳನ್ನು ನಾಶಗೊಳಿಸುವ ಶಕ್ತಿ ಹೊಂದಿರುವುದರಿಂದ 'ಭೂತರಿ' ಎಂಬಂತಹ ಸಂಸ್ಕೃತ ನಾಮಧೇಯಗಳು ಕೂಡಾ ಈ ಇಂಗಿಗೆ ಇವೆ.

'ಏಪಿಯೇಸಿ' ಎಂಬ ವೃಕ್ಷ ಕುಟುಂಬಕ್ಕೆ ಸೇರಿದ ಈ ಇಂಗು ಶಾಸ್ತ್ರೀಯ ನಾಮಧೇಯ 'ಫೆರುಲಫೋಟಿಡ. ಇಂಗನ್ನು ಇಂಗ್ಲೀಷ್‌ನಲ್ಲಿ 'ಅಸಿಫ್ಲೋಡ್ ಎನ್ನುತ್ತಾರೆ.

ಪ್ರಕೃತಿ ಮಾತೆ ವಿವಿಧ ಬಗೆಯ ಔಷಧೀಯ ಗುಣಗಳನ್ನೂ, ರಸಾಯನಿಕ ತತ್ವಗಳನ್ನು ಇದರಲ್ಲಿ ನಿಕ್ಷೇಪಿಸಿ ಆರೋಗ್ಯ ಪರಿಪಾಲನೆಗಾಗಿ ಪ್ರಾಣ ವರ್ಗಕ್ಕೆ ಇಂಗನ್ನು ಪ್ರಸಾದಿಸಿದ್ದಾಳೆ.

ಇಂಗನ್ನು ಔಷಧಿಯಾಗಿ ಹೇಗೆ ಉಪಯೋಗಿಸ ಬಹುದೆಂದು ಪ್ರಸ್ತುತ ಅರಿತುಕೊಳ್ಳೋಣ ಇಂಗನ್ನು ಔಷಧಿಯಾಗಿ ಬಳಸುವಾಗ ಈ ಬೇರನ್ನು ಸ್ವಲ್ಪ ನೀರಿನಲ್ಲಿ ನೆನೆಯಿಸಿ, ಕುಟ್ಟಿ, ಪುಡಿಮಾಡಿ ಬಳಸುವುದರಿಂದ ಯಾವುದೇ ತರಹದ ತೊಂದರೆಯಿಲ್ಲದೆ ಸರಾಗವಾಗಿ ಕೆಲಸ ಮಾಡುತ್ತದೆ.

**ಉಬ್ಬಸಕ್ಕೆ**

25 ಗ್ರಾಂ ಇಂಗು ಪುಡಿಯನ್ನು 25 ಗ್ರಾಂ ಪಚ್ಚಕರ್ಪೂರದ ಪುಡಿಯೊಂದಿಗೆ ಕಲಿಸಿ ಸ್ವಲ್ಪವೇ ನೀರು ಹಾಕಿ ನಾದಿ ಗುಲಗಂಜಿಯಷ್ಟು 1,2 ಮಾತ್ರೆಗಳನ್ನು ಹೇಳಿದಂತೆ ಸೇವಿಸುತ್ತಿದ್ದರೆ ಉಬ್ಬಸ ವ್ಯಾಧಿಯು ಶೀಘ್ರವೇ ನಿಯಂತ್ರಣಕ್ಕೆ ಬರುತ್ತದೆ.

ಇವೇ ಮಾತ್ರೆಗಳನ್ನು ಇದೇ ರೀತಿಯಲ್ಲಿ ಉಪಯೋಗಿಸುವುದರಿಂದ ಇನ್ನು ಅಷ್ಟು ಲೋಕಕ್ಕೆ ಪರಿಚಯವಿರದ 'ಗುಂಡೇದಡ' ಎಂಬ ವ್ಯಾಧಿ ಕಡಿಮೆಯಾಗುತ್ತದೆ.

ಇವೇ ಮಾತ್ರೆಗಳನ್ನು ಪುಡಿಮಾಡಿ ಹುಳುಕು ಹಲ್ಲುಗಳ ಮೇಲಿರಿಸಿದರೆ ಹುಳುಕು ನೋವು ಕಡಿಮೆಗೊಳ್ಳುತ್ತವೆ.

ಮುಟ್ಟಿನ ಬಾಧೆಗೆ: 5 ಗ್ರಾಂ ಇಂಗಿನ ಪುಡಿಯನ್ನು, 10 ಗ್ರಾಂ ಬೆಲ್ಲದಲ್ಲಿ ಕಲಿಸಿ, ಸ್ವಲ್ಪವೇ ನೀರುಸೇರಿಸಿ ಮೆತ್ತಗೆ ನಾದಿ, 6 ಮಾತ್ರೆಗಳನ್ನು ಮಾಡಿ, ಆರಿಸಿ ಮುಟ್ಟಿನ ಸಮಯದಲ್ಲಿ ಎರಡೂ ಹೊತ್ತು, ಬಾರಿಯೊಂದಕ್ಕೆ ಒಂದು ಮಾತ್ರೆಯಂತೆ ಸೇವಿಸಬೇಕು.

ಹೀಗೆ ಸೇವಿಸುವುದರಿಂದ ಮುಟ್ಟಿನ ಸ್ರಾವ ಕೂಡಾ ಸರಿಯಾಗಿ ಆಗುತ್ತದೆ. ಗರ್ಭಾಶಯದ ಬಿರುಕುಗಳು, ಗಡ್ಡೆಗಳು, ಹೆಚ್ಚು ರಕ್ತ ಸ್ರಾವ, ಗರ್ಭಾಶಯದ ಕ್ಯಾನ್ಸರ್ ಇತ್ಯಾದಿ ಕಾರಣಗಳಿಂದ ಸ್ತ್ರೀಯರ ಗರ್ಭ ಚೀಲವನ್ನು ಶಸ್ತ್ರಚಿಕಿತ್ಸೆ ಮೂಲಕ ತೆಗೆಯ ಬಹುದಾದ ಪರಿಸ್ಥಿತಿಗಳು ಅಂದರೆ 'ಹಿಸ್ಟರೆಕ್ಟಮಿ' ಮಾಡಬೇಕಾದ ಪರಿಸ್ಥಿತಿಗಳು ಕಳೆದ ಮುರ್‍ನಾಲ್ಕು ದಶಕಗಳಿಂದ ಹೆಚ್ಚಾಗಿ ಕಂಡು ಬರುತ್ತಿರುವುದು ತಿಳಿಯುತ್ತದೆ. ಈ ನೇಪಥ್ಯದಲ್ಲಿ ಕನಿಷ್ಠ ಪಕ್ಷ ಇನ್ನು ಮುಂದಾದರೂ ಆಹಾರೌಷಧಿಯಾಗಿ ಇಂಗನ್ನು ತಪ್ಪದೇ ಬಳಸುವುದರಿಂದ ಇಂತಹ ಪರಿಸ್ಥಿತಿಗಳು ತಲೆದೋರುದಂತೆ ಸ್ವಲ್ಪವಾದರೂ ನಿರೋಧಿಸುವ ಅವಕಾಶವಿದೆ.

**ಅಡುಗೆ ಮನೆಯ ತಯಾ ರಿಕೆಗಳಲ್ಲಿ ರುಚಿಗಾಗಿ, ಪರಿಮಳಕ್ಕಾಗಿ ಉಪಯೋಗಿಸಲ್ಪಡುವ ಅಡುಗೆಶಾಲೆಯ ದ್ರವ್ಯ ಇಂಗು. ಇದೊಂದು ಮೊಗ್ಗಿನಿಂದ ಲಭಿಸುವ ಪದಾರ್ಥ. ಸಂಸ್ಕೃತದಲ್ಲಿ 'ಇಂಗು' ಎಂದು ಇದಕ್ಕೆ ಹೆಸರು.**



ಪ್ರತಿದಿನ ನಿಮ್ಮ ಅಡುಗೆಯಲ್ಲಿ ಇಂಗು ಬಳಸಿದರೆ ಇಷ್ಟೆಲ್ಲಾ ಕಾಯಿಲೆಗಳಿಂದ ಮುಕ್ತಿ ಸಿಗುತ್ತದೆ ಗೊತ್ತಾ..?

**ಕೀಲು ನೋವಿಗೆ**

100 ಮಿ.ಲೀ. ಎಳ್ಳೆಣ್ಣೆಯಲ್ಲಿ 20 ಗ್ರಾಂ ಇಂಗಿನ ಪುಡಿ, 20 ಗ್ರಾಂ ಕುಟ್ಟಿದ ಬೆಳ್ಳುಳ್ಳಿ, 20 ಗ್ರಾಂ ಸೈಂಧವ ಲವಣ ಪುಡಿ ಕಲಸಿ, ಮರಳಿಸಿ ಕೆಳಗಿಳಿಸಿ ಬಿಸಿಯಾರಿದ ನಂತರ ಸೋಸಿ ನಿತ್ಯ 1 ಅಥವಾ 2 ಬಾರಿ ಬಾರಿಯೊಂದಕ್ಕೆ 5.ಮಿ.ಲೀ. ಔಷಧ ವನ್ನು 100. ಮಿ.ಲೀ. ಉಗುರುಬೆಚ್ಚಗಿನ ಹಾಲಲ್ಲಿ ಕಲಸಿ ಸೇವಿ ಸುತ್ತಿರಬೇಕು.

ಇದೇ ಎಣ್ಣೆಯನ್ನು ಉಗುರು ಬೆಚ್ಚಗೆ ಮಾಡಿ ಮೈ ಬಾಯಿಗೂ ಬಳಸಬಹುದು.

**ಚೇಳುಕಡಿತಕ್ಕೆ**

ಕಾಲು ಟೀ ಚಮಚ ಇಂಗು ಪುಡಿಯನ್ನು ಕಾಲು ಅಳತೆ ನೀರಿನಲ್ಲಿ ಕಲಸಿ ಮೆತ್ತಗೆ ನಾದಿ, ಚೇಳುಕಡಿದ ಭಾಗಕ್ಕೆ ಲೇಪನ ವಾಗಿ ಹಚ್ಚಿದ್ದಲ್ಲಿ ಉರಿ, ನವೆ, ಬಾಧೆ, ಸೆಳೆತ ತಗ್ಗುತ್ತವೆ. ಈ ಔಷಧಿ ಯನ್ನು ಇದೇ ರೀತಿಯಲ್ಲಿ ತಿಗಣೆ, ಕಡತರ ಹುಳಗಳ ಕಡಿತಕ್ಕೆ ಬಳಸಬಹುದು.

**ಗ್ಯಾಸ್ಟ್ರಿಕ್ ಟ್ರಬಲ್**

ಇಂಗು ಹಾಗೂ ಜೀರಿಗೆಯನ್ನು ಸೇರಿಸಿ ಮಾಡಿದ ಪುಡಿ, ಶುಂಠಿಪುಡಿ ಸಾಸಿವೆಯನ್ನು ಕುಟ್ಟಿ ಮಾಡಿದ ಪುಡಿ, ಸೈಂಧವಲವಣ ಒಂದೊಂದನ್ನು 10 ಗ್ರಾಂನಂತೆ ಕಲಸಿ ಇಟ್ಟುಕೊಂಡು ಉದಯ- ಸಂಜೆ ಬಾರಿಯೊಂದಕ್ಕೆ ಒಂದು ಗ್ರಾಂ ಔಷಧಿಯನ್ನು 100 ಮಿ. ಲೀ. ತಾಜಾ ಮಜ್ಜಿಗೆಯಲ್ಲಿ ಕಲಸಿ ಸೇವಿಸುತ್ತಿದ್ದರೆ ತೇಗು, ಹೊಟ್ಟೆಬಿರಿತ, ಹೊಟ್ಟೆಯಲ್ಲಿ ಗ್ಯಾಸ್ ತುಂಬಿದಂತಿರುವುದು, ಜೀರ್ಣಾಂಗ ದೋಷಗಳು ತಗ್ಗುತ್ತವೆ.

**ಪಾರ್ಶ್ವವಾಯು ನೋವಿಗೆ**

ಇಂಗನ್ನು ಕರಗಿಸಿದ ಸ್ವಚ್ಛಂಧ ನೀರನ್ನು ಬಲಗಡೆ ಭಾಗಕ್ಕೆ ನೋವಿದ್ದರೆ ಎಡಭಾಗಕ್ಕೂ, ಎಡಭಾಗಕ್ಕೆ ನೋವಿದ್ದರೆ ಬಲಭಾಗಕ್ಕೂ 2-3 ಹನಿಗಳನ್ನು ಹಾಕಿ ಶಿಕ್ಕಬೇಕು.

**ಬಾಣಂತಿಯರು ಶೀಘ್ರವಾಗಿ ಗುಣಮುಖರಾಗಲು:**

ಇಂಗು, ಬೆಳ್ಳುಳ್ಳಿ, ತಟ್ಟೆಬೆಲ್ಲ ಒಂದೊಂದನ್ನು 25 ಗ್ರಾಂನಂತೆ ತೆಗೆದು ಕೊಂಡು ಮೆತ್ತಗೆ ನಾದಿ ಗುಲಗಂಜಿ ಗಾತ್ರದ ಮಾತ್ರೆಗಳನ್ನು ಮಾಡಿ ಸಂಗ್ರಹಿಸಿಟ್ಟು ಕೊಂಡು ನಿತ್ಯ ಬೆಳಗ್ಗೆ - ಸಂಜೆ ಒಂದು ಮಾತ್ರೆಯನ್ನು ನುಂಗಿ ನೀರನ್ನು ಹೆಚ್ಚಾಗಿ ಕುಡಿಯುತ್ತಿರುವುದರಿಂದ ಮತ್ತು ಹೆರಿಗೆ ಕಾಲದಲ್ಲಿ ಉಂಟಾದ ಆಯಾಸ, ಬಳಲಿಕೆ, ಮೈ ಕೈ ನೋವು, ನೀರಸತೆ, ನಿಶ್ಯಃಕ್ತಿ ತಗ್ಗಿ ಗರ್ಭಾಶಯವು ತ್ವರೆಯಾಗಿ ಸ್ವಸ್ಥಾನಕ್ಕೆ ಒಂದು ತೇಲಿಕೊಳ್ಳುತ್ತಾರೆ.

**ವಿವಿಧ ರೀತಿಯ ಅಸ್ವಸ್ಥತೆಗಳು**

ಇಂಗು, ಪಚ್ಚಕರ್ಪೂರ, ಜಾಜಿಕಾಯಿ ಪುಡಿ, ಜೀರಿಗೆಯನ್ನು ಕಲಿಸಿ ಮಾಡಿದ ಪುಡಿಯನ್ನು ಸಮಸಮ ವಾಗಿ ಕಲಿಸಿಟ್ಟುಕೊಂಡು ದಿನವೂ 3 ಅಥವಾ 4 ಸಾರಿ, ಬಾರಿಯೊಂದಕ್ಕೆ 500 ಮಿ.ಗ್ರಾಂ ಅಥವಾ ಒಂದು ಗ್ರಾಂ ವರೆಗೆ ತಕ್ಕಷ್ಟು ಜೇನಿನಲ್ಲಿ ಕಲಿಸಿ ಮೆತ್ತಗೆ ನಾದಿ ಗುಲಗಂಜಿ ಕಾಯಷ್ಟು ಮಾತ್ರೆಗಳು ಮಾಡಿ ದಿನವೂ 1-2 ಮಾತ್ರೆಗಳನ್ನು ಸೇವಿಸುತ್ತಿರಬೇಕು.

ಅಂತರ್ಗತ ರಕ್ತಪರಿಚಲನೆ, ಮಲದಲ್ಲಿ ಜೀವು ಬೀಳು ವುದು,ರಕ್ತಸ್ರಾವ ವ್ಯಾಧಿಗಳು, ಗರ್ಭಧಾರಣೆಯ ಸಮಯದಲ್ಲಿ ಇಂಗನ್ನು ಬಳಸಬಾರದು .

ಇಂಗನ್ನು ಔಷಧಕ್ಕಾಗಿ ಬಳಸುವಾಗ ಶುದ್ಧವಾದ ಇಂಗನ್ನು ಗುರುತಿಸಿ ಉಪಯೋಗಿಸಿದಲ್ಲಿ ಉತ್ತಮ ಫಲಿತಾಂಶಗಳು ಉಂಟಾಗುತ್ತವೆ.

ಶುದ್ಧವಾದ ಇಂಗಿನ ಪುಡಿಯನ್ನು ನೀರಿನಲ್ಲಿ ಹಾಕಿ ಕಲಿಸಿದಲ್ಲಿ ಅದು ಪೂರ್ತಿ ಕರಗಿ ನೀರಿನಂತಾಗುತ್ತದೆ.

ಬೆಂಕಿಕಡ್ಡಿಯಿಂದ ಸುಟ್ಟಲ್ಲಿ ಪೂರ್ತಿಯಾಗಿ ಸುಟ್ಟು ಹೋಗುತ್ತದೆ.

ರಜಃಪ್ರವರ್ತಿನಿ ವಟ, ಹಿಂಗ್ವಾಷ್ಟಕ ಚೂರ್ಣ, ಇಂಗು ಕರ್ಪೂರ, ಹಿಂಗು - ತ್ರಿಗುಣ ತೈಲದಂಥ ಪ್ರಖ್ಯಾತ ಆಯುರ್ವೇದ ಔಷಧಾಲಯಗಳ ತಯಾರಿಕೆಗಳಲ್ಲಿ, ಮೇಘನಾದ ಗುಳಿಕ, ಅಗತಿಯಾರ್ ಕುಜುಂಬುದ ತಮಿಳುನಾಡಿನ ಪ್ರಸಿದ್ಧ ಸಿದ್ಧ - ಔಷಧೀಯ ತಯಾರಿಕೆ ಗಳಲ್ಲಿಯೂ ಇಂಗನ್ನು ಬಳಸುತ್ತಾರೆ.

ತಿರುಮಲೆ ತಿರುಪತಿ ದೇವಸ್ಥಾನಗಳು. ತಿರುಪತಿ



# ಸಪ್ತಗಿರಿ

(ಆಧ್ಯಾತ್ಮಿಕ ಮಾಸಪತ್ರಿಕೆ)

## ಚಂದಾ ನಮೂದು ಪತ್ರ

ಹೆಸರು ಮತ್ತು ವಿಳಾಸ (ಬಿಡಿ ಬಿಡಿ ಅಕ್ಷರಗಳಲ್ಲಿ ಅರ್ಥ ವಾಗುವಂತೆ ಇಂಗ್ಲೀಷಿನಲ್ಲಿ ಬರಿಯಿರಿ. ಪಿನ್ ಕೋಡ್ ಜೊತೆಗೆ ದೂರವಾಣಿ ಸಂಖ್ಯೆ ತಪ್ಪದೇ ನಮೂದಿಸಿ) ______

(ಪಿನ್ ಕೋಡ್ ತಪ್ಪದೇ ನಮೂದಿಸಿ) ☐☐☐☐☐☐

( ದೂರವಾಣಿ ಸಂಖ್ಯೆಯನ್ನು ನಮೂದಿಸಿ) ☐☐☐☐☐☐☐☐☐☐

ಬೇಕಾಗುವ ಭಾಷೆ : ☐ ಕನ್ನಡ ☐ ತೆಲುಗು ☐ ಹಿಂದೀ ☐ ತಮಿಳು ☐ ಇಂಗ್ಲೀಷು ☐ ಸಂಸ್ಕೃತ

ವಾರ್ಷಿಕ / ಆಜೀವಚಂದಾ: ☐ ರೂ.60/- ☐ ರೂ.500/-

(ಸಂಸ್ಕೃತ ಸಪ್ತಗಿರಿಗಾಗಿ ಆಜೀವ ಚಂದಾ ಸ್ವೀಕರಿಸಲಾಗುವುದಿಲ್ಲ.)

ಚಂದಾ ಪುನರುದ್ಧರಣೆ :

(ಅ) ಚಂದಾ ನಂಬರು :

(ಆ) ಭಾಷೆ :

ಸಲ್ಲಿಸಿದ ಹಣ :

ಡಿ. ಡಿ. ಸಂಖ್ಯೆ :

(ಚೆಕ್ಕು, ಪಿ.ಓ.ಗಳನ್ನು ಸ್ವೀಕರಿಸುವುದಿಲ್ಲ )

ಸ್ಥಳ :

ದಿನಾಂಕ :

ಚಂದಾದಾರರ ಸಹಿ

ಸಪ್ತಗಿರಿ ವಾರ್ಷಿಕ ಚಂದಾ ರೂ.60/-, ಆಜೀವ ಚಂದಾ ರೂ.500/- ಗಳು ಡಿ.ಡಿ/ಎಂ.ಓ. ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ, ತಿ.ತಿ.ದೇ. ತಿರುಪತಿ. ಅವರ ಹೆಸರಿನಲ್ಲಿ ತೆಗೆಯಬೇಕು.

ಸಪ್ತಗಿರಿ ಚಂದಾದಾರರಾಗಿ ಸೇರ ಬಯಸುವವರು / ತಮ್ಮ ಚಂದಾವನ್ನು ಪುನರುದ್ಧರಿಸಿ ಕೊಳ್ಳುವವರು ಈ ಕೂಪನ್‌ನಲ್ಲಿ ಅಥವಾ ಬಿಳಿಹಾಳಿಯಲ್ಲಿ ಮೇಲೆ ತಿಳಿಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು.

ಎಂ.ಓ. ಕಳುಹಿಸುವವರು ಅದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳಿಸಿ.

ನಮ್ಮ ವಿಳಾಸ - "ಪ್ರಧಾನಸಂಪಾಕರು, ಸಪ್ತಗಿರಿ ಕಾರ್ಯಾಲಯ, ತಿ.ತಿ.ದೇ ಪ್ರೆಸ್ ಕಾಂಪೌಂಡ್, ಕೆ.ಟಿ.ರೋಡ್ಡು, ತಿರುಪತಿ - *517 507*".

## ಸಪ್ತಗಿರಿ ಚಂದಾದಾರರಲ್ಲಿ ವಿನಂತಿ

ಸಪ್ತಗಿರಿ ಚಂದಾದಾರರು ತಮ್ಮ ಚಂದಾ ಹಣವನ್ನು ಕಳುಹಿಸುವಾಗ (ಇ) ಎಂ.ಓ. / ಡಿ.ಡಿ.ಗಳನ್ನು ಕಳುಹಿಸುತ್ತಿರುವುದು ಸರಿಯಷ್ಟೆ. ಅಂಚೆಯಲ್ಲಿ ಪೋಸ್ಟಲ್ ಇ.ಎಂ.ಓ. ಕಳುಹಿಸುವಾಗ ಚಂದಾದಾರರು ಪೂರ್ತಿವಿಳಾಸ ವಿವರ ನೀಡಬೇಕು. ಈಗ "ಪೋಸ್ಟಲ್ ಇ.ಎಂ.ಓ" ವಿಧಾನದಲ್ಲಿ ಹಣ ಕಳುಹಿಸುವವರು ಬರೆಯುವ ಅವಕಾಶವೇ ಇರುವುದಿಲ್ಲವಾಗಿ, ನಿಮ್ಮ ವಿಳಾಸವನ್ನು ಅವರು ಕಂಪ್ಯೂಟರ್‌ನಲ್ಲಿ ಸಂಪೂರ್ಣವಾಗಿ ದಾಖಲುಮಾಡುವಂತೆ ನೋಡಿಕೊಳ್ಳಬೇಕು. ನಿಮ್ಮ ಪೂರ್ಣವಿಳಾಸ ಕಂಪ್ಯೂಟರಿನಲ್ಲಿ ದಾಖಲೆ ಆಗದಿದ್ದರೆ ಹಣ ಸೇರಿದರೂ ವಿಳಾಸವಿಲ್ಲದೆ ಸಪ್ತಗಿರಿ ನಿಮ್ಮನ್ನು ಸೇರುವುದಿಲ್ಲ.

ಅ. ತಾವು ಹಳೆಯ ಚಂದಾದಾರರಾಗಿದ್ದರೆ ಚಂದಾ ಪುನರುದ್ಧಾರ - ಪುನರ್ವೀಕರಿಸುವಾಗ ಇ.ಎಂ.ಓ / ಎಂ.ಓ ಮಾಡುವಾಗ ಚಂದಾ ಕ್ರಮ ಸಂಖ್ಯೆಯನ್ನು ತಪ್ಪದೆ ನಮೂದಿಸುವುದು.

ಆ. ಇದರಲ್ಲಿ ನಿಮ್ಮ ಊರಿನ ಪೂರ್ತಿ ವಿಳಾಸದೊಡನೆ ಅಂಚೆ ಪಿನ್ ಕೋಡ್ ಇರುವಂತೆ ನೋಡಿಕೊಳ್ಳಬೇಕು.

ಇ. ನಿಮಗೆ ಬೇಕಾದ ಭಾಷೆಯನ್ನು ಖಚಿತವಾಗಿ ನಮೂದಿಸಬೇಕು.

ಇವೆಲ್ಲ ವಿವರಗಳನ್ನೂ ಸರಿಯಾಗಿರುವಂತೆ ಮಾಡಿದ್ದೇ ಆದಲ್ಲಿ ಸಪ್ತಗಿರಿ ಖಚಿತವಾಗಿ ಶ್ರೀವೆಂಕಟೇಶ್ವರ ಸ್ವಾಮಿಯ ಅನುಗ್ರಹವನ್ನು ಹೊತ್ತು ನಿಮ್ಮ ಮನೆ ಸೇರುವುದು.

**ಸಪ್ತಗಿರಿ ಚಂದಾ ವಿವರಣೆಗಾಗಿ**

**0877- 2264359**

**0877-2264543**


*Edited and Published on behalf of T.T.Devasthanams by **Dr. K. Radha Ramana**, M.A., M.Phil., Phd., Chief Editor, T.T.D. and Printed at T.T.D. Press by **Sri R.V. Vijaya Kumar**, B.A., B.Ed., Dy. E.O. (Publications & Press), T.T.D. Press, Tirupati - 517 507.*

ತಿರುಮಲ ತಿರುಪತಿ ದೇವಸ್ಥಾನಗಳು

## ಅಪ್ಪಲಾಯಗುಂಟ

# ಶ್ರೀ ಪ್ರಸನ್ನವೆಂಕಟೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು

## 13-06-2019 ರಿಂದ 21-06-2019 ರ ವರೆಗೆ

| | | |
|---|---|---|
| **13-06-2019 ಗುರುವಾರ**<br>ಹಗಲು: ಧ್ವಜಾರೋಹಣ<br>ರಾತ್ರಿ: ದೊಡ್ಡಶೇಷವಾಹನ | **16-06-2019 ಭಾನುವಾರ**<br>ಹಗಲು: ಕಲ್ಪವೃಕ್ಷವಾಹನ<br>ರಾತ್ರಿ: ಸರ್ವಭೂಪಾಲವಾಹನ | **19-06-2019 ಬುಧವಾರ**<br>ಹಗಲು: ಸೂರ್ಯಪ್ರಭವಾಹನ<br>ರಾತ್ರಿ: ಚಂದ್ರಪ್ರಭವಾಹನ |
| **14-06-2019 ಶುಕ್ರವಾರ**<br>ಹಗಲು: ಚಿಕ್ಕಶೇಷವಾಹನ<br>ರಾತ್ರಿ: ಹಂಸವಾಹನ | **17-06-2019 ಸೋಮವಾರ**<br>ಹಗಲು: ಪಲ್ಲಕ್ಕಿಯಲ್ಲಿ ಮೋಹಿನೀಅವತಾರೋತ್ಸವ<br>ರಾತ್ರಿ: ಗರುಡವಾಹನ | **20-06-2019 ಗುರುವಾರ**<br>ಹಗಲು: ರಥೋತ್ಸವ<br>ರಾತ್ರಿ: ಅಶ್ವವಾಹನ |
| **15-06-2019 ಶನಿವಾರ**<br>ಹಗಲು: ಸಿಂಹವಾಹನ<br>ರಾತ್ರಿ: ಮುತ್ತಿನಚಪ್ಪರವಾಹನ | **18-05-2019 ಮಂಗಳವಾರ**<br>ಹಗಲು: ಹನುಮದ್ವಾಹನ<br>ಸಾಯಂಕಾಲ: ವಸಂತೋತ್ಸವ<br>ರಾತ್ರಿ: ಗಜವಾಹನ | **21-06-2019 ಶುಕ್ರವಾರ**<br>ಹಗಲು: ಚಕ್ರಸ್ನಾನ<br>ರಾತ್ರಿ: ಧ್ವಜಾವರೋಹಣ |





SAPTHAGIRI (KANNADA)
ILLUSTRATED MONTHLY
Published by
Tirumala Tirupati Devasthanams 25-05-2019
Regd. with the Registrar of Newspapers
under "RNI" No.10742,
Postal Regd.No.TRP/14 - 2018-2020
Licensed to post without prepayment
No.PMGK/RNP/WPP-04/2018-2020
ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರ ತೆಪ್ಪೋತ್ಸವ
13-06-2019 ರಿಂದ 17-06-2019 ರ ವರೆಗೆ